ಸಂಪುಟ: 13 Volume | ಸಂಚಿಕೆ: 295 Issue | ಪುಟಗಳು 08 Pages | ಸೋಮವಾರ 12 ಜನವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಇರುವೆಗಳು ಸಂಗ್ರಹಿಸಿದ ಕಾಳು, ಜೇನುನೊಣಗಳು ಕೂಡಿಟ್ಟ ಜೇನುತುಪ್ಪ, ಜಿಪುಣನ ಸಂಪತ್ತು ಇವೆಲ್ಲಾ ಸಂಪೂರ್ಣ ನಾಶವಾಗುವವು.

–ಸುಭಾಷಿತ

ಎಐಯುಟಿಯುಸಿಯಿಂದ ಅಧ್ಯಯನ ಶಿಬಿರ 6
ರಸ್ತೆ ಸುರಕ್ಷತಾ ನಿಯಮ ಪಾಲನೆ ಕಡ್ಡಾಯ 7
ಸರ್ಕಾರ ಮಾಡಬೇಕಾದ ಕಾರ್ಯ ಸಂಸ್ಥೆಯಿಂದ ನಿರ್ವಹಣೆ 8

## ನದಿ ಜೋಡಣೆ: ಜನಜಾಗೃತಿ ಸಭೆ

**ಹಾವೇರಿ:** ವರದಾ ಬೆಡ್ತಿ ನದಿ ಯೋಜನೆ ಜಾರಿಗೆ ಜನಜಾಗೃತಿ ಮೂಡಿಸಲು ಹಾವೇರಿ ಜಿಲ್ಲೆಯಲ್ಲೂ ಮಠಾಧೀಶರು, ಜನಪ್ರತಿನಿಧಿಗಳ ನೇತೃತ್ವದಲ್ಲಿ ಜನರನ್ನು ಸೇರಿಸಿ ಜಾಗೃತಿ ಸಮಾವೇಶ ಮಾಡಲಾಗುವುದು. ಗೊಂದಲ ನಿವಾರಣೆಗೆ ರಾಜ್ಯ ಸರ್ಕಾರ ಸಭೆ ಕರೆಯಲಿ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟಗಳನ್ನು ಉಳಿಸಿ, ವರದಾ–ಬೇಡ್ತಿ ವಿರೋಧಿಸಿ ಅಭಿಯಾನ ನಡೆಸುತ್ತಿರುವ ಕುರಿತು ಮಾಧ್ಯಮ ಪ್ರತಿನಿಧಿಗಳ ಕೇಳಿದ ಹಾವೇರಿಯಲ್ಲಿ ಪ್ರತಿಕ್ರಿಯಿಸಿದ ಅವರು, ವರದಾ ಬೆಡ್ತಿ ನದಿ ಜೋಡಣೆ ಯೋಜನೆ ಇಂದಿನದಲ್ಲ. 1994ರಿಂದಲೇ ಇದೆ ಎಂದಿದ್ದಾರೆ.

## ಊಟದಲ್ಲಿ ಹುಳು: ಸಸ್ಪೆಂಡ್

**ಕೊಪ್ಪಳ:** ತಾಲೂಕಿನ ಸರ್ಕಾರಿ ಶಾಲೆಯೊಂದರಲ್ಲಿ ಮಕ್ಕಳಿಗೆ ಬಡಿಸಲಾದ ಬಿಸಿ ಊಟದಲ್ಲಿ ಹುಳುಗಳು ಪತ್ತೆಯಾಗಿರುವ ಗಂಭೀರ ಪ್ರಕರಣಕ್ಕೆ ಸಂಬಂಧಿಸಿದಂತೆ, ಅಕ್ಷರ ದಾಸೋಹ ಯೋಜನೆಯ ಜಿಲ್ಲಾ ಅಧಿಕಾರಿ ಅನಿತಾ ಸೇರಿದಂತೆ ಒಟ್ಟು ಮೂವರು ಅಧಿಕಾರಿಗಳನ್ನು ಅಮಾನತುಗೊಳಿಸಿ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಹೊಸನಿಂಗಾಪುರ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಈ ಘಟನೆ ನಡೆದಿದ್ದು, ಬಿಸಿ ಊಟ ಸೇವಿಸುವ ವೇಳೆ ಮಕ್ಕಳ ತಟ್ಟೆಗಳಲ್ಲಿ ಹುಳುಗಳು ಕಂಡುಬಂದ ಹಿನ್ನೆಲೆಯಲ್ಲಿ ಪೋಷಕರು ಮತ್ತು ಸಾರ್ವಜನಿಕರಲ್ಲಿ ಆಕ್ರೋಶ ಉಂಟಾಗಿತ್ತು. ಶಾಲಾ ಆಡಳಿತ ಮಂಡಳಿ ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದು, ಇದೀಗ ಅಮಾನತು ಆದೇಶಕ್ಕೆ ಕಾರಣವಾಗಿದೆ.




ಇತ್ತೀಚೆಗೆ ನಮ್ಮನ್ನಗಲಿದ ಬೀದರ ಜಿಲ್ಲೆಯ ಹಿರಿಯ ಪತ್ರಕರ್ತರಾದ ನಾಗಶೆಟ್ಟಿ ಧರ್ಮಾಪುರ್ ಅವರಿಗೆ ಇಂದು ಬೀದರ ಜಿಲ್ಲಾ ಪತ್ರಿಕಾ ಭವನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ನಾಗಶೆಟ್ಟಿ ಧರ್ಮಾಪುರ್ ಅವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ನಿಷ್ಠೆ, ಸತ್ಯನಿಷ್ಠೆ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಅಚ್ಚಳಿಯದಂತೆ ಪಾಲಿಸಿದ ಹಿರಿಯ ಪತ್ರಕರ್ತರಾಗಿದ್ದರು.

## 470 ಗ್ರಾಂ ಚಿನ್ನಾಭರಣಗಳ ಪತ್ತೆ

**ಗದಗ:** ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ ಮನೆ ನಿರ್ಮಾಣಕ್ಕೆ ಅಡಿಪಾಯ ಅಗೆಯುವಾಗ ಚಿನ್ನದ ನಿಧಿ ಸಿಕ್ಕಿತ್ತು. ಪ್ರಾಮಾಣಿಕವಾಗಿ ನಿಧಿಯನ್ನು ಜಿಲ್ಲಾಡಳಿತಕ್ಕೆ ಒಪ್ಪಿಸಿದರೂ, ಆ ಕುಟುಂಬ ಈಗ ಬೀದಿಗೆ ಬಿದ್ದಿದೆ. ನಿಧಿ ಸಿಕ್ಕ ಸ್ಥಳವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿದೆ. ಇದರಿಂದ ಮನೆ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಂತಿದ್ದು, ಅಲ್ಲಿ ಮನೆ ವಾಸಿಸಲು ಸಾಧ್ಯವಾಗದೆ, ತಾಯಿ ಮತ್ತು ಚಿಕ್ಕ ಮಗನಿದ್ದ ಬಡ ಕುಟುಂಬಕ್ಕೆ ಆಶ್ರಯವಿಲ್ಲದಂತಾಗಿದೆ. ಐತಿಹಾಸಿಕ ಲಕ್ಕುಂಡಿಯಲ್ಲಿ ಗಂಗವ್ವ ರಿತ್ತಿ ಎಂಬುವರ ಮನೆಯ ಅಡಿಪಾಯ ತೋಡುವಾಗ ಅವರ ಪುತ್ರ ಪ್ರಜ್ವಲ್ ನಿಧಿಯ ತಂಬಿಗೆ ಪತ್ತೆ ಹಚ್ಚಿದ್ದ. ಇದರಲ್ಲಿ ಒಟ್ಟು 470 ಗ್ರಾಂ ಚಿನ್ನಾಭರಣಗಳು ಇರುವುದು ಕಂಡುಬಂದಿದೆ.

## ಸೋಮನಾಥ್ ಆಧ್ಯಾತ್ಮ ಶಕ್ತಿಗೆ ಸಾಕ್ಷಿ

• ಮಲ್ಲಮ್ಮ ನುಡಿ ವಾರ್ತೆ ಗುಜರಾತ್



ಪ್ರಧಾನಿ ನರೇಂದ್ರ ಮೋದಿ ಗುಜರಾತ್‌ನ ಸೋಮನಾಥ ದೇಗುಲದಲ್ಲಿ ಶೌರ್ಯ ಯಾತ್ರೆಯನ್ನು ನಡೆಸಿದ್ದಾರೆ. ದೇಗುಲದ ಸಂಘರ್ಷಮಯ ಇತಿಹಾಸವನ್ನು ನೆನಪಿಸಿಕೊಂಡು, ಭಾರತದ ನಾಗರಿಕತೆಯ ಶಕ್ತಿ, ಅದನ್ನು ಅಳಿಸಿಹಾಕುವ ಪ್ರಯತ್ನಗಳ ಹೊರತಾಗಿಯೂ, ಹೇಗೆ ಉಳಿದುಕೊಂಡಿದೆ ಎಂಬುದರ ಕುರಿತು ಪ್ರಬಲ ರಾಜಕೀಯ ಮತ್ತು ಸಾಂಸ್ಕೃತಿಕ ಸಂದೇಶವನ್ನು ನೀಡಿದ್ದಾರೆ. ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಸೋಮನಾಥವು ಭಾರತದ ಧೈರ್ಯ, ಸ್ಥಿತಿಸ್ಥಾಪಕತೆ ಮತ್ತು ಆಧ್ಯಾತ್ಮಿಕ ಶಕ್ತಿಯ ಜೀವಂತ ಸಾಕ್ಷಿಯಾಗಿದೆ ಎಂದಿದ್ದಾರೆ.

## ಶತಾಯುಷಿ ಆರೋಗ್ಯ ವಿಚಾರಿಸಿದ ಸಚಿವ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ವಯೋಸಹಜ ರೋಗದಿಂದ ಬಳಲುತ್ತಿರುವ ಮಾಜಿ ಸಚಿವ, ಶತಾಯುಷಿ ಭೀಮಣ್ಣ ಖಂಡ್ರೆ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ನಗರದ ಗುದಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.ಈ ನಡುವೆ ಆಸ್ಪತ್ರೆಗೆ ಭೇಟಿ ನೀಡಿದ ಸಚಿವ ಈಶ್ವರ್ ಖಂಡ್ರೆ ಅವರು ತಂದೆಯ ಆರೋಗ್ಯ ವಿಚಾರಿಸಿದ್ದಾರೆ. ಬಳಿಕ ಮಾತನಾಡಿದ ಈಶ್ವರ್ ಖಂಡ್ರೆಯವರು, ನಮ್ಮ ತಂದೆಯವರು ವಾರದಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ವೈದ್ಯರ ತಂಡ 24 ತಾಸು ಅವರನ್ನು ನಿಗಾ ವಹಿಸಿದೆ. ಇವತ್ತು ಅವರ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಇದೆ. ನಮ್ಮ ತಂದೆಯವರಿಗೆ 102 ವಯಸ್ಸಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದಿದ್ದಾರೆ.

# ದಳಪತಿ ಏಟು ಕೈ ಎದುರೇಟು

## ದಾಖಲೆ ಸಮೇತ ಚರ್ಚೆಗೆ ಸಿದ್ಧ: ಎಚ್ಡಿಕೆ | ಪಂಥಹ್ವಾನ ಸ್ವೀಕರಿಸುವೆ, ಎಲ್ಲಿಗೆ ಬರಬೇಕು?: ಡಿಕೆಶಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ವಿಬಿ ಜಿ ರಾಮ್ ಜಿ ಯೋಜನೆ ಕುರಿತು ಕಾಂಗ್ರೆಸ್ ಸೃಷ್ಟಿಸುತ್ತಿರುವ ಸುಳ್ಳುಗಳನ್ನು ಎದುರಿಸಲು ದಾಖಲೆ ಸಮೇತ ಬಹಿರಂಗ ಚರ್ಚೆಗೆ ನಾವು ಸಿದ್ಧರಿ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಿದ್ದಾರೆ. ಇದಕ್ಕೆ ಪ್ರತಿಯಾಗಿ ಡಿಸಿಎಂ ಡಿಕೆಶಿವಕುಮಾರ್ ಅವರು ಪ್ರತಿಕ್ರಿಯಿಸಿ, ಮನರೇಗಾ ಚರ್ಚೆಗೆ ವಿರೋಧ ಪಕ್ಷಗಳ ಪಂಥಹ್ವಾನ ಸ್ವೀಕರಿಸುವೆ, ಯಾವಾಗ, ಎಲ್ಲಿಗೆ ಬೇಕಾದರೂ ಸಿದ್ಧ. ಕುಮಾರಸ್ವಾಮಿ ಚರ್ಚೆಗೆ ಬಂದರೆ ಬಹಳ ಒಳ್ಳೆಯದು, ಅವರನ್ನು ಸ್ವಾಗತಿಸುವೆ ಎಂದು ಪ್ರತಿಸವಾಲು ಹಾಕಿದ್ದಾರೆ.

**ಸುಳ್ಳು ಹರಡುತ್ತಿದೆ:** ರಾಜ್ಯ ಬಿಜೆಪಿ ನಾಯಕರೊಂದಿಗೆ ಜಂಟಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ್ದ ಎಚ್ಡಿಕೆ, ಪ್ರಧಾನಿ ಮೋದಿ ಅವರ ವಿಕಸಿತ ಭಾರತ ಪರಿಕಲ್ಪನೆಯ ವಿಬಿ ಜಿರಾಮ್‌ಜಿ ಯೋಜನೆ ಬಗ್ಗೆ ಕಾಂಗ್ರೆಸ್ ಸುಳ್ಳುಗಳನ್ನು ಹರಡುತ್ತಿದೆ. ಈ ಯೋಜನೆ ಬಗ್ಗೆ ಬಹಿರಂಗ ಚರ್ಚೆಗೆ ಸಿದ್ಧರಿದ್ದೇವೆ ಎಂದಿದ್ದಾರೆ.

**ಸಮಯ ನಿಗದಿ ಮಾಡಿ:** ಬಹಿರಂಗ ಚರ್ಚೆಗೆ ಯಾವಾಗ ಸಮಯ ನಿಗದಿ ಮಾಡುತ್ತೀರಾ ಹೇಳಿ. ಇವತ್ತು ಸಂಜೆಯಿಂದಲೇ ಚರ್ಚೆಗೆ ಸಿದ್ಧ. ನರೇಗಾ ವಿಚಾರದಲ್ಲಿ ನನಗೆ ಚರ್ಚೆ ಮಾಡಲು ಯಾವ ತಯಾರಿಯೂ ಬೇಕಾಗಿಲ್ಲ. ಎಲ್ಲಾ ಮಾಹಿತಿಗಳು ನನ್ನ ಬೆರಳ ತುದಿಯಲ್ಲಿವೆ ಎಂದು ತಿಳಿಸಿದ್ದಾರೆ.



### ನೆಹರು ಕುಟುಂಬದ ಹೆಸರು

ಕಾಂಗ್ರೆಸ್ ಪಕ್ಷ ದೇಶದಲ್ಲಿ ಸುದೀರ್ಘ ಕಾಲ ಆಡಳಿತ ನಡೆಸಿದೆ. ಅವರು ಯಾವುದಾದರೂ ಪ್ರಮುಖ ಯೋಜನೆಗಳಿಗೆ ಮಹಾತ್ಮ ಗಾಂಧಿ ಅವರ ಹೆಸರನ್ನಿಟ್ಟಿದ್ದಾರೆಯೇ? ಎಲ್ಲಾ ಯೋಜನೆಗಳಿಗೆ ನೆಹರು ಕುಟುಂಬದ ಸದಸ್ಯರ ಹೆಸರುಗಳನ್ನು ಇಟ್ಟು ಗಾಂಧೀಜಿಗೆ ದ್ರೋಹ ಬಗೆದಿದ್ದಾರೆ. ಇವರಿಗೆ ಗಾಂಧೀಜಿ ಬಗ್ಗೆ ಮಾತನಾಡಲು ಯಾವುದೇ ನೈತಿಕತೆ ಇಲ್ಲ ಎಂದಿದ್ದಾರೆ ಎಚ್ಡಿಕೆ.

### ನರೇಗಾ ಯೋಜನೆಯಲ್ಲಿ ಕನಕಪುರ ನಂಬರ್ ಒನ್

ನರೇಗಾ ಯೋಜನೆಯಲ್ಲಿ ನಮ್ಮ ಕನಕಪುರ ತಾಲ್ಲೂಕಿನಲ್ಲಿ ಎಷ್ಟು ಕೆಲಸ ಆಗಿದೆ ಎಂದು ನಮಗೆ ಗೊತ್ತಿದೆ. ನರೇಗಾ ಯೋಜನೆ ಜಾರಿಯಲ್ಲಿ ಕನಕಪುರ ನಂಬರ್ 1 ಎಂದು ಬಿಜೆಪಿಯ ಕೇಂದ್ರ ಸರ್ಕಾರ ಪ್ರಶಸ್ತಿ ನೀಡಿದೆ. ಇದು ಇದು ಎಚ್ಡಿಕೆ, ಪ್ರಹ್ಲಾದ್ ಜೋಶಿ, ವಿಜಯೇಂದ್ರಗೆ ಗೊತ್ತಿದೆಯೋ ಇಲ್ಲವೋ. ಕನಕಪುರದಲ್ಲಿ ಅವ್ಯವಹಾರ ಆಗಿದೆ, ಇಲ್ಲ ವೇ ಎಂದು ಕೇಂದ್ರ ಹತ್ತು ತಂಡ ಕಳುಹಿಸಿ ತನಿಖೆ ಮಾಡಿಸಿದೆ ಎಂದಿದ್ದಾರೆ ಡಿಕೆಶಿ.

### ಕಾನೂನು ವಿರೋಧಿ ಕಾಯಿದೆ

ಕೇಂದ್ರ ಸರ್ಕಾರದ ಜಿ ರಾಮ್ ಜಿ ಕಾಯ್ದೆ ಸಂವಿಧಾನ ವಿರೋಧಿಯಾಗಿದೆ. ಕೇಂದ್ರದ ವಿಬಿ ಜಿ ರಾಮ್ ಜಿ ಕಾಯ್ದೆ ದಶರಥನ ರಾಮನೂ ಅಲ್ಲ, ಸೀತಾರಾಮನೂ ಅಲ್ಲ. ಅದು ನಾಥೂ'ರಾಮ' ಕಾಯ್ದೆ. ನಾಥೂರಾಮ ಎಂದರೆ ಅದು ಆರೆಸ್ಸೆಸ್ ತತ್ವದ ರಾಮ ಎಂದರ್ಥ. ಆರೆಸ್ಸೆಸ್ ತತ್ವಗಳು ಬಡವರ ವಿರುದ್ಧವಾಗಿರುತ್ತವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

### ಗ್ರಾಮೀಣ ಆರ್ಥಿಕತೆಗೆ ಹೊಡೆತ: ಸಚಿವ ಈಶ್ವರ ಖಂಡ್ರೆ

ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ (ನರೇಗಾ) ಯನ್ನು ಹಂತಹಂತವಾಗಿ ದುರ್ಬಲಗೊಳಿಸಿ, ಇದೀಗ ಅದನ್ನು ಸಂಪೂರ್ಣವಾಗಿ ರದ್ದುಪಡಿಸುವ ಉದ್ದೇಶದಿಂದ ವಿಬಿ ಜಿರಾಮ್‌ಜಿ ಹೆಸರಿಂದ ಯೋಜನೆಯನ್ನು ಜಾರಿ ಮಾಡುತ್ತಿರುವುದು ಗ್ರಾಮೀಣ ಭಾರತದ ಆರ್ಥಿಕತೆಗೆ ನೀಡುತ್ತಿರುವ ಭಾರೀ ಕೊಡಲಿಯೇಟು ಎಂದು ಸಚಿವ ಈಶ್ವರ ಖಂಡ್ರೆ ಖಂಡಿಸಿದ್ದಾರೆ.

## ಮಸೂದೆಯನ್ನು ಗೌರ್ನರ್ ತಿರಸ್ಕರಿಸಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಮಂಗಳೂರು



ದ್ವೇಷ ಭಾಷಣ ಪ್ರತಿಬಂಧಕ ಮಸೂದೆಯನ್ನು ರಾಜ್ಯಪಾಲರು ತಿರಸ್ಕರಿಸಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮಾಧ್ಯಮದವರ ಜೊತೆ ಮಾತನಾಡಿದ ಅವರು, ದ್ವೇಷ ಭಾಷಣ ಮಸೂದೆ ಸರ್ವಾನುಮತದಿಂದ ಅಂಗೀಕಾರವಾಗಿದ್ದು, ರಾಜ್ಯಪಾಲರು ಇದನ್ನು ವಾಪಸ್ ಕಳಿಸಿಲ್ಲ. ತಿರಸ್ಕರಿಸಿಯೂ ಇಲ್ಲ ಅಥವಾ ಅಂಕಿತವನ್ನೂ ಹಾಕಿಲ್ಲ. ಅವರು ಕರೆದಾಗ ಮಸೂದೆಯ ಬಗ್ಗೆ ವಿವರಣೆ ನೀಡಲಾಗುವುದು ಎಂದು ಹೇಳಿದ್ದಾರೆ.

ಬಳ್ಳಾರಿಯಲ್ಲಿ ಮಹರ್ಷಿ ವಾಲ್ಮೀಕಿ ಪ್ರತಿಮೆ ಉದ್ಘಾಟನೆ ಬಗ್ಗೆ ಹಾಕಿದ್ದ ಬ್ಯಾನರನ್ನು ತೆಗೆಯಬೇಕಾದ ಅಗತ್ಯವೇನಿತ್ತು? ಅದನ್ನು ತೆಗೆದದ್ದೆ ಘಟನೆಗೆ ಕಾರಣವಾಯಿತು. ಜನಾರ್ದನ ರೆಡ್ಡಿ, ಶ್ರೀರಾಮುಲು ಅವರು ಸ್ಥಾನ ಕಳೆದುಕೊಂಡಿದ್ದರ ಮೇಲಿನ ಅಸೂಯೆಯಿಂದ ನಡೆದುಕೊಳ್ಳುತ್ತಿದ್ದಾರೆಂದು ಆರೋಪಿಸಿದರು.

## ನಮ್ಮಲ್ಲಿ ಧರ್ಮ ಇದೆ ಅಧರ್ಮ ಇಲ್ಲ..!

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು




ರಾಜಕೀಯ ರಾಜಕೀಯವಾಗಿ ಮಾತನಾಡಲಿ. ಅದನ್ನು ಬಿಟ್ಟು ನಮ್ಮ ಕುಟುಂಬದ ಬಗ್ಗೆ ಮಾತನಾಡುವುದು ನಿನ್ನ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಬಾಬುಗೌಡ ಬಾದರ್ಲಿಗೆ ಆರ್ ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ ಎಚ್ಚರಿಸಿದ್ದಾರೆ.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಮ್ಮ ತಂದೆ–ತಾಯಿ ನಮಗೆ ಸಂಸ್ಕಾರ ಕಲಿಸಿದ್ದಾರೆ. ಅದಕ್ಕೆ ನಮ್ಮಲ್ಲಿ ಧರ್ಮದ ಗುಣ ಇದೆ ದ್ರೋಹದ ಗುಣ ಇಲ್ಲ. ಅದು ನಿನ್ನಲ್ಲಿದೆ ನಿನ್ನ ಮಾತಿನಲ್ಲಿದೆ. ಅದಕ್ಕೆ ನಮ್ಮ ಕುಟುಂಬವನ್ನು ತೇಜೋವಧೆ ಮಾಡಲು ಸಾಧ್ಯವಿಲ್ಲ ಎಂದು ಬಾಬುಗೌಡ ಅವರಿಗೆ ಸೋಮನಗೌಡ ಬಾದರ್ಲಿ ತಿರುಗೇಟು ನೀಡಿದ್ದಾರೆ. ಯಾರದು ಉಪ್ಪು ತಿಂದ ಯಾರು ದ್ರೋಹ ಮಾಡುತ್ತಾರೆ ಎಂಬುದು ನಿನ್ನ ಸಂಸ್ಕಾರ ಎಂದು ಕುಟುಕಿದ್ದಾರೆ.

## ತಲಾ ಆದಾಯಕ್ಕೆ ಗ್ಯಾರಂಟಿ ಕಾರಣ




• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

2026ರ ತಲಾ ಆದಾಯದಲ್ಲಿ ನಮ್ಮ ರಾಜ್ಯವು ದೇಶದಲ್ಲೇ ಮೊದಲ ಸ್ಥಾನದಲ್ಲಿರಲು ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳೇ ಕಾರಣ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ. ಡಾ.ಬಿ.ಅರ್. ಅಂಬೇಡ್ಕರ್ ವೈದ್ಯಕೀಯ ಮತ್ತು ಆಸ್ಪತ್ರೆ ಸಮೂಹ ಸಂಸ್ಥೆಯಲ್ಲಿ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ತ್ಯಾಗ ಮತ್ತು ಮಮತೆಯ ಪ್ರತೀಕ ಎನಿಸಿರುವ ಮಹಿಳೆಯರಿಗೆ ನಮ್ಮ ಸರ್ಕಾರವು ಗ್ಯಾರಂಟಿ ಯೋಜನೆಗಳ ಮೂಲಕ ಆರ್ಥಿಕ ಶಕ್ತಿ ತುಂಬಿದೆ. ಇದರಿಂದಾಗಿಯೇ ತಲಾ ಆದಾಯದಲ್ಲಿ ನಾವು ದೇಶದಲ್ಲೇ ನಂಬರ್ ಒನ್ ಸ್ಥಾನಕ್ಕೇರಿದ್ದೇವೆ ಎಂದು ಹೇಳಲು ಹೆಮ್ಮೆಯಾಗುತ್ತದೆ. ಯೋಜನೆಗಳಿಂದ ಒಂದು ಕುಟುಂಬಕ್ಕೆ ಸುಮಾರು ಐದು ಸಾವಿರದ ಐನೂರು ರೂಪಾಯಿ ಸಂದಾಯ ಆಗಲಿದೆ. ಇದರಿಂದ ಕುಟುಂಬಗಳು ಸಬಲವಾಗುವ ಜತೆಗೆ ರಾಜ್ಯದ ಆರ್ಥಿಕ ವಹಿವಾಟಿನಲ್ಲೂ ಏರಿಕೆ ಕಂಡಿದೆ ಎಂದಿದ್ದಾರೆ.

## ಯೋಗಿ ವೇಮನರ ಜನ್ಮೋತ್ಸವ 19ಕ್ಕೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಮಹಾಯೋಗಿ ವೇಮನರ ಜನ್ಮೋತ್ಸವವು ಜನವರೆ 19 ರಂದು ಜಿಲ್ಲಾಡಳಿ ಬೀದರ್ ವತಿಯಿಂದ ಅಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಶ್ರೀ ವೇಮನರ ಭಾವ ಚಿತ್ರಕ್ಕೆ ಪೂಜೆ ನೆರವೆರಿಸೆ. ತದನಂತರ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ರವರ ಸಮುದಾಯ



ಭವನದಲ್ಲಿ 11 ಗಂಟೆಗೆ ಅತಿ ವಿಜ್ರಂಭಣೆಯಿಂದ ಜಯಂತಿಯನ್ನು ಆಚರಿಸಲಾಗುವುದು ಎಂದು ಬೀದರ್ ರೆಡ್ಡಿ ಸಂಘದ ಜಿಲ್ಲಾಧ್ಯಕ್ಷ ಶಂಕರರೆಡ್ಡಿ ಚಿಟ್ಟಾ ರವರು ತಿಳಿಸಿದ್ದಾರೆ. ಶಂಕರ ರೆಡ್ಡಿ ಚಿಟ್ಟ ಅಧ್ಯಕ್ಷರು ಜಿಲ್ಲಾ ರೆಡ್ಡಿ ಸಮಾಜ ಬೀದರ್, ಸಂಗ್ರಾಮ ರೆಡ್ಡಿ ಅಧ್ಯಕ್ಷರು ಹೇಮರೆಡ್ಡಿ ಮಲ್ಲಮ್ಮ ಬ್ಯಾಂಕ್ ಬೀದರ್, ಸಂಜುರೆಡ್ಡಿ ತರ್ತರೆ ಅಧ್ಯಕ್ಷರು ಹೇಮಾ ವೇಮಾ ಮಿತ್ರ ಮಂಡಳಿ ಬೀದರ್. ಜಗನಾಥ್‌ರೆಡ್ಡಿ ವೆಂಕಟರೆಡ್ಡಿ ಬಾಬುರೆಡ್ಡಿ ಮೈಲೂರು ಗೋಪಾಲ್ ರೆಡ್ಡಿ ಕೃಷ್ಣರೆಡ್ಡಿ ವೆಂಕಟರೆಡ್ಡಿ ರವಿ ರೆಡ್ಡಿ ರಾಜ ರೆಡ್ಡಿ ಸೆಂಟರ್ ರೆಡ್ಡಿ ನರಸಿಂಹ ರೆಡ್ಡಿ ಫೆಂಟಾ ರೆಡ್ಡಿ ಫೆಂಟಾ ರೆಡ್ಡಿ ಬಲವಂತ ರೆಡ್ಡಿ ಮುಂತಾದವರು ಉಪಸ್ಥಿತರಿದ್ದರು.



## ಕೇರಳ ಭಾಷಾ ಮಸೂದೆ: ಕಳವಳ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕೇರಳದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಲಯಾಳಂ ಕಲಿಕೆ ಕಡ್ಡಾಯಗೊಳಿಸುವ ಮಸೂದೆಯನ್ನು ಸಿಎಂ ಸಿದ್ದರಾಮಯ್ಯ ತೀವ್ರವಾಗಿ ಖಂಡಿಸಿದ್ದಾರೆ.

ರೇಸ್ ಕೋರ್ಸ್ ರಸ್ತೆಯ KEB ಇಂಜಿನಿಯರ್ ಅಸೋಸಿಯೇಷನ್ ನಲ್ಲಿ ಕಾರ್ಯಕ್ರಮದ ನಂತರ ಮಾಧ್ಯಮದವರೊಂದಿಗೆ ಮಾತನಾಡಿ, ಕನ್ನಡ ಮಾಧ್ಯಮ ಶಾಲೆಗಳಲ್ಲಿ, ಕಾಸರಗೋಡಿನಂತಹ ಗಡಿ ಜಿಲ್ಲೆಗಳಲ್ಲಿ ಮಲಯಾಳಂ ಅನ್ನು ಪ್ರಥಮ ಭಾಷೆಯನ್ನಾಗಿ ಕಡ್ಡಾಯಗೊಳಿಸುವ ಪ್ರಸ್ತಾವಿತ ಮಲಯಾಳಂ ಭಾಷಾ ಮಸೂದೆಯ ಬಗ್ಗೆ ಕೇರಳ ಸಿಎಂಗೆ ಪತ್ರ ಬರೆದಿದ್ದು, ಕಾಯ್ದೆ ವಿರುದ್ಧ ಹೋರಾಟ ನಡೆಸಲಾಗುವುದು ಎಂದಿದ್ದಾರೆ.

> ವಿಧೇಯಕ ಅಂಗೀಕಾರವಾದರೆ, ಭಾಷಾ ಅಲ್ಪಸಂಖ್ಯಾತರು ಮತ್ತು ದೇಶದ ಬಹುತ್ವದ ಚೈತನ್ಯವನ್ನು ರಕ್ಷಿಸುವ ಸಲುವಾಗಿ ರಾಜ್ಯಕ್ಕೆ ಲಭ್ಯವಿರುವ ಪ್ರತಿಯೊಂದು ಸಾಂವಿಧಾನಿಕ ಹಕ್ಕನ್ನು ಚಲಾಯಿಸುವ ಮೂಲಕ ಕರ್ನಾಟಕ ಅದನ್ನು ವಿರೋಧಿಸುತ್ತದೆ.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

### ನಿಯೋಗ ಕೊಂಡೊಯ್ಯಲು ಮನವಿ

ಈ ಮಧ್ಯೆ, ಕೇರಳದ ಮಲೆಯಾಳಿ ಭಾಷಾ ಮಸೂದೆಯಿಂದ ಕಾಸರಗೋಡನ್ನು ಹೊರಗಿಡುವಂತೆ ಆ ರಾಜ್ಯದ ಮುಖ್ಯಮಂತ್ರಿಗಳನ್ನು ಒತ್ತಾಯಿಸುವುದರ ಜೊತೆಗೆ ರಾಷ್ಟ್ರಪತಿಯವರನ್ನು ಭೇಟಿ ಮಾಡಲು ನಿಯೋಗ ಕೊಂಡೊಯ್ಯುವಂತೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಸದಸ್ಯರು ಹಾಗೂ ಕಾಸರಗೋಡು ಕನ್ನಡಿಗರು ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

## ಕೇಂದ್ರದ ಜಿರಾಮ್‌ಜಿ ಯೋಜನೆ ಗ್ರಾಮೀಣ ಜನರಿಗೆ ಸಹಕಾರಿಯಾಗಿದೆ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

# ಪಠ್ಯದ ಜೊತೆಗೆ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಮಹತ್ವ ಕೊಡಬೇಕು:ಡಾ ಬಸವಲಿಂಗ ಪಟ್ಟದ್ದೇವರು



ಗಡಿಭಾಗ ಕಮಲನಗರದಲ್ಲಿ ಸಿಗುತ್ತಿರುವ ಶಿಕ್ಷಣದ ಗುಣಮಟ್ಟವನ್ನು ಕಂಡು ಮಹಾನಗರಗಳಿಗೆ ಹೋಗುತ್ತಿರುವ ಪಾಲಕರ ಸಂಖ್ಯೆ ಇಳಿಮುಖವಾಗಿದೆ. ಬಸವಲಿಂಗ ಪಟ್ಟದ್ದೇವರು ಸೊನ್ನೆಯಿಂದ ಪ್ರಾರಂಭ ಮಾಡಿದ ಶಿಕ್ಷಣ ಸಂಸ್ಥೆ ಇಂದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡುತ್ತಿದೆ".

–ಗುರುಬಸವ ಪಟ್ಟದ್ದೇವರು.
ಹಿರೇಮಠ ಸಂಸ್ಥಾನ ಪೀಠಾಧಿಪತಿ.

- **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಪಠ್ಯದ ಜೊತೆಗೆ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಮಹತ್ವ ಕೊಡಬೇಕು, ಶೈಕ್ಷಣಿಕ ಶಿಕ್ಷಣದ ಜೊತೆಯಲ್ಲಿ ಮಕ್ಕಳಿಗೆ ಸಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಜ್ಞಾನ ನೀಡಿದರೆ ಜೀವನ ಮೌಲ್ಯವನ್ನು ತಿಳಿದುಕೊಳ್ಳುತ್ತಾರೆ ಎಂದು ನಾಡೋಜ ಡಾ ಬಸವಲಿಂಗ ಪಟ್ಟದ್ದೇವರು ನುಡಿದರು.ಪಟ್ಟಣದಲ್ಲಿ ಗುರುಕಾರುಣ್ಯ ಪಬ್ಲಿಕ್ ಶಾಲೆ ಮತ್ತು ಗುರಪ್ಪ ಟೊಣ್ಣೆ ಪ್ರಾಥಮಿಕ ಶಾಲೆ ಹಾಗೂ ಚನ್ನಬಸವ ಪ್ರೌಢಶಾಲೆ ಸಂಯುಕ್ತ ಆಶ್ರದಲ್ಲಿ ಶುಕ್ರವಾರ ಮತ್ತು ಶನಿವಾರ ಆಯೋಜನೆ ಮಾಡಿದ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯ ವಹಿಸಿ ಮಾತನಾಡಿದರು.ಪಾಲಕರು ಮಕ್ಕಳ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನ ಹರಿಸತಕ್ಕದು. ಮನೆ ಮೊದಲ ಪಾಠಶಾಲೆಯಾಗಬೇಕು. ಸಂಸ್ಕಾರಯುತ ಮೌಲ್ಯಗಳಿಂದ ಮಕ್ಕಳ ಸರ್ವಾಗೀಣ ಪ್ರಗತಿ ಸಾಧ್ಯವಾಗುತ್ತದೆ ಎಂದು ಹೇಳಿದರು.ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ತಾಲ್ಲೂಕಾ ಪಂಚಾಯತ ಕಾರ್ಯನಿರ್ವಹಣಾ ಅಧಿಕಾರಿ ಹನುಮಂತರಾಯ ಕೌಟಗೆ ಮಾತನಾಡಿ, ಬರಿ ಅಂಕಗಳಿಗೆ ಬೆನ್ನು ಹತ್ತದೆ ಮಕ್ಕಳ ಮಾನಸಿಕ ಮತ್ತು ದೈಹಿಕ ಆರೋಗ್ಯದತ ಗಮನ ಹರಿಸಲು ಪಾಲಕರಿಗೆ ತಿಳಿಸಿದರು. ಮಕ್ಕಳಿಗೆ ಸರಿ ತಪ್ಪಿನ ಅರಿವು ಮೂಡಿಸಬೇಕು ಎಂದು ಹೇಳಿದರು.

ಕಾರ್ಯಕ್ರದಮದ ಅಧ್ಯಕ್ಷತೆಯನ್ನು ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀ ಮೋಹನ ರಡ್ಡಿ ವಹಿಸಿ ಮಾತನಾಡಿದರು. ಮಕ್ಕಳಿಗೆ ನಿಜಾ ಜೀವನದ ಅರ್ಥ ಮಾಡಿಸಿ ಸಮಾಜದಲ್ಲಿ ಒಬ್ಬ ಆದರ್ಶ ವ್ಯಕ್ತಿಯಾಗಿ, ಸಮಾಜಕ್ಕೆ ತನ್ನದೇಯಾದ ಕೊಡುಗೆ ನೀಡುವತ್ತ ಚಿತ್ತ ಹರಿಸುವಂತೆ ತಿಳಿಸಿದರು. ಮಕ್ಕಳು ಉತ್ಸಾಹ ಮತ್ತು ಉಲ್ಲಾಸನೋಡಿ ಸಂತಸ ವ್ಯಕ್ತಪಡಿಸಿದರು.ಶಾಲೆಯ ಆಡಳಿತಾಧಿಕಾರಿಗಳಾದ ಶ್ರೀ ಚನ್ನಬಸವ ಘಾಳೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷರಾದ ಸುಶೀಲಾ ಮಹೇಶ, ಪಿ.ಎಸ್.ಐ ಆಶಾ ರಾಠೋಡ ಕಮನಗರದ ,ಶಿವಾನಂದ ವಡ್ಡೆ,ಗುರುಶಾಂತ ಶಿವಣಕರ, ಅವಿನಾಶ ಶಿವಣಕರ, ರಾಜಕುಮಾರ ಬಿರಾದರ, ರಾಜಕುಮಾರ ಅಲಬಿಡಿ, ಸುರೇಶ ಸೋಲಾಪುರೆ, ಶಿವರಾಜ ಪಾಟೀಲ, ಭೀಮರಾವ ಶ್ರೀಗಿರೆ, ಪ್ರಕಾಶ ಟೋಣ್ಣೆ, ಸಂತೋಷ ಬಿರಾದಾರ, ಲಿಂಗಾನಂದ ಮಹಾಜನ,ಶ್ರೀರಂಗ ಪರಿಹಾರ, ಬ್ಯಾಂಕ ವ್ಯವಸ್ಥಾಪಕರಾದ ಸತೀಶಕುಮಾರ, ಮಹಾದೇವ ಮಡಿವಾಳ ಸೇರಿದಂತೆ ಶಾಲೆ ಸಿಬ್ಬಂದಿ, ಮಕ್ಕಳು ಹಾಗೂ ಸಾವಿರಾರು ಪಾಲಕರು ಸೇರಿದರು.

# ಗಮನ ಸೆಳೆದು ಸಂಸ್ಕ್ರತಿಕ ಕಾರ್ಯಕ್ರಮಗಳು



- **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಪಟ್ಟಣದಲ್ಲಿ ಗುರುಕಾರುಣ್ಯ ಪಬ್ಲೀಕ್ ಶಾಲೆ ಮತ್ತು ಗುರಪ್ಪ ಟೊಣ್ಣೆ ಪ್ರಾಥಮಿಕ ಶಾಲೆ ಹಾಗೂ ಚನ್ನಬಸವ ಪ್ರೌಢಶಾಲೆ ಸಂಯುಕ್ತ ಆಶ್ರದಲ್ಲಿ ಶುಕ್ರವಾರ ಮತ್ತು ಶನಿವಾರ ವಾರ್ಷೀಕ ಸ್ನೇಹ ಸಮ್ಮೇಳನದಲ್ಲಿ ಸಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆಯಿತು.ವಾರ್ಷಿಕೋತ್ಸವದ ಸ್ನೇಹ ಸಮ್ಮೇಳನ ಕಾರ್ಯಕ್ರಮದ ಪ್ರಯುಕ್ತ ಆಯೋಜನೆ ಮಾಡಿದ ವಿಶಾಲವಾದವೇದಿಕೆ, ಬಣ್ಣ ಬಣ್ಣದ ವಿದ್ಯುತ ದೀಪಗಳು,

ಡಿ. ಜೆ. ಹಾಡಿಗೆ ಪುಟಾಣಿ ಮಕ್ಕಳು ಮನ ಬಿಚ್ಚಿ ಕುಣಿದು ಕುಪ್ಪಲಿಸಿದು ನೋಡುಗರ ಕಣ್ಣು ತುಂಬುವಂತೆ ಇತ್ತು. ಮೈಕೊರೆಯುವ ಚಳಿಯಲ್ಲಿ ಖುರ್ಚಿ ಬಿಡದೆ ಪಾಲಕರು, ಸಾರ್ವಜನಿಕ ಕುಳಿತು ಆನಂದ ಪಡುವಂಥ ಅದ್ಭುತ ರೂಪಕ ಪ್ರದರ್ಶನ ನೀಡಿ ಸಮಾಜಕ್ಕೆ ನೈತಿಕ ಮೌಲ್ಯಗಳನ್ನು ಮನ ಮುಟ್ಟುವಂತೆ ಮಾಡಿದರು. ಪ್ರೌಢಶಾಲೆ ಮಕ್ಕಳಿಂದ ವಿಶೇಷ ಡಾನ್ಸ್ ಕಾರ್ಯಕ್ರಮ ಟಿ.ವಿ. ರಿಯಾಲಿಟಿ ಶೋದಲ್ಲಿ ಬರುವಂತೆ ಕ್ರೇನ್ ಬಳಸಿ ಆಕಾಶದಿಂದ ಭೂಮಿಗೆ ಬರುವಂತಹ ಸನ್ನಿವೇಶಗಳು ಎಲ್ಲರೂ ಚಪ್ಪಾಳೆ ತಟ್ಟುವಂತೆ ಮಾಡಿತು. ಹುಡುಗರು ಕೂಡು ಶಿವ ತಾಂಡವ, ಶಿವಾಜಿ ಮಹಾರಾಜರ ವೇಷ ಭೂಷಣ ತೊಟ್ಟು ಅದ್ಬುತ ಕಲಾ ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

# ಮಿಸ್ ಇಂಡಿಯಾ ಜೂನಿಯರ್‌ನಲ್ಲಿ ಬೀದರದ ಹೆಮ್ಮೆ ಕುಮಾರಿ ಪೂರ್ವಿ ಬಿರಾದಾರ ದ್ವಿತೀಯ ಸ್ಥಾನ



- **ಮಲ್ಲಮ್ಮ ನುಡಿ ವಾರ್ತೆ ಬೀದರ್ :**

ಕರ್ನಾಟಕದ ಕಿರೀಟವೆಂದು ಖ್ಯಾತಿಯಾದ ಬೀದರ ಜಿಲ್ಲೆಗೆ ರಾಷ್ಟ್ರಮಟ್ಟದಲ್ಲಿ ಮತ್ತೊಂದು ಹೆಮ್ಮೆಯ ಕ್ಷಣ ಒದಗಿ ಬಂದಿದೆ, ರಾಜಸ್ಥಾನದ ಜೈಪುರದಲ್ಲಿ ಇತ್ತೀಚೆಗೆ ನಡೆದ 13–14 ವರ್ಷದೊಳಗಿನ ಮಿಸ್ ಇಂಡಿಯಾ ಜೂನಿಯರ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಬೀದರ ಜಿಲ್ಲೆಯ ಕುಮಾರಿ ಪೂರ್ವಿ ಬಿರಾದಾರ ಅವರು ಗಮನಾರ್ಹ ಸಾಧನೆ ಮಾಡಿದ್ದು, ಒಟ್ಟು 172 ಸ್ಪರ್ಧಿಗಳ ನಡುವೆ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

ಸ್ಪರ್ಧೆಯ ಸಾಂಸ್ಕೃತಿಕ ವಿಭಾಗದಲ್ಲಿ ದ್ವಿತೀಯ ಸ್ಥಾನ ಹಾಗೂ ಗ್ರ್ಯಾಂಡ್ ಫಿನಾಲೆ ಸ್ಪರ್ಧೆಯಲ್ಲಿಯೂ ದ್ವಿತೀಯ ಸ್ಥಾನ ಪಡೆದು, ರಾಷ್ಟ್ರಮಟ್ಟದಲ್ಲಿ ಬೀದರ ಜಿಲ್ಲೆಯ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ. ವಿವಿಧ ರಾಜ್ಯಗಳಿಂದ ಭಾಗವಹಿಸಿದ್ದ ಸ್ಪರ್ಧಿಗಳ ನಡುವೆ ಆತ್ಮವಿಶ್ವಾಸ, ಸಾಂಸ್ಕೃತಿಕ ಅರಿವು, ವೇಷಭೂಷಣ, ಪ್ರಸ್ತುತಿ ಶೈಲಿ ಮತ್ತು ವೇದಿಕೆ ಮೇಲಿನ ನೈಪುಣ್ಯದಿಂದ ಪೂರ್ವಿ ಬಿರಾದಾರ ಅವರು ನ್ಯಾಯಮಂಡಳಿಯ ಹಾಗೂ ನೋಡುಗರ ಕಣ್ಮಣ ಸೆಳೆದು ಎಲ್ಲರ ಮೆಚ್ಚುಗೆಗೆ ಪಾತ್ರರಾದರು.ಈ ಸಾಧನೆಯೊಂದಿಗೆ ಪೂರ್ವಿ ಬಿರಾದಾರ ಅವರು ಬಾಲ ಪ್ರತಿಭೆಗಳ ಸಾಲಿನಲ್ಲಿ ತಮ್ಮದೇ ಆದ ಗುರುತು ಮೂಡಿಸಿದ್ದು, ಬೀದರ ಜಿಲ್ಲೆಯ ಯುವಜನತೆಗೆ ಪ್ರೇರಣೆಯಾಗಿ ನಿಂತಿದ್ದಾರೆ. ಅವರ ಯಶಸ್ಸಿಗೆ ಕುಟುಂಬದ ಬೆಂಬಲ, ತರಬೇತುದಾರರ ಮಾರ್ಗದರ್ಶನ ಹಾಗೂ ಶಾಲಾ ಶಿಕ್ಷಕರ ಸಹಕಾರ ಪ್ರಮುಖ ಪಾತ್ರವಹಿಸಿದೆ ಎಂದು ತಿಳಿಯಲಾಗಿದೆ.ಪೂರ್ವಿ ಬಿರಾದಾರ ಅವರ ಈ ಸಾಧನೆಗೆ ಜಿಲ್ಲೆನಿಂದ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಇತರೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಇನ್ನಷ್ಟು ಸ್ಪರ್ಧೆಗಳಲ್ಲಿ ಅವರು ಇನ್ನೂ ಹೆಚ್ಚಿನ ಎತ್ತರದ ಸಾಧನೆ ಮಾಡಲಿ ಎಂಬ ಶುಭಾಶಯಗಳು ವ್ಯಕ್ತವಾಗಿವೆ.

# ಗಡಿಭಾಗದಲ್ಲಿ ದಣಿವರಿಯದ ಸೇವೆ



ರಾಜ್ಯದಾದ್ಯಂತ ಅರಣ್ಯ ಇಲಾಖೆ ಸಚಿವರಾಗಿ ಈಶ್ವರ ಖಂಡ್ರೆ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಅರಣ್ಯ ಇಲಾಖೆಗೆ ಹೊಸ ಶಕ್ತಿ ತುಂಬಿದ್ದಾರೆ. ಅವರ ಪ್ರಯತ್ನ ದಿಂದ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ವಿಶ್ವಗುರು ಬಸವಣ್ಣನವರ ಉದ್ಯಾನ ನಿರ್ಮಾಣ ಆಗುತ್ತಿರುವುದು ಸಂತಸ ತರಿಸಿದೆ.

**ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

- **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಗಡಿಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ವಿವಿಧ ಕ್ಷೇತ್ರಗಳಲ್ಲಿ ಅವಿಶ್ರಾಂತವಾಗಿ ಸೇವೆ ಸಲ್ಲಿಸುತ್ತ ವಿಶಿಷ್ಟ ಛಾಪು ಮೂಡಿಸುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಕರಡ್ಯಾಳ ಚನ್ನಬಸವೇಶ್ವರ ಬಸವೇಶ್ವರ ಗುರುಕುಲ ಪ್ರಾಯೋಜಕತ್ವದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಅಮೃತ ಮಹೋತ್ಸವ ಸಮಿತಿ ವತಿಯಿಂದ ಶನಿವಾರ ಆಯೋಜಿಸಿದ್ದ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಿತಿ 2026ರ ದಿನದರ್ಶಿಕೆ ಬಿಡುಗಡೆಗೊಳಿಸಿ ಅವರು ಮಾತನಾಡಿದರು.ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ಅಧ್ಯಾತ್ಮಿಕ ಕ್ಷೇತ್ರಗಳಲ್ಲಿ ಪೂಜ್ಯರು ದಣಿವರಿಯದ ಸೇವೆ ಸಲ್ಲಿಸುತ್ತಿರುವುದು ಮಾದರಿ ಎನಸಿದೆ. ಅಂತಹ ಪೂಜ್ಯರು 75ರ ವಸಂತದಲ್ಲಿರುವುದು ನಮ್ಮೆಲ್ಲರಿಗೂ ಅತ್ಯಂತ ಹರ್ಷ ತರಿಸಿದೆ. ಪೂಜ್ಯರ ಅಮೃತ ಮಹೋತ್ಸವ ಎಲ್ಲರೂ ಸೇರಿ ಅರ್ಥಪೂರ್ಣವಾಗಿ ಆಚರಿಸೋಣ ಎಂದು ತಿಳಿಸಿದರು. ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು ಸಾನ್ನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ, ಕಲಬುರಗಿ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶರಣು ಮೋದಿ, ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಕಾರ್ಯದರ್ಶಿ ಸಂತೋಷ, ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ವಂಕೆ, ಉಪಾಧ್ಯಕ್ಷ ವಿಜಯಕುಮಾರ ರಾಜಭವನ,ಧನರಾಜ ಬಂಬುಳಗೆ, ರಾಜು ಜುಬರೆ, ಬಾಬು ಬೆಲ್ದಾಳ ಇದ್ದರು.ಖಂಡ್ರೆಗೆ ಗೌರವ ಸನ್ಮಾನ ಯಲಹಂಕದಲ್ಲಿ ವಿಶ್ವಗುರು ಬಸವಣ್ಣ ಹೆಸರಿನ ಜೀವವೈವಿಧ್ಯ ಉದ್ಯಾನ ನಿರ್ಮಾಣಕ್ಕೆ ರಾಜ್ಯ ಸರಕಾರದಿಂದ ಅನಮೋದನೆ ಕೊಡಿಸುವಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಕೊಡುಗೆ ದೊಡ್ಡದಿದೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು. ಸಚಿವ ಖಂಡ್ರೆ ಅವರನ್ನು ಗೌರವಿಸಿ ಅವರು ಮಾತನಾಡಿದರು.ವಿಶ್ವಕ್ಕೆ ಸಮಾನತೆ ಸಾರಿದ ವಿಶ್ವಗುರು ಬಸವಣ್ಣನವರ ಹೆಸರಿನಲ್ಲಿ ಸಿಲಿಕಾನ್ ಸಿಟಿ ಬೆಂಗಳೂರಿನ 153 ಎಕರೆ ಪ್ರದೇಶದಲ್ಲಿ ಉದ್ಯಾನ ನಿರ್ಮಾಣಕ್ಕೆ ಸರಕಾರ ಮುಂದಾಗಿರುವುದು ಸಂತಸ ತರಿಸಿದೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಪ್ರಯತ್ನ ದಿಂದ ಈ ಯೋಜನೆಗೆ ಅನಮೋದನೆ ದೊರೆತಿದೆ ಎಂದು ಹರ್ಷ ವ್ಯಕ್ತ ಪಡಿಸಿದರು.

# ಸಿರಸಂಗಿ ಲಿಂಗರಾಜ ದೇಸಾಯಿ ಜಯಂತಿ

## ಆಚರಿಸುವಂತಾಗಲಿ:ಸ್ಥಾವರಮಠ



**ಮಲ್ಲಮ್ಮ ನುಡಿ ಹುಣಸಗಿ:**

ಸಿರಸಂಗಿ ಲಿಂಗರಾಜ ದೇಸಾಯಿ ಅವರು ಕುಡು ಒಕ್ಕಲಿಗ ಸಮಾಜದವರಾಗಿದ್ದರೂ ಕೂಡಾ ಸರ್ವ ಸಮಾಜಕ್ಕೆ ತಮ್ಮ ಇಡೀ ಆಸ್ತಿಯನ್ನು ದಾನ ಮಾಡಿ ಕೃಷಿ. ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅಪಾರ ಕೊಡುಗೆಯನ್ನು ನೀಡಿದ್ದಾರೆ ಎಂದು ರೈತ ಮುಖಂಡ ಮಹೇಶ ಸ್ಥಾವರಮಠ ಹೇಳಿದರು.

ಪಟ್ಟಣದ ಜ್ಞಾನ ಸಿಂಚನ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಫೇಥ್ ಕಂಪ್ಯೂಟರ್ಸ ತರಬೇತಿ ಕೇಂದ್ರದಲ್ಲಿ ಸಿರಸಂಗಿ ಲಿಂಗರಾಜ ದೇಸಾಯಿ ಅವರ 165 ನೇ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿ, ಕೃಷಿ ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ ಅವರು ಆದರೆ ಅವರು ಮಾಡಿದ ಸಾಮಾಜಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗುರುತಿಸಿ ಸರಕಾರದ ಮಟ್ಟದಲ್ಲಿ ಅವರ ಜಯಂತಿಯನ್ನು ಆಚರಿಸುವಂತಾಗಲಿ ಎಂದು ಹೇಳಿದರು.

ನಂತರ ಆನಂದ ಬಾರಿಗಿಡದ ಮಾತನಾಡಿ ಲಿಂಗರಾಜ ದೇಸಾಯಿ ಅವರು ತಮ್ಮ ಆಸ್ತಿಯನ್ನೆಲ್ಲಾ ಕೆ.ಎಲ್.ಇ ಸಂಸ್ಥೆಗೆ ದಾನ ಮಾಡಿ ದಾನ ಶೂರರೆ– ಂದು ಕರೆಯಿಸಿಕೊಂಡಿದ್ದಾರೆ ಹಾಗಾಗಿ ಅವರು ಕೆ.ಎಲ್.ಇ ಸಂಸ್ಥೆಗೆ ನೀಡಿದ ಕೊಡುಗೆಯನ್ನು ಸ್ಮರಿಸುತ್ತಾ ಅವರ ಸಾಧನೆಗಳನ್ನು ನಾಡಿಗೆ ಪರಿಚಯಿಸುವಂತಾಗಲಿ ಎಂದರು.ಜ್ಞಾನ ಸಿಂಚನ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಬಸವರಾಜ ಅಗ್ನಿ ಅವರು ಮಾತನಾಡಿ, ಬದುಕಿದರೆ ಲಿಂಗರಾಜ ದೇಸಾಯಿ ಅವರಂತೆ ಬದುಕಬೇಕು ಅವರ ಆದರ್ಶ ತತ್ವಗಳನ್ನು ನಾವೆಲ್ಲರೂ ಅಳವಡಿಸಿಕೊಂಡು ಮುಂದಿನ ಸಮಾಜಕ್ಕೆ ಅವರ ಸಾಧನೆಗಳನ್ನು ಪರಿಚಯಿಸುವಂತಾಗಲಿ ಎಂದು ಹೇಳಿದರು.ಬಾಪೂಗೌಡ ಮೇಟಿ ಸ್ವಾಗತಿಸಿದರು.

ಮೌನೇಶ ವಂದಿಸಿದರು.ಈ ವೇಳೆ ಮಲ್ಲಣ್ಣ ಮೇಟಿ, ಬಸನಗೌಡ ಮೇಟಿ, ಹಣಮಂತ್ರಾಯಗೌಡ ಪೋಲಿಸ್ ಪಾಟೀಲ ಹಳ್ಳಿ, ಪ್ರಶಾಂತಸ್ವಾಮಿ ಹಿರೇಮಠ, ಬಸವರಾಜ ವೈಲಿ, ವಿನೋದ ದೊರೆ, ಬಸವರಾಜ ಮರೊಳ, ಅಪ್ಪಣ್ಣ ದೊರೆ, ರವಿಕುಮಾರ ಬಂಟನೂರ,ಸಿದ್ದನಗೌಡ ಬಿರಾದಾರ ವಿನಾಯಕ ಕುಲಕರ್ಣಿ ಸೇರಿದಂತೆ ಇತರರು ಇದ್ದರು.



ಹುಮನಾಬಾದ:ಪಟ್ಟಣದ ಥೇರ ಮೈದಾನದಲ್ಲಿ ಆಯೋಜಿಸಿ ಹಿಂದು ಸಮ್ಮೇಳನ ಕಾರ್ಯಕ್ರಮದಲ್ಲಿ ಶ್ರೀ ಸ್ವಂತ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾದ ಶಂಕರಲಿಂಗ ಮಹಾರಾಜರವರಿಗೆ ವಿನಾಯಕ ಮಂಡಾರವರು ಸನ್ಮಾನಿಸಿದರು. ಹಾಗೂ ಶಂಕರಲಿಂಗ ಮಹಾರಾಜರು ವಿನಾಕ ಮಂಡಾರವರಿಗೆ ಸನ್ಮಾನಿಸಿ ಆಶೀರ್ವಾದಿಸಿದರು. ಈ ಸಂದರ್ಭದಲ್ಲಿ ನಾಗರೆಡ್ಡಿ, ಘನಲಿಂಗ ರುದ್ರಮನಿ, ಚನ್ನಮಲ್ಯಯ್ಯ ದೇವರು, ಬಾಬುರಾವ ಪೋಚಂಪಳ್ಳಿ, ಜಾಜಿ, ಬಸವರಾಜ ಮಚಕೂರೆ, ಉಪಸ್ಥಿತರಿದ್ದರು.

## ಪುರಸಭೆ ಕಾರ್ಯಲಯ ಹುಮನಾಬಾದ

ಸಂಖ್ಯೆ:ಪುಸಹು/ಆರೋಗ್ಯ/ಚಿಆರ್-/2026-27 ದಿನಾಂಕ: 09.01.2026

**ತಿದ್ದುಪಡಿ ಪ್ರಕಟಣೆ**

ವಿಷಯ : ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಪಟ್ಟಣದಲ್ಲಿ ವಿಶೇಷ ಸ್ವಚತೆ ಹಾಗೂ ನೈರ್ಮಲ್ಯ ಕೆಲಸಕ್ಕಾಗಿ ನೈರ್ಮಲಿಕರಣ ಸಲಕರಣೆಗಳು ಹಾಗೂ ಸುರಕ್ಷ ಧರಿಸುಗಳು ಮತ್ತು ಖಾಸಗಿ ಕಾರ್ಮಿಕರನ್ನು ಪಡೆಯುವ ಬಗ್ಗೆ.

ಉಲ್ಲೇಖ: ಈ ಕಾರ್ಯಾಲಯದಿಂದ ಕೊಟೇಶನ ಆಹ್ವಾನಿಸಿದ ಪ್ರಕಟಣೆ ದಿನಾಂಕ: 06-01-2026 ಮತ್ತು 07-01-2026.

**************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖದನ್ವಯ ದಿನಾಂಕ: 06-01-2026 ರಂದು ಒಂದು ತಿಂಗಳ ಅವಧಿಗೆ ಖಾಸಗಿ ಕಾರ್ಮಿಕರಿಗೆ ಹೊರಗುತ್ತಿಗೆಯಲ್ಲಿ ನಿಯೋಜಿಸಲು ಹಾಗೂ ದಿನಾಂಕ: 07-01-2026 ರಂದು ನೈರ್ಮಲಿಕರಣ ಸಲಕರಣೆಗಳು ಹಾಗೂ ಸುರಕ್ಷ ಧರಿಸುಗಳು ದಾಸ್ತಾನು ಮಾಡಿಕೊಳ್ಳಲು ಕೊಟೇಶನ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿ ಇರುವ ಷರತ್ತುಗಳೊಂದಿಗೆ ಈ ಕೆಳಗಿನ ಷರತ್ತು ಸೇರ್ಪಡೆ ಮಾಡಿದೆ.

ಷರತ್ತು:- (05) ಖಾಲಿ ಫಾರಂ ಶೆಡ್ಯೂಲ್ ಶುಲ್ಕ ರೂ. 500/- ನಗದು ಅಥವಾ ಬ್ಯಾಂಕರ್ ಚೆಕ್ ಅರ್ಜಿಯೊಂದಿಗೆ ಸಲ್ಲಿಸಿ ಪಡೆಯಬಹುದು.

ಸಹಿ/-
ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ

# ವಾಣಿಜ್ಯ ತೆರಿಗೆ ಅಧಿಕಾರಿಗಳ ಸಂಘಕ್ಕೆ ನೇಮಕ: ಸನ್ಮಾನ



ಬೀದರ್‌ನಲ್ಲಿ ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘದ ವತಿಯಿಂದ ವಾಣಿಜ್ಯ ತೆರಿಗೆ ಇಲಾಖೆಗಳ ಅಧಿಕಾರಿಗಳ ಸೇವಾ ಸಂಘದ ನಿರ್ದೇಶಕರಾಗಿ ನಾಮ ನಿರ್ದೇಶನಗೊಂಡ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತ ಶಾಂತಕುಮಾರ ರಾಠೋಡ್ ಅವರನ್ನು ಸನ್ಮಾನಿಸಲಾಯಿತು

ಬೀದರ್: ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಸೇವಾ ಸಂಘಕ್ಕೆ ಕಲಬುರಗಿ ವಿಭಾಗದಿಂದ ನಿರ್ದೇಶಕರಾಗಿ ನಾಮ ನಿರ್ದೇಶನಗೊಂಡ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತ ಶಾಂತಕುಮಾರ ರಾಠೋಡ್ ಅವರನ್ನು ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘದಿಂದ ನಗರದಲ್ಲಿ ಶನಿವಾರ ಸನ್ಮಾನಿಸಲಾಯಿತು.ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪಾಂಡುರಂಗ ಬೆಲ್ದಾರ್ ಅವರು ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಸತ್ಕರಿಸಿದರು.

ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಬಳವಂತರಾವ್ ರಾಠೋಡ್, ಅನಿಲಕುಮಾರ ಶೇರಿಕಾರ್, ಚಂದ್ರಕಾಂತ ಚಿಕಲೆ, ವೀರಭದ್ರಪ್ಪ ಚಟ್ನಾಳೆ, ಜಗನ್ನಾಥ ಮೇತ್ರೆ, ನಾಗರಾಜ ಮತ್ತಿತರರು ಇದ್ದರು.

# ಸಚಿವ ಖಂಡ್ರೆ ಜನ್ಮದಿನ: 501 ಹೆಲ್ಮೆಟ್ ಉಚಿತ ವಿತರಣೆ 15ಕ್ಕೆ

- **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ 63ನೇ ಜನ್ಮದಿನದ ನಿಮಿತ್ತ ವಿ.ಎನ್. ಅಪ್ಪೆ (ವೈಜಿನಾಥ ನಿರ್ಮಲಾ ಅಪ್ಪೆ) ಫೌಂಡೇಷನ್



ನಗರದಲ್ಲಿ ಜ. 15 ರಂದು ಬೈಕ್ ಸವಾರರಿಗೆ 501 ಹೆಲ್ಮೆಟ್ ಉಚಿತವಾಗಿ ವಿತರಿಸಲಿದೆ.

ಬೆಳಿಗ್ಗೆ 11.30ಕ್ಕೆ ಅಂಬೇಡ್ಕರ್ ವೃತ್ತದ ಬಳಿ ನಡೆಯುವ ಕಾರ್ಯಕ್ರಮದಲ್ಲಿ ಹೆಲ್ಮೆಟ್ ವಿತರಣೆ ಮಾಡಲಾಗುವುದು ಎಂದು ವಿ.ಎನ್. ಅಪ್ಪೆ ಫೌಂಡೇಷನ್ ಅಧ್ಯಕ್ಷರೂ ಆದ ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ ತಿಳಿಸಿದ್ದಾರೆ.ಬಹಳಷ್ಟು ಅಪಘಾತ ಪ್ರಕರಣಗಳಲ್ಲಿ ಹೆಲ್ಮೆಟ್ ಧರಿಸದ ಕಾರಣಕ್ಕೆ ಬೈಕ್ ಸವಾರರು ಸಾವನ್ನಪ್ಪುತ್ತಿದ್ದಾರೆ.

ಹೆಲ್ಮೆಟ್ ಧರಿಸುವುದರಿಂದ ಜೀವ ಉಳಿಯುತ್ತದೆ. ಹೀಗಾಗಿ ಬೈಕ್ ಸವಾರರಿಗೆ ಹೆಲ್ಮೆಟ್ ವಿತರಿಸಲಾಗುತ್ತಿದೆ ಎಂದು ಹೇಳಿದ್ದಾರೆ.ಸಚಿವ ಖಂಡ್ರೆ ಅವರ ಜನ್ಮದಿನ ಪ್ರತಿ ವರ್ಷ ವಿವಿಧ ಸಾಮಾಜಿಕ ಚಟುವಟಿಕೆಗಳೊಂದಿಗೆ ಆಚರಿಸಲಾಗುತ್ತಿದೆ. ಕಳೆದ ವರ್ಷ 251 ಹೆಲ್ಮೆಟ್ ವಿತರಿಸಲಾಗಿತ್ತು. ಈ ವರ್ಷ 501 ಹೆಲ್ಮೆಟ್ ವಿತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.



ಭಾಲ್ಕಿ. ತಾಲೂಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ (ರಿ ) ವತಿಯಿಂದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿಯಲ್ಲಿ ಡಾ. ಶೈಲಜಾ ತಳವಾಡೆ ಮಹಿಳೆಯರಲ್ಲಿ ಕಂಡುಬರುವ ಗರ್ಭಕೋಶದ ಮತ್ತು ಸ್ತನ ಕ್ಯಾನ್ಸರ್ ಬಗ್ಗೆ ವಿವರವಾದ ಮಾಹಿತಿ ನೀಡಿ ವ್ಯಾಕ್ಸಿನ್ ಅನ್ನು ಹೇಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಪೌಷ್ಟಿಕಾಂಶಗಳು ಹೇಗೆ ಆಹಾರದಲ್ಲಿ ಸಿಗುತ್ತವೆ. ಹೇಗೆ ದಿನನಿತ್ಯದಲ್ಲಿ ಬಳಸಬೇಕು ಎಂಬುದರ ಬಗ್ಗೆ ತಿಳಿಸಿದರು.



ಭಾಲ್ಕಿ. ತಾಲೂಕಿನ ಹಲಬರ್ಗಾ ವಲಯದ ರಾಚೋಟೇಶ್ವರ ಸ್ವಾಮೀಜಿಯವರಿಗೆ ಹೊಸ ವರ್ಷದ ಡೈರಿ ಹಾಗೂ ಶುಭಾಶಯಗಳು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಸಂತೋಷ್ ಟಿ ಎನ್ ಕೋರಿದರು. ಇನ್ನಿತರರು ಉಪಸ್ಥಿತರಿದ್ದರು.

# ವಯೋ ವೃದ್ಧರಿಗೆ ಸರಕಾರಿ ಸೌಲಭ್ಯ ಕಲ್ಪಿಸಿ: ರಾಮು ದೊರೆ.

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಗ್ರಾಮದಲ್ಲಿ ವಯೋ ವೃದ್ಧರ ಸಂಖ್ಯೆ ಹೆಚ್ಚಾಗಿದೆ, ಮನೆಯಲ್ಲಿ ಸ್ಥಾನಮಾನ ಗೌರವ ಧಕ್ಕೆ ಉಂಟು ಮಾಡುತ್ತಿದೆ ಆದ್ದರಿಂದ ಸರ್ಕಾರದ ಸೌಲಭ್ಯವನ್ನು ದೊರಕಿಸಿಕೊಟ್ಟರೆ ಅವರ ಜೀವನ ರೂಪಿಸಿಕೊಳ್ಳಲು ಉತ್ತಮ ಮಾರ್ಗವಾಗಿದೆ ಎಂದು ಜಟಿ ಎಸ್.ಡಿ.ಎಂ.ಸಿ ಅಧ್ಯಕ್ಷ ರಾಮು ದೊರೆ ಗೌಡಗೇರ ಹೇಳಿದರು. ತಾಲೂಕು ಕಂದಾಯ ಇಲಾಖೆ ವತಿಯಿಂದ ಗೌಡಿಗೇರದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪಿಂಚಣಿ ಆಂದೋಲನ ಮತ್ತು ಪೌತಿ ಆಂದೋಲನ ಕಾರ್ಯಕ್ರಮದ ಉದ್ದೇಶಿಸಿ ಮಾತನಾಡಿ ಹೇಳಿದರು. ವಯೋ ವೃದ್ಧರು ತಮ್ಮ ಕುಟುಂಬದ ಮೇಲೆ ಅವಲಂಬಿತರಾಗಿದ್ದು, ಅಸಹಾಯಕ ಮತ್ತು ವಯಸ್ಸಾಗಿರುವುದರಿಂದ ಕೆಲಸ ಮಾಡಲು ವಿಫಲರಾಗಿದ್ದಾರೆ ಕುಟುಂಬದಲ್ಲಿ ಅವಮಾನಗಳನ್ನು ಸಹಿಸಿಕೊಂಡು ಜೀವನ ಸಾಗಿಸುವದು ಅವರ ಪರಿಸ್ಥಿತಿಯಾಗಿದೆ, ಸರ್ಕಾರದಿಂದ ಬರುವ ಪಿಂಚಣಿ ಸೌಲಭ್ಯವನ್ನು ನೀಡಿದ್ದಾರೆ, ತಮ್ಮ ವೈಯಕ್ತಿಕ ಹಣಕಾಸಿನ ವ್ಯವಹಾರಗಳನ್ನು ಮಾಡಿಕೊಂಡು ಸ್ವಲ್ಪಮಟ್ಟಿಗೆ ಜೀವನ ಸುಧಾರಿಸಿಕೊಳ್ಳಲು ಉತ್ತಮ ಸೌಲಭ್ಯ ವಾಗಿದೆ ಇದನ್ನು ಪ್ರತಿಯೊಬ್ಬರು ಬಳಸಿಕೊಳ್ಳಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಬೆಳಿಚಕ್ರ ಉಪ ತಹಶೀಲ್ದಾರ್ ಮಲ್ಲಪ್ಪ, ಕಂದಾಯ ನಿರೀಕ್ಷಿತರು ಬಸವರಾಜ್, ಗ್ರಾಮದ ಆಡಳಿತ ಅಧಿಕಾರಿ ಶ್ರೀಮತಿ ಸುಷ್ಮಾ, ಶ್ರೀಮತಿ ನಾಗರತ್ನ, ಸರ್ಕಾರಿ ಶಾಲೆಯ ಮುಖ್ಯ ಗುರು ಪರಶುರಾಮ್ ಮ್ಯಾಗೇರಿ, ಗ್ರಾಮ ಯುವ ಮುಖಂಡ ಬಸವರಾಜ್ ಕೊಳೆರ್ ಹಾಗೊ ಗ್ರಾಮದ ಹಿರಿಯರು ಇದ್ದರು.




# ಹಿಂದುಳಿದ ಮಕ್ಕಳಿಗೆ ಪ್ರೇರಣೆ ನೀಡಿ: ವೀರಪ್ಪ ಕನ್ನಳ್ಳಿ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮಕ್ಕಳಲ್ಲಿ ಹಲವಾರು ಕಲೆಗಳು ಇರುತ್ತವೆ, ಅದರಲ್ಲಿ ಹಿಂದುಳಿದ ಮಕ್ಕಳಿಗೆ ಈ ಹಬ್ಬವು ಸಹಾಯಕವಾಗಿದೆ ಯಾಕೆಂದರೆ ಓದುಬರಹ ಗಣಿತದ ಮೂಲ ಕ್ರಿಯೆಗಳು ಮಕ್ಕಳಿಗೆ ಹಲವಾರು ಚಟುವಟಿಗಳ ಮೂಲಕ ವಿವರಿಸಿ ಹೇಳಿದಾಗ ಮಕ್ಕಳು ಕಲಿಕೆಯನ್ನು ಸಾಧಿಸುತ್ತವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವೀರಪ್ಪ ಕನ್ನಳ್ಳಿ ಹೇಳಿದರು.

ಜಿ.ಎಂ.ಕೆ.ಪಿ.ಎಸ್. ಶಾಲೆಯಲ್ಲಿ ಯಾದಗಿರಿ ನಗರ ಕ್ಲಸ್ಟರ್ ಕಲಿಕಾ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಕ್ಷೇತ್ರ ಸಮನ್ವಾಯಧಿಕಾರಿ ಜಗದೀಶ ಸಜ್ಜನ್ ಮಕ್ಕಳು ತಮ್ಮ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಕಲಿಕೆಯನ್ನು ದೃಡಗೊಳಿಸಲು ಇಂತಹ ಹಬ್ಬಗಳು ಸಹಾಯಕವಾಗಿವೆ ಎಂದು ಹೇಳಿದರು. ಸಮೂಹ ಸಂಪನ್ಮೂಲ ವ್ಯಕ್ತಿ ಮಲ್ಲಪ್ಪ ಮೇಗೇರಿ ಮಾತನಾಡಿ ತಮ್ಮ ವೈಯಕ್ತಿಕ ಜೀವನವನ್ನು ಪರಿಚಿಸಿಕೊಂಡು, ಶಿಕ್ಷಣದಿಂದ ವಂಚಿತಗೊಂಡ, ಹಿಂದುಳಿದ ಮಕ್ಕಳನ್ನು ಗುರುತಿಸಿ, ಅಂತ ಮಕ್ಕಳಿಗೆ ಉತ್ತಮ ಗುಣಮಟ್ಟ ಶಿಕ್ಷಣ ನೀಡಲಾಗುವುದು, ಮಕ್ಕಳನ್ನು ಉತ್ತಮ ಶಿಕ್ಷಣವಂತರನ್ನಾಗಿ ನಾಡಿನ ಪ್ರಜೆಯಾಗಿ ಶೃತಿ ಸೃಷ್ಟಿಸುವ ಉದ್ದೇಶದಿಂದ ಈ ಕಲಿಕಾಹಬ್ಬವನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ಶಾಲೆಯ ಮುಖ್ಯ ಗುರು ಬಸವರಾಜ ವಹಿಸಿದರು, ಶಿಕ್ಷಣ ಸಂಯೋಜಕರು ಕಿಶನ್ ಪವರ್, ಎಸ್.ಡಿ.ಎಂ.ಸಿ. ಅಧ್ಯಕ್ಷ ವೆಂಕಟೇಶ್ ಕುಮಾರ್, ಸಮೂಹ ಸಂಪನ್ಮೂಲ ವ್ಯಕ್ತಿ ರಾಥೋಡ್ ಮಲ್ಲಪ್ಪ ಮ್ಯಾಗೇರಿ, ವಿಷಯ ಪರಿವೀಕ್ಷಕ ಹನಮಂತ, ತಾಲೂಕ ದೈಹಿಕ ಶಿಕ್ಷಣ ಅಧಿಕಾರಿಗಳು ಅನಿಲ್ ಕುಮಾರ್, ಸಿ.ಅರ್.ಪಿ. ಉರ್ದು ಬಂದೇನವಾಸಿ, ಸಿ.ಅರ್.ಪಿ. ಅಶೋಕ್ ಕುಮಾರ್, ವಿನೋದ್ ಕುಮಾರ್, ಅಕ್ಕಮಹಾದೇವಿ, ಚಂದಪ್ಪ ಜಾದವ್,

ಶಿಕ್ಷಕಿಯರಾದ ಶ್ರೀಮತಿ ಬಸಮ್ಮ, ಶ್ವೇತಾ, ಸವಿತಾ, ಮಂಜುಳಾ, ಭಾಗ್ಯಲಕ್ಷ್ಮಿ, ಕವಿತಾ, ಈಶ್ವರಮ್ಮ, ಮನೋರಂಜನಿ, ಸುಮಂಗಳ, ವಿಜಯಲಕ್ಷ್ಮಿ, ನಜಮುನಿಸಾಪೂನಂ, ಸುರೇಖಾ, ಫಿರ್ದೋಸ್ ಬೇಗಾಮ್, ದೇವ್ ಜಿ ರಾಥೋಡ್, ಅಶೋಕ್, ಸಹದೇವ್, ಸನ್ಲಿಂಗಪ್ಪ, ಫಯಾಝು ಅಹಮ್ಮದ್ ಮುಂತದವರು ಇದ್ದರು. ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮವನ್ನು ಶ್ರೀಮತಿ ಬಸಮ್ಮ ನಿರೂಪಿಸಿ, ಸಹದೇವ ವಂದಿಸಿದ್ದರು.



# ಸಹಕಾರಿ ಸಂಘದ ನೂತನ ಕಟ್ಟಡ

## ಉದ್ಘಾಟನಾ ಸಮಾರಂಭ

• ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:

ಪಟ್ಟಣದ ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ.ಇದರ ನೂತನ ಕಟ್ಟಡದ ಉದ್ಘಾಟನೆ ಜನವರಿ12 ರಂದು ನಡೆಯಲಿದೆ. ಅಂದು ಬೆಳಿಗ್ಗೆ 10–30 ಘಂಟೆಗೆ ಎಪಿಎಂಸಿ ಆವರಣದಲ್ಲಿರುವ ಸಂಘದ ನೂತನ ಕಟ್ಟಡದ ಉದ್ಘಾಟನೆ ಜರುಗುವುದು.



ನಂತರ ಮು.11–00 ಘಂಟೆಗೆ ಸ್ಥಳೀಯ ಎಪಿಎಂಸಿ ಸಭಾಭವನದಲ್ಲಿ ಉದ್ಘಾಟನಾ ಸಮಾರಂಭ ಜರುಗಲಿದ್ದು ಇದರ ದಿವ್ಯ ಸಾನಿಧ್ಯವನ್ನು ವಿರಕ್ತಮಠ ಇಂಗಳೇಶ್ವರದ ಮ.ನಿ.ಪ್ರ.ಜಗದ್ಗುರು ಡಾ.ಸಿದ್ಧಲಿಂಗ ಸ್ವಾಮಿಗಳು ಹಾಗೂ ತಾಳಿಕೋಟಿ ಶ್ರೀ ಖಾಸ್ಗತೇಶ್ವರ ಮಠದ ಬಾಲ ಶಿವಯೋಗಿ ಶ್ರೀ ಸಿದ್ಧಲಿಂಗ ದೇವರು ವಹಿಸುವರು. ಜವಳಿ,ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ ನೂತನ ಕಟ್ಟಡ ಉದ್ಘಾಟಿಸುವರು. ಕೆ ಎಸ್ ಡಿ ಎಲ್ ಅಧ್ಯಕ್ಷ,ಶಾಸಕ ಅಪ್ಪಾಜಿ ನಾಡಗೌಡರು ಸೇಫ್ ಲಾಕರ್ ಉದ್ಘಾಟಿಸುವರು. ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಕಾಶೀನಾಥ ಎಸ್.ಮುರಾಳ ಅಧ್ಯಕ್ಷತೆ ವಹಿಸುವರು. ವಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ ಎಸ್ ಪಾಟೀಲ(ಯಾಳಗಿ) ಪ್ರಾಸ್ತಾವಿಕವಾಗಿ ಮಾತನಾಡುವರು. ಮುಖ್ಯಅತಿಥಿಗಳಾಗಿ ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ,ಮಾಜಿ ಶಾಸಕರಾದ ಎ.ಎಸ್.ಪಾಟೀಲ(ನಡಹಳ್ಳಿ), ಸೋಮನಗೌಡ ಪಾಟೀಲ ಸಾಸನೂರ,ಕ.ರಾ.ಸೌ.ಸಂ.ಸ.ನಿ. ಅಧ್ಯಕ್ಷ ಜಿ.ನಂಜನಗೌಡ ಸಿ.ಎ. ಕ.ರಾ.ಸೌ.ಸಂ.ಸ.ನಿ.ನಿರ್ದೇಶಕ ರಾಮನಗೌಡ ಬಿ.ಪಾಟೀಲ(ಯತ್ನಾಳ), ಸಹಕಾರ ಸಂಘಗಳ ಸಹಾಯಕ ನಿಬಂಧಕ ಚೇತನ್ ಭಾವಿಕಟ್ಟಿ ಆಗಮಿಸುವರು.ಸಹ ಅತಿಥಿಗಳಾಗಿ ಎಪಿಎಂಸಿ ಮಾಜಿ ಅಧ್ಯಕ್ಷರಾದ ಗುರು ತಾರನಾಳ, ಮಲ್ಲಣ್ಣ ಯಾತಗಿರಿ,ವಿ.ವಿ.ಸಂಘದ ಅಧ್ಯಕ್ಷ ವೀರಪಾಕ್ಷಯ್ಯ ಸಿ.ಹಿರೇಮಠ, ಸಹಕಾರಿ ಬ್ಯಾಂಕ್ ಅಧ್ಯಕ್ಷ ಕೆ.ಸಿ. ಸಜ್ಜನ, ಎಪಿಎಂಸಿ ಕಾರ್ಯದರ್ಶಿ ಆರ್ ಎಸ್ ರಾಠೋಡ ಆಗಮಿಸಲಿದ್ದು, ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿರುವರು ಎಂದು ಪ್ರಭಾರ ಮುಖ್ಯ ಕಾರ್ಯನಿರ್ವಾಹಕ ಮುತ್ತುಗೌಡ ಎಸ್.ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಐಕ್ಯತೆಯೇ ರಾಷ್ಟ್ರದ ಬಲ: ಕಮರುದ್ದಿನ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಭಾರತದ ಪ್ರತಿಯೊಬ್ಬ ಪ್ರಜೆಯು ದೇಶಭಕ್ತಿಯನ್ನು ಮೈಗೂಡಿಸಿಕೊಳ್ಳಬೇಕು. ರಾಷ್ಟ್ರೀಯ ಐಕ್ಯತೆಯೇ ನಮ್ಮ ಗುರಿಯಾಗಬೇಕು. ಆಗ ಮಾತ್ರ ರಾಷ್ಟ್ರದ ಸಮಗ್ರತೆಯನ್ನು ಕಾಪಾಡಲು ಸಾಧ್ಯ ಎಂದು ಭಾರತ ಸೇವಾದಳ ಜಿಲ್ಲಾ ಸಂಘಟಕ ಸೈಯದ್ ಕಮರುದ್ದಿನ್ ಹೇಳಿದರು. ಇಲ್ಲಿನ ಡಯಟ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ರಾಷ್ಟ್ರಧ್ವಜ ಕಟ್ಟುವ ಮಾಹಿತಿ ಕಾರ್ಯಗಾರ ಶಿಬಿರದಲ್ಲಿ ಅವರು ಮಾತನಾಡಿದರು. ರಾಷ್ಟ್ರಧ್ವಜವು ದೇಶದ ಗೌರವ, ತ್ಯಾಗ ಮತ್ತು ಏಕತೆಯ ಪ್ರತೀಕವಾಗಿದ್ದು, ಅದರ ಗೌರವಾಚರಣೆ ಹಾಗೂ ಸರಿಯಾದ ಬಳಕೆಯ ಬಗ್ಗೆ ಪ್ರತಿಯೊಬ್ಬ ನಾಗರಿಕನಿಗೂ ಅರಿವು ಅಗತ್ಯವಿದೆ ಎಂದು ತಿಳಿಸಿದರು. ಸ್ವಾತಂತ್ರ್ಯ ಹೋರಾಟದಿಂದಲೇ ಭಾರತ ಸೇವಾದಳವು ದೇಶದ ಏಕತೆ, ಶಿಸ್ತು ಮತ್ತು ಸೇವಾಭಾವನೆಯನ್ನು ಬೆಳೆಸುವ ಕೆಲಸ ಮಾಡುತ್ತಾ ಬಂದಿದೆ. ಇಂದಿನ ಯುವಕರು ದೇಶದ ಸಂವಿಧಾನ, ರಾಷ್ಟ್ರಧ್ವಜ ಹಾಗೂ ರಾಷ್ಟ್ರೀಯ ಚಿಹ್ನೆಗಳ ಗೌರವವನ್ನು ಮನನ ಮಾಡಿಕೊಂಡು ಸತ್ಪ್ರಜೆಯಾಗಿ ಬದುಕಬೇಕು ಎಂದು ಅವರು ಕರೆ ನೀಡಿದರು. ಸಮಯಪಾಲನೆ ಪಾಲಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ರಾಷ್ಟ್ರದ ತ್ರಿವರ್ಣ ಧ್ವಜದ ಇತಿಹಾಸವನ್ನು ತಿಳಿದುಕೊಳ್ಳಬೇಕು. ಯಾವುದೇ ಕಾರಣ–ಕ್ಕೂ ರಾಷ್ಟ್ರಧ್ವಜಕ್ಕೆ ಅವಮಾನ ತರುವಂತಹ ಘಟನೆಗಳು ನಡೆಯಬಾರದು. ರಾಷ್ಟ್ರದ ಗೌರವವನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು. ಶಿಬಿರದಲ್ಲಿ ರಾಷ್ಟ್ರಧ್ವಜದ ಇತಿಹಾಸ, ಅದರ ಬಣ್ಣಗಳ ಅರ್ಥ, ಧ್ವಜ ಕಟ್ಟುವ ಸರಿಯಾದ ವಿಧಾನ ಹಾಗೂ ಪಾಲಿಸಬೇಕಾದ ನಿಯಮಗಳ ಕುರಿತು ವಿದ್ಯಾರ್ಥಿಗಳಿಗೆ ವಿವರವಾದ ಮಾಹಿತಿ ನೀಡಲಾಯಿತು. ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿ ತಮ್ಮ ಸಂಶಯಗಳನ್ನು ನಿವಾರಿಸಿಕೊಂಡರು. ಬಳಿಕ ಕಾಲೇಜಿನ ಹಿರಿಯ ಉಪನ್ಯಾಸಕರಾದ ನಿಂಗಣ್ಣ ಸಿಂಪಿ ಮಾತನಾಡಿ, ಇಂತಹ ಜಾಗೃತಿ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ಶಿಸ್ತು ಮತ್ತು ಜವಾಬ್ದಾರಿಯುತ ನಾಗರಿಕತ್ವವನ್ನು ಬೆಳೆಸಲು ಸಹಕಾರಿಯಾಗುತ್ತವೆ. ಭಾರತ ಸೇವಾದಳದ ಕಾರ್ಯ ಶ್ಲಾಘನೀಯವಾಗಿದ್ದು, ಮುಂದೆಯೂ ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಸುಶೀಲಾ ಕಡ್ಡಿ, ಹಣಮತ ಪದ್ಮಾಕರ ದೈಹಿಕ ಶಿಕ್ಷಕ ವೆಂಕಟೇಶ್ ಚಂದನಕೇರಿ, ನಿರಂಜನ ರೆಡ್ಡಿ ಮತ್ತು ಶರಣಗೌಡ ಹಾಗೂ ಲಕ್ಷ್ಮಣರೆಡ್ಡಿ ಸೇರಿದಂತೆ ಇತರರು ಇದ್ದರು.

# ಶತಾಯುಷಿ ಡಾ.ಭೀಮಣ್ಣ ಖಂಡ್ರೆ ಆರೋಗ್ಯ ಚೇತರಿಕೆಗೆ ಹಾರೈಕೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:



ವಯೋಸಹಜ ಕಾಯಿಲೆಯಿಂದ ಚಿಕಿತ್ಸೆ ಪಡೆದು ಕೊಳ್ಳುತ್ತಿರುವ ಶತಾಯುಷಿ ಡಾ.ಭೀಮಣ್ಣ ಖಂಡ್ರೆ ಅವರ ಆರೋಗ್ಯವನ್ನು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ವಿಚಾರಿಸಿದರು.

ಬೀದರ್ ನಗರದ ಗುದಗೆ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಗೆ ಭಾನುವಾರ ಪೂಜ್ಯರು ಭೇಟಿ ನೀಡಿ ಶತಾಯುಷಿ ಡಾ.ಭೀಮಣ್ಣ ಖಂಡ್ರೆ ಅವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿ, ಅವರ ಹಣೆಗೆ ವಿಭೂತಿ ಧಾರಣೆ ಮಾಡಿ ಶೀಘ್ರ ಗುಣಮುಖರಾಗಿ ಮನೆಗೆ ಮರಳಲಿ ಎಂದು ಪ್ರಾರ್ಥಿಸಿದರು.ನಂತರ ಅವರ ಕುಟುಂಬದ ಸದಸ್ಯರನ್ನು ಮಾತನಾಡಿಸಿ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಇದ್ದರು.

> ಬೀದರ್ ಜಿಲ್ಲೆಯ ಪ್ರಗತಿಯಲ್ಲಿ ಶತಾಯುಷಿ ಡಾ.ಭೀಮಣ್ಣ ಖಂಡ್ರೆ ಅವರ ಕೊಡುಗೆ ಶ್ರೇಷ್ಠವಾಗಿದೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಸಹಕಾರ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರು ಶೀಘ್ರ ಗುಣಮುಖರಾಗಲಿ ಎಂದು ವಿಶ್ವಗುರು ಬಸವಣ್ಣನವರಲ್ಲಿ ಪ್ರಾರ್ಥಿಸುತ್ತೇನೆ.
>
> **– ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

### ಭಾತಂಬ್ರಾ ಶ್ರೀಗಳು ಭೇಟಿ

**ತಾಲೂಕಿನ ಭಾತಂಬ್ರಾ ಗ್ರಾಮದ ಜಗದ್ಗುರು ನಿರಂಜನ ಸಂಸ್ಥಾನ ಮಠದ ಜಗದ್ಗುರು ಶಿವಯೋಗೀಶ್ವರ ಶಿವಾಚಾರ್ಯರು, ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರ, ಆನಂದ ದೇವಪ್ಪ ಸೇರಿದಂತೆ ಹಲವು ಮುಖಂಡರು, ಅಭಿಮಾನಿಗಳು ಡಾ.ಭೀಮಣ್ಣ ಖಂಡ್ರೆ ಅವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದರು.**

# ಬೇಲೂರಿನ ಉರಿಲಿಂಗಪೆದ್ದಿ ಮಠದಲ್ಲಿ ಪ್ರಥಮ ಪ್ರಕಾಶಕರ ಸಮ್ಮೇಳನ ಫೆ. 7 ಮತ್ತು 8 ರಂದು

• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ



ಹುಲಸೂರು:–ತಾಲೂಕಿನ ಬೇಲೂರ ಗ್ರಾಮದಲ್ಲಿ ಉರಿಲಿಂಗಪೆದ್ದಿ ಮತ್ತು ಕಾಳವ್ವೆ ಉತ್ಸವ ಲಿಂಗೈಕ್ಯ ಪೂಜ್ಯ ಶಿವಲಿಂಗೇಶ್ವರ ಶಿವಯೋಗಿಗಳವರ ಪುಣ್ಯ ಸ್ಮರಣೋತ್ಸವ ಮತ್ತು ಪ್ರಥಮ ಪ್ರಕಾಶಕರ ಸಮ್ಮೇಳನವನ್ನು ಇದೇ ಫೆಬ್ರವರಿ 7 ಮತ್ತು 8 ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಎಂದು ಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಪಂಚಾಕ್ಷರಿ ಸ್ವಾಮೀಜಿಗಳು ಪೂರ್ವ ಸಿದ್ಧತಾ ಸಭೆಯಲ್ಲಿ ತಿಳಿಸಿದರು.

ಇಲ್ಲಿನ ಉರಿಲಿಂಗಪೆದ್ದಿ ಮಠದ ಆವರಣದಲ್ಲಿ ಸೇರಿದ ಸಭೆಯಲ್ಲಿ ಕಳೆದ ಹದಿನೆಂಟು ವರ್ಷದಿಂದ ಇಂತಹ ಉತ್ಸವ ಮಾಡುತ್ತಿದ್ದು ಈ ವರ್ಷ ಕಾಳವ್ವೆಯ ಉತ್ಸವ ಸೇರಿಸಲಾಗಿದೆ. ಉರಿಲಿಂಗಪೆದ್ದಿ ಪ್ರಶಸ್ತಿ, ಕಾಳವ್ವೆ ಪ್ರಶಸ್ತಿ ಜೊತೆಗೆ ಕರುನಾಡು ಮತ್ತು ಧರಿ ಶ್ರೀ ಪ್ರಶಸ್ತಿ ಪ್ರಧಾನ ಮಾಡಲಾಗುವುದು.

ಈ ವರ್ಷವೂ ಕೂಡ ಪ್ರಥಮ ಪ್ರಕಾಶಕರ ಸಮ್ಮೇಳನ ಆಯೋಜಿಸಲಾಗುವುದು.

ಸಂಯೋಜಕ ಡಾ.ಗವಿಸಿದ್ಧಪ್ಪ ಪಾಟೀಲ ಮಾತನಾಡಿ ಪ್ರಕಾಶಕರ ಅಕ್ಷರ ಸಂಸ್ಕೃತಿಯ ಚಿಂತನೆ, ಪ್ರಕಾಶಕ – ಲೇಖಕ– ಓದುಗರು ಇ ತ್ರಿವೇಣಿ ಸಂಗಮ ಕುರಿತು ಚಿಂತನೆ ಮಾಡಲು ಪ್ರಕಾಶಕರ ಸಮಸ್ಯೆ ಸವಾಲುಗಳನ್ನು ಬಗ್ಗೆ ಸಂವಾದ ಮಾಡಲಾಗುವುದು. ಈ ಪ್ರಥಮ ಪ್ರಕಾಶಕರ ಸಮ್ಮೇಳನ ಆಯೋಜನೆ ಮಾಡಲಾಗಿದ್ದು, ಈ ಸಮ್ಮೇಳನಕ್ಕೆ ಸರ್ವಾಧ್ಯಕ್ಷರನ್ನಾಗಿ ಹಿರಿಯ ಪುಸ್ತಕೋದ್ಯಮಿ,ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನದ ಪ್ರಕಾಶಕರಾದ ಡಾ.ಬಸವರಾಜ ಜಿ.ಕೊನೇಕ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಸಮ್ಮೇಳನ ಅರ್ಥ ಪೂರ್ಣವಾಗಿ ಮಾಡೋಣ ಲೇಖಕರಿಗೆ ಪ್ರಕಾಶಕರು ಇರದಿದ್ದರೆ ಪ್ರಕಟಣೆ ಆಗುವುದಿಲ್ಲ. ಒಂದೇ ನಾಣ್ಯದ ಎರಡು ಮುಖಗಳು ಅವರ ಸಮಸ್ಯೆ– ಸವಾಲುಗಳ ಬಗ್ಗೆ ಚಿಂತನೆ ಮಾಡಲಾಗು ವುದೆಂದರು

ಸರ್ವಾಧ್ಯಕ್ಷರ ಪರಿಚಯ:

ಡಾ.ಬಸವರಾಜ ಕೊನೇಕ ಅವರು ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಮಾಡ್ಯಾಳ ಗ್ರಾಮದಲ್ಲಿ 1952 ರಲ್ಲಿ ಜನಿಸಿದರು.ಈ.ಎಸ್.ಭಾವಿಕಟ್ಟಿಯವರ ಪುಸ್ತಕ ಅಂಗಡಿಯಲ್ಲಿ ಕೆಲಸ ಮಾಡಿ 12–12–1976 ರಲ್ಲಿ ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಸಂಸ್ಥೆ ಪ್ರಾರಂಭಿಸಿದರು.ಸಣ್ಣಗೂಡಂಗಡಿಯನ್ನು ಪ್ರಾರಂಭಿಸಿ ಷೋರೂಮ್,ಬುಕ್ ಮಹಲ್ ದವರೆಗೆ 49 ವರ್ಷದಲ್ಲಿ ಬೆಳೆದು ಕಲ್ಯಾಣ ಕರ್ನಾಟಕದ ಪ್ರಥಮ ಪ್ರಕಾಶನ ಇಂದು ಕರ್ನಾಟಕ ರಾಜ್ಯದ ಮೂಲೆ ಮೂಲೆಯಲ್ಲಿ ಪುಸ್ತಕ ಪ್ರಕಟ,ಲೇಖಕರನ್ನು ಬೆಳೆಸಿದ್ದಾರೆ.ವರ್ಗ,ವರ್ಣ,ಲಿಂಗ ಭೇದ ಇಲ್ಲದೇ ಜಾತ್ಯತೀತವಾಗಿ ಪ್ರತಿಭಾವಂತ ಲೇಖಕರ ಕೃತಿ ಪ್ರಕಟಿಸುತ್ತಾ 3700 ಕೃತಿ ಪ್ರಕಟಿಸಿದ್ದಾರೆ.ತಮ್ಮ ಪತ್ನಿ ಶ್ರೀಮತಿ ಬಸಮ್ಮ ಕೊನೇಕ ಹೆಸರಲ್ಲಿ ಬಸವ ಪ್ರಕಾಶನ 1991 ರಲ್ಲಿ,ಇದನ್ನು ಮಗ ಶರಣು ಕೊನೇಕ ನಡೆಸುತ್ತಿದ್ದಾರೆ.2002 ರಲ್ಲಿ ಸಿದ್ಧಲಿಂಗೇಶ್ವರ ಪ್ರಕಾಶನ ಮಗ ಸಿದ್ಧಲಿಂಗ ಕೊನೇಕ ನಡೆಸುತ್ತಿದ್ದು, ಇಡಿ ಕೊನೇಕ ಕುಟುಂಬ; ಪುಸ್ತಕ ಕುಟುಂಬವಾಗಿದೆ. ಇವರಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ಉತ್ತಮ ಪ್ರಕಾಶಕ ಪ್ರಶಸ್ತಿ, ಬೆಸ್ಟ್ ಪಬ್ಲೀಷರ್ ದಿಲ್ಲಿ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ, ಶರಣ ಬಸವ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಲಭಿಸಿವೆ.ಗಡಿನಾಡು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರುಜೊತೆಗೆ ಹಲವು ಪ್ರಶಸ್ತಿ ಗೌರವ ಸಂದಿವೆ.ಎಪ್ಪತ್ತು ನಾಲ್ಕು ವಸಂತ ಕಂಡು; ಐವತ್ತು ವರ್ಷ ಪ್ರಕಾಶನ ನಡೆಸಿದ ಸಾಹಸಿಗಾರರು ಇವರಾಗಿದ್ದಾರೆ.

ಸ್ವಾಗತ ಸಮಿತಿ ಅಧ್ಯಕ್ಷರಾದ ಅರಣ್ಯ ಪರಿಸರ ಜೈವಿಕ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ. ,ಸ್ವಾಗತ ಸಮಿತಿ ಉಪಾಧ್ಯಕ್ಷರಾಗಿ

ಶಾಸಕರಾದ ಶರಣು ಸಲಗರ.

ಕಾರ್ಯಾಧ್ಯಕ್ಷರಾಗಿ ಜಗನ್ನಾಥ ಚಿಲ್ಲಾಬಟ್ಟೆ ,

ಪ್ರದಾನ ಕಾರ್ಯದರ್ಶಿಯಾಗಿ ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯ ಸಿಂಗ್ ,ಕೋಶಾಧ್ಯಕ್ಷರಾಗಿ

ಬಿ ಆರ್. ಬುದ್ಧ,ಪ್ರಚಾರ ಸಮಿತಿಯ ಸಮಾಜ ಸೇವಕರಾದ

ಪ್ರಶಾಂತ ಕೋಟಗೇರಾ.

ಸಂಯೋಜಕರಾಗಿ ಡಾ.ಗವಿಸಿದ್ದಪ್ಪ ಎಚ್.ಪಾಟೀಲ ಅವರನ್ನು ನೇಮಿಸಲಾಯಿತು.

ಈ ಸಂದರ್ಭದಲ್ಲಿ ಡಾ.ರಾಜಕುಮಾರ ಮಾಳಗೆ,ಡಾ.ಸಿದ್ಧಪ್ಪ ಹೊಸಮನಿ, ಡಾ.ಪೀರಪ್ಪ ಸಜ್ಜನ,ನಾಗಪ್ಪ ಬಿ.ನಿಣ್ಣೆ ,ಸಂಜೀವಕುಮಾರ ಖೇಲೆ,ಗುರುನಾಥ ವಾಘಮಾರೆ,ವಿನೋದ ಸಿಂದೆ,ಭೀಮಶ್ಯಾ ವಾಘಮಾರೆ, ಸುಶೀಲ ಮಚಕೂರಿ, ನಿಜಗುಣ ಉರಿಲಿಂಗ ಪೆದ್ದಿ,ಪ್ರಕಾಶ ಸಿಂಗೆ,ರಾಜಕುಮಾರ ಮುಡಬಿಕರ,,ಡಾ. ರಾಜಕುಮಾರ ಮಾಳಗೆ, ,ನೀಖಿಲ ಬೆಳ್ಳೆ,ನವನಾಥ ಬೆಳ್ಳೆ, ಶಿವಕುಮಾರ ಕಾಂಗೆ,ಗೌತಮ್ ಕಾಂಬಳೆ,ನಾಮದೇವ ಉರಿಲಿಂಗಪೆದ್ದಿ,ತ್ರಿವಣಾ,ನಂದಾಬಾಯಿ, ಸುಶೀಲಾಬಾಯಿ,ರೋಹಿದಾಸಹೆಬ್ರೆ,ಸಮ್ಮುಖ ರಾಜಗುರು, ಲೋಕೇಶ್ ಕಾಂಗೆ,ಗಣೇಶ, ಚೇತನ್ ರಾಧು, ಅವಿನಾಶ ಪಾಂಚಳ. ಧನಾಬಾಯಿ,ದುರ್ಪತಾಬಾಯಿ,ಬಲಭೀಮ ವಾಂಖೇಡೆ,ಉಜ್ವಲಸೂರ್ಯವಂಶಿ,ಸಂಜು ಜಾದವ್, ವಿನೋದ ಸಿಂದೆ, ಗೌತಮ್ ವಾಘಮಾರೆ,ಇತರರು ಇದ್ದರು.

# ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಕಾರವಾರ:

ಕಾರವಾರತಾಲೂಕಾ ವ್ಯಾಪ್ತಿಯಲ್ಲಿ ಬರುವ 33 ಕೆವಿ ಸಿದ್ದರ– ಕದ್ರಾ ಮಾರ್ಗದತುರ್ತು ನಿರ್ವಹಣಾಕಾಮಗಾರಿಯನ್ನು ಕೈಗೊಳ್ಳುತ್ತಿರುವ ಪ್ರಯುಕ್ತ ಜ.12 ರಂದು ಬೆ.9 ರಿಂದ ಸಂಜೆ 5ರ ವರೆಗೆ, ಮಲ್ಲಾಪೂರ, ವೈಲವಾಡಾ, ಕಿನ್ನರ. ಗಾಡಸಾಯಿ, ದೇವಳಮಕಿ,ಕೆರವಡಿ ಸಿದ್ದರ, ನೆಗೆಕೋವೆ, ಬರ್ಗಲ್, ಕೊಡಸಳ್ಳಿ, ಕುರ್ನಿಪೇಟ್, ಲಕ್ಷ್ಮೀನಗರ, ವಿರ್ಜೆ, ಹರ್ಟುಗಾ, ಕದ್ರಾಗ್ರಾಮೀಣ ಮತ್ತು ಗೋಟೆಗಾಳಿ ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತಪೂರೈಕೆಯಲ್ಲಿ ಹಾಗೂ ಈ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿಅಡಚಣೆಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆ ತಿಳಿಸಿದೆ.

# ಶಿಕ್ಷಣ ಸಮಷ್ಟಿಪ್ರಜ್ಞೆ ಮೂಡಿಸುವಂತಿರಬೇಕು – ಹಾರಕೂಡ ಶ್ರೀ



• ಮಲ್ಲಮ್ಮ ನುಡಿ ವಾರ್ತೆ,ಬಸವಕಲ್ಯಾಣ :

ಶಿಕ್ಷಣವೆಂಬುದು ಮಕ್ಕಳಿಗೆ ಮಾಹಿತಿ ವರ್ಗಾಯಿಸುವ ಮಾಧ್ಯಮವಾಗದೆ, ಅವರಲ್ಲಿ ಸಮಷ್ಟಿಪ್ರಜ್ಞೆ ಮೂಡಿಸುವಂತಿರಬೇಕು ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಹಿಪ್ಪರಗಾ ಘಾಟ ಗ್ರಾಮದಲ್ಲಿ ಶಿಕ್ಷಕ ರಾಜಣ್ಣ ಬೆಳಮಗೆ ರವರ ವಯೋನಿವೃತ್ತಿ ಅಂಗವಾಗಿ ಆಯೋಜಿಸಿದ ಹಾರಕೂಡ ಶ್ರೀಗಳ ಗುರು ವಂದನೆ ಹಾಗೂ 913ನೇ ತುಲಾಭಾರ ಸಮಾರಂಭದ ಪಾವನ ಸನ್ನಿಧಾನ ವಹಿಸಿ ಮಾತನಾಡಿದ ಪೂಜ್ಯರು ಸಂಸ್ಕಾರದಿಂದ ಕೂಡಿದ ಶಿಕ್ಷಣ ಮಕ್ಕಳಲ್ಲಿ ಮೌಲ್ಯವರ್ಧನೆಗೆ ಪುಷ್ಟಿ ನೀಡುತ್ತದೆ.

ನಮ್ಮ ಮಕ್ಕಳು ಬರಿ ಶಿಕ್ಷಣ ವಂತರಾಗದೆ ಪರಿಪೂರ್ಣ ಮನುಷ್ಯರಾಗಿ ರಾಷ್ಟ್ರ ಕಟ್ಟುವ ಸತ್ಪ್ರಜೆಗಳಾಗಿ ನಿರ್ಮಿಸುವ ಗುರುತರ ಹೊಣೆ ಇಂದಿನ ಶಿಕ್ಷಕರ ಮೇಲಿದೆ.

ತಮ್ಮ ಸೇವಾವಧಿಯಲ್ಲಿ ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ವೃತ್ತಿನಿಷ್ಠೆ ಪಾಲಿಸಿದ ರಾಜಣ್ಣ ರವರು ಅನುಕರಣೀಯರಾಗಿದ್ದಾರೆ.

ಅವರ ನಿವೃತ್ತಿ ಜೀವನ ತುಂಬು ಕುಟುಂಬದ ಸಂತಸದೊಂದಿಗೆ ಸಾಗಿಬರಲಿ ಹಾಗೂ ಸರ್ವರಿಗೂ ಮಂಗಳವಾಗಲಿ ಎಂದು ಶುಭ ಹಾರೈಸಿದರು. ಸಾವಿತ್ರಿ ಶರಣು ಸಾಲಗರ ಮಾತನಾಡಿ ಶಿಕ್ಷಕರ ವೃತ್ತಿ ಅತಿ ಪವಿತ್ರವಾಗಿದ್ದು, ಅದು ಕೆಲಸವೆಂದು ತಿಳಿಯದೆ ನಿಸ್ವಾರ್ಥದಿಂದ ಸೇವೆ ಮಾಡಿ ಮಕ್ಕಳ ಭವಿಷ್ಯ ರೂಪಿಸಿ ಎಂದು ಶಿಕ್ಷಕರಲ್ಲಿ ಮನವಿ ಮಾಡಿಕೊಂಡರು. ಷಣ್ಮುಖ ಸ್ವಾಮಿ, ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ

ಶಿವಕುಮಾರ ಸ್ವಾಮಿ ಅಂಬಲಗಾ, ಮಲ್ಲಿನಾಥ ಹಿರೇಮಠ ಹಾರಕೂಡ, ರಾಜಣ್ಣ ಬೆಳವಣಿಗೆ, ಬಿಸಿ ಊಟದ ಅಧಿಕಾರಿಗಳಾದ ಸಂಜುಕುಮಾರ ಕಾಂಗೆ, ಗುಂಡಮ್ಮ ಬೆಳಮಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ತಿಕ ಸ್ವಾಮಿ ಎಲ್ಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು. ಕಾರ್ಯಕ್ರಮಕ್ಕೆ ಮೊದಲು ಅಲಂಕೃತ ಸಾರೋಟಿನಲ್ಲಿ ಹಾರಕೂಡ ಶ್ರೀಗಳ ಅದ್ದೂರಿ ಮೆರವಣಿಗೆ ಜರುಗಿತು.

# ಅದ್ದೂರಿಯಾಗಿ ಜರುಗಿದ ಹುಣಸಗಿ ಪ್ರಥಮ ಸಾಹಿತ್ಯ ಸಮ್ಮೇಳನ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ತಾಲೂಕಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು ದಿ/9/1/2026, ರಂದುಹುಣಸಗಿ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಅದ್ದೂರಿಯಿಂದ ಮೆರವಣಿಗೆ ಮಾಡಲಾಯಿತು ಶ್ರೀ ಮಹಾಂತಯ್ಯ ಸ್ವಾಮಿ ಸರ್ಕಲ್ಲಿನಿಂದ ಪ್ರಾರಂಭಿಸಿ ಶ್ರೀ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಯು ಕೆ ಪಿ ಕ್ಯಾಂಪ್ ಶ್ರೀ ನೀಲಕಂಠೇಶ್ವರ ದೇವಸ್ಥಾನ ಮಂದಿರದಲ್ಲಿ ವೇದಿಕೆಗೆ ಆಗಮಿಸಿದರು ಮೆರವಣಿಗೆಯಲ್ಲಿ ಕನ್ನಡಾಂಬೆಯ ಭಾವಚಿತ್ರ ಹಾಗು ಪುನೀತ್ ರಾಜಕುಮಾರ್ ಭಾವಚಿತ್ರದೊಂದಿಗೆ ಡೊಳ್ಳು ಕುಣಿತ ವಾದ್ಯ ಮೇಳ ಹಲಗೆ ಮೇಳ ಹಾಗೂ ಸರಕಾರಿ ಹುಣಸಗಿ ಪಟ್ಟಣದ ಶಾಲಾ ಮಕ್ಕಳು ಮಹಿಳೆಯರು ಕನ್ನಡಪರ ಹೋರಾಟಗಾರರು ಎಲ್ಲಾ ಸಾಮೂಹಿಕ ಸಂಘಟನೆಗಳೊಂದಿಗೆ ವಿಜೃಂಭಣೆಯಿಂದ ಮೆರವಣಿಗೆ ನಡೆಸಲಾಯಿತು.

ಬೆಳಗ್ಗೆ ಸುರಪುರ ಶಾಸಕರಾದ ಶ್ರೀ ರಾಜ ವೇಣುಗೋಪಾಲ ನಾಯಕ ಅವರು ಉದ್ಘಾಟನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು 'ತಾಯಿ ಮತ್ತು ತಾಯಿ ಭಾಷೆಯ ಹಾಗೂ ಕಲೆ ಸಾಹಿತ್ಯ,ನಾಡು ನುಡಿ ಯಾರು ಗೌರವಿಸುತ್ತಾರೋ ಅವರು ಅತ್ಯಂತ ಎತ್ತರಕ್ಕೆ ಬೆಳೆಯುತ್ತಾರೆಮ್ಮೇಳದ ಸರ್ವಾಧ್ಯಕ್ಷರಾದ ವಿರೇಶ ಹಿರೇಮಠ ಹಳ್ಳೂರ ಮಾತನಾಡಿ, 'ಹುಣಸಗಿಯ ಇತಿಹಾಸ ಪರಂಪರೆಯ ನಾಡಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ನಮ್ಮ ಬಾಗದ ಸಾಹಿತ್ಯ ಬೆಳೆಸುವದರ ಜೊತೆಗೆ ಯುವ ಸಾಹಿತಿಗಳಿಗೆ ಸೂಕ್ತ ವೇದಿಕೆ ಒದಗಿಸಿದೆ ಎಂದು ಹೇಳಿದರು.ತಾಲೂಕ ಕಸಪ್ ಅಧ್ಯಕ್ಷ ವೆಂಕಟಗಿರಿ ದೇಶಪಾಂಡೆ ಪರಿಷತ್ ಧ್ವಜಾರೋಹಣ ಹಾಗೂ ಪ್ರಸ್ತಾವಿಕ ನುಡಿ ಹೇಳಿದರು ಮಾಜಿ ಸಚಿವ ನರಸಿಂಹಾಯಕ್ ಅವರ ಸಹೋದರ ಹನುಮಂತ ನಾಯಕ್ ಬಬ್ಲು ಗೌಡ ವಾದ್ಯ ನುಡಿಸುವುದರೊಂದಿಗೆ ಮೆರವಣಿಗೆಗೆ ಚಾಲನೆ ನೀಡಿದರು.ಸಮಾರಂಭದಲ್ಲಿ ಸುರಪುರ ಸಂಸ್ಥಾನದ ಶ್ರೀ ರಾಜ ಕೃಷ್ಣಪ್ಪ ನಾಯಕ ಅತಿಥಿ ಸ್ಥಾನ ವಹಿಸಿದ್ದರುಇದೆ ಸಂದರ್ಭದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಯಲದ ನಿರ್ದೇಶದಕ ಅಮರೇಶ ಯಾತಗಲ್ಲ ಉದ್ಘಾಟಿಸಿ ಮಾತನಾಡಿದ ಅವರು ಈ ನಾಡಿನ ಮಹಿಳೆಯರು, ಶ್ರಮಿಕರ ನಿತ್ಯ ಜೀವನದಲ್ಲಿ ಸಾಹಿತ್ಯ ಹಾಸುಹೊಕ್ಕಾಗಿದೆ.



# ಯುವತಿ ಕಾಣೆ ಪತ್ತೆಗಾಗಿ ಪಾಲಕರು ಮನವಿ



• **ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರು:**

ಕಾಳಾಪೂರು ಗ್ರಾಮದ ಅಮರೇಶ ತಂದೆ ವೀರಭದ್ರಪ್ಪ ಹೊಸಗೌಡು ಇವರ ಮಗಳಾದ ಮೇಘ ಶ್ರೀ ಎಂಬ ಯುವತಿ ಕಾಣೆ–ಯಾಗಿದ್ದು, ಯುವತಿ ಪತ್ತೆಗಾಗಿ ಪಾಲಕರು ಮನವಿ ಮಾಡಿದ್ದಾರೆ.

05 ಜನವರಿ 2026ರಂದು ಕಾಲೇಜಿಗೆ ಹೋದವಳು ಮರಳಿ ಬಂದಿಲ್ಲ. ಯುವತಿಯು ಕಾಣೆಯಾದಾಗ ಹಳದಿ ಕಾಲರ್ ಅರ್ಧ ತೋಳಿನ ಶರ್ಟ್ ಮತ್ತು ಚಾಕಲೇಟ್ ಕಲರ್ ಪ್ಯಾಂಟ್ ಧರಿಸಿಕೊಂಡಿದ್ದಳು. ತೆಳ್ಳನೆಯ ಮೈಕಟ್ಟು, ಗೋದಿ ಮೈ ಬಣ್ಣ 5 ಅಡಿ ಎತ್ತರವಾಗಿದ್ದಾಳೆ. ಜಿಟಿಟಿಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಯುವತಿ ಕಾಣೆಯಾಗಿದ್ದಾಳೆ. ಈ ಕುರಿತು ಲಿಂಗಸುಗೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಈ ಯುವತಿ ಕಂಡು ಬಂದಲ್ಲಿ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಮನವಿ ಮಾಡಲಾಗಿದೆ.

# ಅರ್ಜಿಗಳನ್ನು ಭರ್ತಿ ಮಾಡಲು ಕಾಲಾವಕಾಶ ವಿಸ್ತರಣೆ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರು:**

ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆ ಲಿಂಗಸುಗೂರು ಯೋಜನೆಯ ವ್ಯಾಪ್ತಿಯಲ್ಲಿ ಬರುವ 17 ಅಂಗನವಾಡಿ ಕಾರ್ಯಕರ್ತೆ ಹಾಗೂ 63 ಸಹಾಯಕಿಯರ ಹುದ್ದೆಗಳು ಖಾಲಿ ಇದ್ದು. ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೆಖ(1&2)ರಲ್ಲಿನ ಸರ್ಕಾರ ಆದೇಶದನ್ವಯ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು ಉಲ್ಲೇಖ(3) ರಂತೆ ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 4 ವಿವಿಧ ಹಂತಗಳಿದ್ದು, ಅರ್ಜಿ ಸಲ್ಲಿಸುವ 4 ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ದಿನಾಂಕ: 08.01.2026 ರಿಂದ ದಿನಾಂಕ: 15.01.2026 ರವರೆಗೆ ಅರ್ಜಿಗಳನ್ನು ಪೂರ್ಣಗೋಳಿಸಲು ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ವತಿಯಿಂದಲೇ ಅವಕಾಶ ನೀಡಿಲಾಗಿದೆ ಆದೇಶಿಸಲಾಗಿರುತ್ತದೆ, ಆದ್ದರಿಂದ ಅಪೂರ್ಣ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಲಯ ಕಚೇರಿಯ ಅವಧಿಯಲ್ಲಿ ಸಂಪರ್ಕಿಸಲು ತಿಳಿಸಲಾಗಿದೆ. ಆನ್‌ಲೈನ್‌ನಲ್ಲಿ ಅಪೂರ್ಣ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನಾಗರತ್ನ ಪತ್ರಿಕಾ ಪ್ರಕಟಣೆ ತಿಳಿಸಿದ್ದಾರೆ.

# ಅಂಗಡಿಗಳಿಗೆ ಬೆಂಕಿ: ಪರಿಹಾರಕ್ಕೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಬೀದರ್::**



ಔರಾದ್ ಪಟ್ಟಣದಲ್ಲಿ ಆಕಸ್ಮಿಕ ಬೆಂಕಿಯಿಂದ ಸುಟ್ಟಿರುವ ಅಂಗಡಿಗಳಿಗೆ ಪರಿಹಾರ ಕಲ್ಪಿಸಬೇಕು ಎಂದು ಕಾಂಗ್ರೆಸ್ ಕಿಸಾನ್ ವಿಭಾಗದ ರಾಷ್ಟ್ರೀಯ ಜಂಟಿ ಸಂ ಯೋಜಕ ಜಾನಸನ್ ಘೋಡೆ ಮನವಿ ಮಾಡಿದ್ದಾರೆ.

ಪಟ್ಟಣದಲ್ಲಿ 11 ಅಂಗಡಿಗಳು ಆಕಸ್ಮಿಕ ಬೆಂಕಿಗೆ ಆಹುತಿಯಾಗಿದೆ. ಕೋಟ್ಯಂತರ ರೂಪಾಯಿ ಹಾನಿಯಾಗಿದೆ ಎಂದು ತಿಳಿಸಿದ್ದಾರೆ.

ಅಗ್ನಿ ಅನಾಹುತದಿಂದ ವ್ಯಾಪಾರದಿಂದಲೇ ಬದುಕು ಸಾಗಿಸುತ್ತಿದ್ದ ಕುಟುಂಬಗಳು ಬೀದಿಗೆ ಬಂದಿವೆ. ಜೀವನೋಪಾಯಕ್ಕೆ ಸಂಕಷ್ಟಕ್ಕೆ ಒಳಗಾಗಿವೆ ಎಂದು ಹೇಳಿದ್ದಾರೆ.

ಜಿಲ್ಲಾ ಆಡಳಿತ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಒದಗಿಸಬೇಕು ಎಂದು ತಿಳಿಸಿದ್ದಾರೆ.

# ಗಣರಾಜ್ಯೋತ್ಸವಕ್ಕೆ ಅಗತ್ಯ ಸಿದ್ಧತೆಯಾಗಲಿ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ನಗರದ ಮಹಾತ್ಮ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಜನವರಿ 26ರಂದು ಜರುಗುವ ಗಣರಾಜ್ಯೋತ್ಸವ ಆಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜನವರಿ 09ರ ಶುಕ್ರವಾರ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಗಣರಾಜ್ಯೋತ್ಸವ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆ ಆಗದಂತೆ ಎಲ್ಲಾ ಅಧಿಕಾರಿಗಳು ಎಚ್ಚರವಹಿಸಬೇಕು. ಗಣರಾಜ್ಯೋತ್ಸವ ಕಾರ್ಯಕ್ರಮದ ಕುರಿತು ಆಹ್ವಾನ ಪತ್ರಿಕೆಗಳನ್ನು ಶಿಷ್ಟಾಚಾರದಂತೆ ಮುದ್ರಿಸಿ, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳಿಗೆ ತಲುಪಿಸಬೇಕು. ಕಾರ್ಯಕ್ರಮದಲ್ಲಿ ಪೊಲೀಸ್, ಗೃಹ ರಕ್ಷಕ, ಎನ್.ಸಿ.ಸಿ., ಸ್ಕೌಟ್ಸ್ ಮತ್ತು ಗೈಡ್ಸ್ ತಂಡಗಳಿಂದ ಆಕರ್ಷಕ ಪಥ ಸಂಚಲನ ಏರ್ಪಡಿಸುವಂತೆ ಹಾಗೂ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸುವ ನಿಟ್ಟಿನಲ್ಲಿ ವಿವಿಧ ಅಧಿಕಾರಿಗಳ ನೇತೃತ್ವದಲ್ಲಿ ಹಲವು ಸಮಿತಿ ರಚಿಸಲಾಗಿದ್ದು, ಎಲ್ಲಾ ಸಮಿತಿಯ ಸದಸ್ಯರು ತಮ್ಮ ಜವಾಬ್ದಾರಿಯನ್ನು ಅರಿತು ಸಮನ್ವಯದಿಂದ ಯಾವುದೇ ಲೋಪವಾಗದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ಹಾಗೂ ಗಣರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಎಲ್ಲಾ ಸರ್ಕಾರಿ ಕಚೇರಿಗಳನ್ನು ವಿದ್ಯುತ್ ದೀಪಾಲಂಕಾರ ಮಾಡುವಂತೆ ಮತ್ತು ಕ್ರೀಡಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಭಾಗವಹಿಸುವಂತೆ ಸೂಚಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಲಿದ್ದು, ಆಕರ್ಷಕ ಪಥಸಂಚಲನ ನಡೆಯಲಿದೆ. ಶಾಲಾ ವಿದ್ಯಾರ್ಥಿಗಳಿಂದ ಸಾಮೂಹಿಕ ನೃತ್ಯ ಕಾರ್ಯಕ್ರಮ ನಡೆಯಲಿದ್ದು, ಸಂಜೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ ಎಂದರು.

# ಕಾರ್ಯಕ್ರಮಗಳ ಕುರಿತ ವಸ್ತು ಪ್ರದರ್ಶನ ಶಾಸಕರಿಂದ ಉದ್ಘಾಟನೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಡವರ ಪರ ನಿಲ್ಲುವ ಏಕೈಕ ಸರ್ಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ. ನಮ್ಮ ಕಾಂಗ್ರೆಸ್ ಸರ್ಕಾರ ನಮ್ಮ ಹೆಮ್ಮೆಯಾಗಿದೆ ಎಂದು ಕಂಪ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಜೆ.ಎನ್.ಗಣೇಶ್ ಅಭಿಮತ ವ್ಯಕ್ತಪಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬಳ್ಳಾರಿ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಇವರ ಸಂಯುಕ್ತಾಶ್ರಯದಲ್ಲಿ ಕಂಪ್ಲಿ ಪಟ್ಟಣದ ಕೇಂದ್ರ ಬಸ್ ನಿಲ್ದಾಣದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗಾಗಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಕುರಿತ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಬಡವರ, ದೀನದಲಿತರ, ರೈತರ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಜಾರಿಗೊಳಿಸಿದ ಯೋಜನೆಗಳು ಜನಪ್ರಿಯವಾಗಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಎರಡುವರೆ ವರ್ಷ ಪೂರೈಸಿದ್ದು, ರಾಜ್ಯದಲ್ಲಿ ಆಶ್ವಾಸನೆ ನೀಡಿದಂತಹ 5 ಗ್ಯಾರಂಟಿ ಯೋಜನೆಗಳನ್ನು ಈಡೇರಿಸಿ ಜನರ ಜೀವನಮಟ್ಟವನ್ನು ಸುಧಾರಿಸಿದ್ದು, ನುಡಿದಂತೆ ನಡೆದುಕೊಂಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಶಕ್ತಿ ಯೋಜನೆ, ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ ಮತ್ತು ಯುವನಿಧಿ ಸೇರಿದಂತೆ ಐದು ಯೋಜನೆಗಳನ್ನು ಜಾರಿಗೊಳಿಸಿ ಬಡವರ ವರದಾನವಾಗಿ ಅವರ ಆರ್ಥಿಕಾಭಿವೃದ್ಧಿಗೆ ಕೈಗನ್ನಡಿಯಾಗಿದೆ ಎಂದು ಬಿಂಬಿಸಿದರು.

**ಕಂಪ್ಲಿ ಕ್ಷೇತ್ರ ಅಭಿವೃದ್ಧಿಯತ್ತ:**

ಕಂಪ್ಲಿ ಕ್ಷೇತ್ರದಲ್ಲಿ ನಮ್ಮ ಸರ್ಕಾರ ಶಿಕ್ಷಣಕ್ಕೆ ಹೆಚ್ಚು ಕೊಡುಗೆ ನೀಡಿದೆ. ಅದೇರೀತಿಯಾಗಿ ಕುಡಿಯುವ ನೀರು, ಗ್ರಂಥಾಲಯ, ರಸ್ತೆ, ಕೆರೆಗಳ ಅಭಿವೃದ್ಧಿ, ಏತ ನೀರಾವರಿ, 100 ಬೆಡ್ ಆಸ್ಪತ್ರೆ, ಮಿನಿ ವಿಧಾನಸೌಧ ನಿರ್ಮಾಣ, ತಾಪಂ ಕಚೇರಿ ನಿರ್ಮಾಣ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಕಂಪ್ಲಿ ಕ್ಷೇತ್ರವು ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ಹೇಳಿದರು.

ಕೆಲಸಗಳು ಮಾತನಾಡುತ್ತವೆ. ಟೀಕೆ–ಪ್ರಹಾರಗಳು ಸಾಯುತ್ತವೆ. ಅವೆಲ್ಲವುಗಳನ್ನು ಮೆಟ್ಟಿನಿಂತು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ರಾಜ್ಯ ಸರ್ಕಾರವು ದೇಶದಲ್ಲಿಯೇ ಮಾದರಿ ಸರ್ಕಾರವಾಗಿದೆ.

# ಕವಿಗೋಷ್ಠಿಗೆ ಕವಿತೆಗಳ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

2026ರ ಜನವರಿ 29, 30 ಮತ್ತು 31ರಂದು ರಾಯಚೂರಿನಲ್ಲಿ ಜಿಲ್ಲಾಡಳಿತದಿಂದ ನಡೆಯಲಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ನಿಮಿತ್ತ ಕವಿಗೋಷ್ಠಿ ನಡೆಸಲು ರಾಯಚೂರು ಜಿಲ್ಲಾಡಳಿತವು ರಾಯಚೂರು ಜಿಲ್ಲಾವ್ಯಾಪ್ತಿಯಲ್ಲಿನ ಕವಿಗಳಿಂದ ಸ್ವರಚಿತ ಕವಿತೆಗಳನ್ನು ಆಹ್ವಾನಿಸಿದೆ. ಕವಿತೆಯು ಸ್ವತಂತ್ರ ರಚನೆಯಾಗಿರಬೇಕು. ಕವಿತೆಯನ್ನು ಒಂದು ಪುಟ ಮೀರದಂತೆ ನುಡಿ ಅಥವಾ ಯುನಿಕೋಡ್‌ನಲ್ಲಿ ಟೈಪ್ ಮಾಡಿ ವರ್ಡ್ ಫಾರ್ಮೇಟನಲ್ಲಿ ಜನವರಿ 14ರೊಳಗೆ ಇ–ವಿಳಾಸ ಡಿಚುಝಿಣಡಿಜುರಿಡಿ@ರಟಚುಟ.ಛಿಂಟ ಗೆ ಇ–ಮೇಲ್ ಮಾಡಬಹುದು. ಅಥವಾ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪತ್ರಿಕಾ ಭವನದ ಮೊದಲನೇ ಮಹಡಿ, ಶ್ರೀ ಪಂಡಿತ ಸಿದ್ದರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರ ಹಿಂದುಗಡೆ, ರೈಲ್ವೆ ನಿಲ್ದಾಣದ ರಸ್ತೆ, ರಾಯಚೂರು ಜಿಲ್ಲೆ, ರಾಯಚೂರು ಇಲ್ಲಿಗೆ ಪೋಸ್ಟ್ ಮಾಡಬಹುದು. ಅಥವಾ ಮೊಬೈಲ್ ಸಂಖ್ಯೆ 9916111356 ಅಥವಾ 9008462236 ಗೆ ವಾಟ್ಸಪ್ ಮಾಡಬಹುದಾಗಿದೆ.




ಕವಿತೆಯೊಂದಿಗೆ ಕಡ್ಡಾಯವಾಗಿ ತಮ್ಮ ಹೆಸರು, ಸ್ಥಳ, ವಿದ್ಯಾರ್ಹತೆ, ದೂರವಾಣಿ ಸಂಖ್ಯೆಯ ವಿವರ, ವಯಸ್ಸಿನ ದಾಖಲೆಗಾಗಿ ಎಸ್ಸೆಸ್ಸೆಲ್ಸಿ ಅಂಕಪಟ್ಟಿ ಮತ್ತು ವಿಳಾಸದ ದಾಖಲೆಗಾಗಿ ಆಧಾರ್ ಕಾರ್ಡ್ ಝುರಾಕ್ಸ ಪ್ರತಿ ಕಳುಹಿಸಬೇಕು. ಕವಿಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಬರುವ ಕವಿತೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ರಾಯಚೂರು ಜಿಲ್ಲಾ ಉತ್ಸವದ ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಸಮಿತಿಯ ಪ್ರಕಟಣೆ ತಿಳಿಸಿದೆ.

# ತಂಡಗಳಿಂದ ಸ್ವವಿವರ ಸಲ್ಲಿಸಲು ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಎಡೆದೊರೆ ನಾಡು ರಾಯಚೂರು ಉತ್ಸವ–2026ವು ಜನವರಿ 29, 30 ಮತ್ತು 31ರಂದು ಅತ್ಯಂತ ವೈಭವಯುತವಾಗಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

ರಾಯಚೂರು ಉತ್ಸವವು ಅತ್ಯಂತ ವಿಶಿಷ್ಟವಾಗಿ ಮತ್ತು ಆಕರ್ಷಣೀಯವಾಗಿ ವಿಜೃಂಭಣೆಯಿಂದ ಆಚರಿಸುವ ನಿಟ್ಟಿನಲ್ಲಿ

ಜಿಲ್ಲೆಯ ಅತ್ಯುತ್ತಮ ಕಲಾ ತಂಡಗಳನ್ನು ಆಯ್ಕೆ ಮಾಡುವಂತೆ ರಾಯಚೂರು ಉತ್ಸವದ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದೆ. ಜಿಲ್ಲೆಯ ಎಡೆದೊರೆ ನಾಡು ರಾಯಚೂರು ಉತ್ಸವ–2026ರ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ರಾಯಚೂರು ಜಿಲ್ಲೆಯಿಂದ ವೇದಿಕೆ ಕಲಾ ತಂಡ/ ಜಾನಪದ

ಕಲಾ ತಂಡಗಳು ತಮ್ಮ ಸ್ವವಿವರದ ಮಾಹಿತಿಯ ಅರ್ಜಿಗಳನ್ನು ಇ ಕಚೇರಿಗೆ ಜನವರಿ 12ರೊಳಗಾಗಿ ಸಲ್ಲಿಸಬಹುದಾಗಿದೆ

ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಬ್ಲಿಕ್ ಸ್ಕೂಲ್ ವತಿಯಿಂದ ಟ್ಯಾಲೆಂಟ್ ಹಂಟ್

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**




ಬೃಂದಾ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಹಾಗೂ ಬೃಂದಾ ನ್ಯಾಷನಲ್ ಕಾಲೇಜ್ ವತಿಯಿಂದ 'ಟ್ಯಾಲೆಂಟ್ ಹಂಟ್–2026' ಪ್ರತಿಭಾ ಶೋಧನಾ ಪರೀಕ್ಷೆಯನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು.

ಈ ಪರೀಕ್ಷೆಯ ಮುಖ್ಯ ಉದ್ದೇಶ ಬಡ ಹಾಗೂ ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣದ ಅವಕಾಶ ಕಲ್ಪಿಸುವುದು ಆಗಿದೆ. ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಐದು ಟಾಪ್ ಯಾರ್ಂಕ್ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುವುದು ಎಂದು ಬೃಂದಾ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಫೌಂಡರ್ ಹಾಗೂ ಸಿಇಒ ಡಾ. ಭವ್ಯಶೇಖರ್ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬೃಂದಾ ನ್ಯಾಷನಲ್ ಸ್ಕೂಲ್ ಅಂಡ್ ಕಾಲೇಜ್ ಶಿಕ್ಷಣ ಕ್ಷೇತ್ರದಲ್ಲಿ ಮಾದರಿಯಾಗುವಂತೆ ಕಾರ್ಯನಿರ್ವಹಿಸುತ್ತಿದ್ದು, ಸಮಾಜದ ಕೊನೆಯ ಸಾಲಿನ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಧ್ಯೇಯದೊಂದಿಗೆ ನಿರಂತರ ಸೇವೆ ಸಲ್ಲಿಸುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ ಎಂದು ಹೇಳಿದರು. ಅತ್ಯಾಧುನಿಕ ಸೌಲಭ್ಯಗಳು, ಶಿಸ್ತುಬದ್ಧ ಶೈಕ್ಷಣಿಕ ವಾತಾವರಣ, ಅನುಭವೀ ಹಾಗೂ ಆಲ್ ಇಂಡಿಯಾ ಮಟ್ಟದ ಉಪನ್ಯಾಸಕರ ಮಾರ್ಗದರ್ಶನದೊಂದಿಗೆ ಖಇಖ, ಓಇಇಖ, ಎಇಇ, ಅಂ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮಗ್ರ ಹಾಗೂ ಪರಿಣಾಮಕಾರಿ ತರಬೇತಿ ನೀಡುತ್ತಿರುವುದು ಸಂಸ್ಥೆಯ ಶೈಕ್ಷಣಿಕ ಬದ್ಧತೆಯನ್ನು ಸ್ಪಷ್ಟಪಡಿಸುತ್ತದೆ ಎಂದರು. ಕಡಿಮೆ ಶುಲ್ಕದಲ್ಲಿ ಉನ್ನತ ಮಟ್ಟದ ಶಿಕ್ಷಣ ಒದಗಿಸುವ ಮೂಲಕ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳ ಕನಸುಗಳನ್ನು ಸಾಕಾರಗೊಳಿಸುತ್ತಿರುವ ಬೃಂದಾ ನ್ಯಾಷನಲ್ ಸ್ಕೂಲ್ ಅಂಡ್ ಕಾಲೇಜ್ ಶಿಕ್ಷಣ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡುತ್ತಿದೆ ಎಂಬುದು ಎಲ್ಲ ವಲಯಗಳಿಂದಲೂ ಪ್ರಶಂಸೆಗೆ ಪಾತ್ರವಾಗಿದೆ.

ಈ ಪ್ರತಿಭಾ ಶೋಧನಾ ಪರೀಕ್ಷೆಗೆ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದು, ಇದು ಸಂಸ್ಥೆಗೆ ಸಂತಸದ ವಿಷಯವಾಗಿದೆ ಎಂದು ಅವರು ತಿಳಿಸಿದರು. ವಿದ್ಯಾರ್ಥಿಗಳ ಪೋಷಕರು ಹಾಗೂ ವಿವಿಧ ಶಾಲೆಗಳ ಪ್ರಾಂಶುಪಾಲರಿಗೆ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಡೈರೆಕ್ಟರ್ ಭುವನ್ ಎಂ.ಎಸ್., ಪಿಯು ಕಾಲೇಜ್ ಪ್ರಿನ್ಸಿಪಾಲ್ ಜಯವರ್ಧನ್ ಎಂ.ಎಲ್., ನರ್ಸಿಂಗ್ ಕಾಲೇಜ್ ಪ್ರಿನ್ಸಿಪಾಲ್ ಅಮರೇಶ್ ಎಚ್., ಹಾಗೂ ರಾಜಶೇಖರ್ ತಲಕಲ್ ಅವರು ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಪ್ರಮುಖ ಪಾತ್ರವಹಿಸಿದರು.

ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಶ್ರಮಿಸಿದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗೆ ಫೌಂಡರ್ ಹಾಗೂ ಸಿಇಒ ಡಾ.

# ಉತ್ಸವ: ಜ, 19ರಂದು ಖೋಖೋ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ರಾಯಚೂರು ಜಿಲ್ಲೆಯಲ್ಲಿ ಜನವರಿ–2026ರ ಮಾಹೆಯಲ್ಲಿ ಜರುಗುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಕಾರ್ಯಕ್ರಮದಲ್ಲಿ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದೆ.

ಜನವರಿ 19ರಿಂದ 20ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಗ್ಗೆ 9 ಗಂಟೆಗೆ ರಾಜ್ಯ ಮಟ್ಟದ ಖೋಖೋ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ. ಆಸಕ್ತರು ಈ ಪಂದ್ಯಗಳ ನೋಡಲ್ ಅಧಿಕಾರಿಗಳಾದ ಸಿಂಧನೂರಿನ ಟಿಪಿಇಒ ಸೋಮಲಿಂಗಪ್ಪ ಮೊಬೈಲ್ ಸಂಖ್ಯೆ: 7975743096 ಅಥವಾ ದೈಹಿಕ ಶಿಕ್ಷಕರಾದ ನರಹರಿರಾವ್ ಅವರ ಮೊಬೈಲ್ ಸಂಖ್ಯೆ: 9880184457ಗೆ ಸಂಪರ್ಕಿಸಿ ತಂಡದ ಹೆಸರು ನೋಂದಾಯಿಸಬಹುದಾಗಿದೆ.

ಕ್ರೀಡೆಗಳಲ್ಲಿ ಆಸಕ್ತರು ಭಾಗವಹಿಸಿ ರಾಯಚೂರು ಜಿಲ್ಲೆ ಹೆಮ್ಮೆಪಡುವಂತಹ ಕ್ರೀಡೋತ್ಸವ ಮೂಡಿಬರಲು ಸಹಕರಿಸಿ ರಾಯಚೂರು ಉತ್ಸವವನ್ನು ಯಶಸ್ವಿಗೊಳಿಸಲು ಎಲ್ಲಾ ಕ್ರೀಡಾಪಟುಗಳು ಮತ್ತು ಸಾರ್ವಜನಿಕರಲ್ಲಿ ವಿನಂತಿಸಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಲ್ಲ ತಾಲೂಕುಗಳಲ್ಲಿ ಮ್ಯಾರಾಥಾನ್, ಸೈಕ್ಲಿಂಗ್ ಸ್ಪರ್ಧೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ರಾಯಚೂರು ಉತ್ಸವ ಆಚರಣೆ ಅಂಗವಾಗಿ ಎಲ್ಲಾ ತಾಲೂಕುಗಳಲ್ಲಿ ಜನವರಿ 21ರಂದು ಮ್ಯಾರಾಥಾನ್ ಓಟ ಹಾಗೂ ಜನವರಿ 25ರಂದು ಸೈಕ್ಲಿಂಗ್ ಅನ್ನು ಸರಕಾರಿ ನೌಕರರಿಗೆ ಮತ್ತು ಸಾರ್ವಜನಿಕರಿಗೆ ಆಯೋಜಿಸುವಂತೆ ಸಂಬಂಧಿಸಿದ ತಹಶೀಲ್ದಾರರಿಗೆ ರಾಯಚೂರು ಉತ್ಸವ ಆಚರಣಾ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಸೂಚಿಸಿದ್ದಾರೆ.

# ರೈಲ್ವೆ ದರ ಹೆಚ್ಚಳ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು :**

ರೈಲ್ವೆ ಇಲಾಖೆ ಟಿಕೆಟ್ ದರ ಏರಿಕೆ ಖಂಡಿಸಿ ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿಗಳು ಇಂದು ನಗರದ ರೈಲ್ವೆ ನಿಲ್ದಾಣ ಮುಂಭಾಗ ಪ್ರತಿಭಟನೆ ನಡೆಸಿದರು. ಭಾರತೀಯ ರೈಲ್ವೆ ಇಲಾಖೆಯು ಡಿಸೆಂಬರ್ 26, 2025 ರಂದು ಟಿಕೆಟ್ ದರವನ್ನು ಏರಿಕೆ ಮಾಡಿರುವುದನ್ನು ತೀವ್ರ ಖಂಡಿಸಿದರು. 215 ಕಿಲೋಮೀಟರ್ ವರೆಗಿನ ಸಾಮಾನ್ಯ ವರ್ಗದ ಪ್ರಯಾಣಿಕರಿಗೆ ಟಿಕೆಟ್ ದರದಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ. ಆದರೆ, 215 ಕಿಲೋಮೀಟರ್‌ಗಿಂತ ಹೆಚ್ಚು ದೂರ ಪ್ರಯಾಣಿಸುವವರಿಗೆ ಸಾಮಾನ್ಯ ವರ್ಗದಲ್ಲಿ ಪ್ರತಿ ಕಿಲೋಮೀಟರ್‌ಗೆ 1 ಪೈಸೆ ಮತ್ತು ಮೇಲ್/ಎಕ್ಸ್‌ಪ್ರೆಸ್ ಸೇವೆಗಳಲ್ಲಿ ಪ್ರತಿ ಕಿಲೋಮೀಟರ್‌ಗೆ 2 ಪೈಸೆ ದರ ಏರಿಕೆಯಾಗಲಿದೆ. ಇದರಿಂದ ಪ್ರಯಾಣಿಕರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ಹಾಗೂ ಮಾಧ್ಯಮ ಮತ್ತು ಕೆಳ ವರ್ಗದ ಜನರಿಗೆ ಆರ್ಥಿಕವಾಗಿ ತೀವ್ರ ತೆ–ಊಂದರೆಯಾಗಿದೆ. ಈ ರೀತಿಯಾಗಿ ಟಿಕೆಟ್ ದರದಿಂದ ಸಾಮಾನ್ಯ ವರ್ಗದ ಜನರ ಅವರ್ಥಿಕತೆಯಲ್ಲಿ ಯಾವುದೇ ಹೆಚ್ಚಳವಿಲ್ಲದೇ ಅವರ ಬದುಕು ದುರ್ಬಲವಾಗಿದೆ.

ಮೋದಿ ಸರ್ಕಾರವು ಜನಸಾಮಾನ್ಯರನ್ನು ಲೂಟಿ ಹೊಡೆಯುವ ಯಾವುದೇ ಅವಕಾಶವನ್ನೂ ಬಿಡುವುದಿಲ್ಲ. ಕೇಂದ್ರ ಸರ್ಕಾರವು ಒಂದೇ ವರ್ಷದಲ್ಲಿ ಎರಡು ಬಾರಿ ರೈಲು ಟಿಕೆಟ್ ದರವನ್ನು ಹೆಚ್ಚಿಳ ಮಾಡಿದೆ ಎಂದು ಕೇಂದ್ರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರೈಲು ಟಿಕೆಟ್ ದರವನ್ನು ವರ್ಷದಲ್ಲಿ ಎರಡು ಬಾರಿ ಏರಿಕೆ ಮಾಡಲಾಗಿದೆ ಎಂದು ಪಕ್ಷವು ಆರೋಪಿಸಿದೆ. ಪಕ್ಷದ ಮುಖ್ಯ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ಅಜಯ್ ಕುಮಾರ್ ವೈಷ್ಣವ್ ಅವರು ಜಾಣ್ಮೆಯಿಂದ 1 ಮತ್ತು 2 ಪೈಸೆ ದರ ಏರಿಕೆ ಮಾಡಿದ್ದಾರೆ. ಆದರೆ ಜನಸಾಮಾನ್ಯರ ಮೇಲೆ 200 ಹೊರೆ ಬೀಳುತ್ತದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಆಡಳಿತಾವಧಿಯಲ್ಲಿ ಕಳೆದ 10 ವರ್ಷಗಳಲ್ಲಿ ರೈಲು ಟಿಕೆಟ್ ದರವು ಶೇ 107ರಷ್ಟು ಹೆಚ್ಚಾಗಿದೆ. ಹೀಗಾಗಿ ರೈಲುಗಳಲ್ಲಿ ಜನಸಾಮಾನ್ಯರ ಸಂಚಾರವೂ ದುಸ್ತರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಇದ್ದರೂ.

# ನವಜ್ಯೋತಿ ನೆಟ್‌ವರ್ಕ್ ಕರ್ನಾಟಕ ರಕ್ಷಣಾ ವೇದಿಕೆಯಿಂದ ನಿರಾಶ್ರಿತರಿಗೆ ನೆರವು

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**



ನಗರದ ಹಳೆಯ ಜಿಲ್ಲಾ ಆಸ್ಪತ್ರೆ ಹಿಂಭಾಗದಲ್ಲಿ ಶನಿವಾರ ನವಜ್ಯೋತಿ ನೆಟ್‌ವರ್ಕ್ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಿರಾಶ್ರಿತರು, ವಿಧವಾ ತಾಯಂದಿರು ಮತ್ತು ಬಡ ಕುಟುಂಬಗಳ ಅನಾಥ ಮಕ್ಕಳಿಗೆ ಚಳಿಗಾಲದ ನೆರವು ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಕರ್ನಾಟಕ ರಕ್ಷಣಾ ವೇದಿಕೆ ಮಹಿಳಾ ಜಿಲ್ಲಾ ಅಧ್ಯಕ್ಷೆ ನಾಗರತ್ನ ಅಳವಂಡಿ ಅವರ ನೇತೃತ್ವದಲ್ಲಿ ನಡೆಸಲಾಗಿದ್ದು, ಚಳಿಗಾಲದ ಹಿನ್ನೆಲೆಯಲ್ಲಿ ನಿರಾಶ್ರಿತ ತಾಯಂದಿರಿಗೆ ಹಾಗೂ ಮಕ್ಕಳಿಗೆ ಹೊದಿಕೆ (ಚಾದರ್) ವಿತರಿಸಲಾಯಿತು. ಜೊತೆಗೆ ಓದುತ್ತಿರುವ ಮಕ್ಕಳಿಗೆ ಪೆನ್ನು ಪುಸ್ತಕಗಳನ್ನು ನೀಡಲಾಗಿದ್ದು, ಸವಿ ನೆನಪಿಗಾಗಿ ಶೀಲ್ಡ್ ಹಾಗೂ ಕ್ಯಾಲೆಂಡರ್‌ಗಳನ್ನೂ ಹಂಚಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಾಗರತ್ನ ಅಳವಂಡಿ ಅವರು, "ನವಜ್ಯೋತಿ ನೆಟ್‌ವರ್ಕ್ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ನಿಮ್ಮ ಪ್ರತಿಯೊಂದು ನೋವಿನಲ್ಲೂ ನಿಮ್ಮ ಜೊತೆಗಿದೆ. ನಿಮ್ಮ ಕಷ್ಟದ ಸಮಯದಲ್ಲಿ ಧೈರ್ಯದಿಂದ ನಮ್ಮನ್ನು ಸಂಪರ್ಕಿಸಿ. ನಿಮ್ಮ ಸಮಸ್ಯೆಗಳನ್ನು ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಪರಿಹಾರ ಒದಗಿಸುವ ಕೆಲಸವನ್ನು ನಾವು ಮಾಡುತ್ತೇವೆ" ಎಂದು ತಾಯಂದಿರು ಹಾಗೂ ಮಕ್ಕಳಿಗೆ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಅಧ್ಯಕ್ಷ ಶಿವರಾಜ್ ಉಳ್ಳಾಗಡ್ಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ ಸಿ. ಹೊನಕೇರಿ, ಜಿಲ್ಲಾ ಆಟೋ ಘಟಕದ ಅಧ್ಯಕ್ಷ ಸಂಜಯ ದಾಸ್ ಕೌಜಗೇರಿ, ನವಜ್ಯೋತಿ ನೆಟ್‌ವರ್ಕ್ ಕಾರ್ಯಕರ್ತರು ಹಾಗೂ ರಕ್ಷಣಾ ವೇದಿಕೆ ಮಹಿಳಾ ಕಾರ್ಯಕರ್ತರು ಉಪಸ್ಥಿತರಿದ್ದರು.



ಭಾಲ್ಕಿ: ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವದ 2026ರ ದಿನದರ್ಶಿಕೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಬಿಡುಗಡೆಗೊಳಿಸಿದರು. ಡಾ.ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು, ಶಶಿಧರ ಕೋಸಂಬೆ, ಶರಣು ಮೋದಿ, ಬಸವರಾಜ ವಂಕೆ, ವಿಜಯಕುಮಾರ ರಾಜಭವನ, ಧನರಾಜ ಬಂಬುಳಗೆ, ರಾಜು ಜುಬರೆ, ಬಾಬು ಬೆಲ್ದಾಳ ಇದ್ದರು.

# ಸತ್ಯಾಗ್ರಹ ಸ್ಮಾರಕ ವಿದ್ಯಾಲಯದಲ್ಲಿ ಆರ್.ವಿ. ನಾಯಕರಿಗೆ ಶ್ರದ್ಧಾಂಜಲಿ




• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:**

ರಾಷ್ಟ್ರೀಯ ಸತ್ಯಾಗ್ರಹ ಸ್ಮಾರಕ ಶಿಕ್ಷಣ ಸಮಿತಿಯ ಹಿಂದಿನ ಸದಸ್ಯಆರ್.ವಿ.ನಾಯಕ ಅವರು 09/01/2026ರಂದು ನಿಧನರಾದ ನಿಮಿತ್ತ ಸತ್ಯಾಗ್ರಹ ಸ್ಮಾರಕ ಶಿಕ್ಷಣ ಸಮಿತಿ ಶೆಟಗೇರಿ ಹಾಗೂ ಆಡಳಿತ ಮಂಡಳಿಯಸದಸ್ಯರುಸೇರಿಶ್ರದ್ಧಾಂಜಲಿ ಸಭೆಯನ್ನು ನಡೆಸಲಾಯಿತು.

ಈ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾರ್ಯಾಧ್ಯಕ್ಷರ 'ಮಾನಂದ ಬಿ.ನಾಯಕಮಾತನಾಡಿ,ದಿವಂಗತ ಆರ್.ವಿ. ನಾಯಕರವರು ಸರಳ ಸ್ವಭಾವದ, ಶಿಸ್ತುಬದ್ಧ ಜೀವನ ನಡೆಸುವ, ಸಮಾಜದ ಜನತೆಯ ಕಷ್ಟಕ್ಕೆ ಸ್ಪಂದಿಸುವ ಸಹೃದಯ ವ್ಯಕ್ತಿಯಾಗಿದ್ದರು. ಪರೋಪಕಾರಿ ಜೀವನದಿಂದಾಗಿ ಅವರನ್ನು ಹೆಚ್ಚು ಸ್ನೇಹ,ಪ್ರೀತಿ,ಗೌರವದಿಂದಕಾಣುತ್ತಿದ್ದರು. ಊರ ನಾಗರಿಕರ ಅಚ್ಚು ಮೆಚ್ಚಿನ ವ್ಯಕ್ತಿಯಾಗಿದ್ದರು. ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸಿದರು.

ಮುಖ್ಯಾಧ್ಯಾಪಕಎನ್.ವಿ.ರಾಠೋಡ 'ಅವರು ಮಾತನಾಡಿ,ಅವರಆತ್ಮಕ್ಕೆ ಶಾಂತಿಕೊಡಲಿಎಂದುಪ್ರಾರ್ಥಿಸಿದರು. ಆಡಳಿತ ಮಂಡಳಿಯ ಸದಸ್ಯರು, ಶಿಕ್ಷಕರು, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿ/ನಿಯರು ಸೇರಿ ಮೌನಾಚರಣೆ ಮಾಡಿಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿದರು. ಈ ಸಂತಾಪ ಸೂಚಕ ಸಭೆಯಲ್ಲಿ ಬೊಮ್ಮಯ್ಯಎನ್

ನಾಯಕ,ಉದಯಎನ್.ನಾಯಕ, ಮನೋಹರ ವಿ.ನಾಯಕ,ರತೀಶ ವಿ.ನಾಯಕ ಇತರ ಸದಸ್ಯರು ಉಪಸ್ಥಿತರಿದ್ದರು.

ದಿವಂಗತರು ಸತ್ಯಾಗ್ರಹ ಸ್ಮಾರಕ ವಿದ್ಯಾಲಯದಸಂಸ್ಥಾಪಕದಿಟಜೋಗಿ ಬೀರಣ್ಣ ನಾಯಕ ಕುಟುಂಬಕ್ಕೆ ಸೇರಿದವರಾಗಿದ್ದರು.

# ಅರಣ್ಯ ಭೂಮಿ ಹಕ್ಕು ಪತ್ರಕ್ಕೆ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :**

ಕರ್ನಾಟಕ ಪ್ರಾಂತ ರೈತ ಸಂಘದ ಅಂಕೋಲಾ ತಾಲೂಕ ನೇತೃತ್ವದಲ್ಲಿ ಸುಂಕಸಾಳ ಗ್ರಾಮ ಮಟ್ಟದ ರೈತ ಸಮ್ಮೇಳನ ಇಂದು ಪಂಚಾಯತ್ ಆವರಣದಲ್ಲಿ ನಡೆಯಿತು. ಜಿಲ್ಲಾ ಅಧ್ಯಕ್ಷ ಶಾಂತಾರಾಮ ನಾಯಕ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.




ಗ್ರಾಮ ಸಮ್ಮೇಳನದಲ್ಲಿ ತಲಾತಲಾಂತರಗಳಿಂದ ಅರಣ್ಯ ಭೂಮಿಯಲ್ಲಿ ವಾಸಮಾಡಿ ಅರಣ್ಯ ಭೂಮಿ ಹಕ್ಕು ಪತ್ರಕ್ಕಾಗಿ ಅರ್ಜಿ ಹಾಕಿಕೊಂಡು 15-20 ವರ್ಷಗಳಿಂದ ಕಾಯುತ್ತಿದ್ದಾ-ರೆ. ಕೂಡಲೇ ಬಡ ಅರಣ್ಯ ವಾಸಿಗಳಿಗೆ ಸರಕಾರ ಕೂಡಲೇ ಅರಣ್ಯ ಭೂಮಿ ಹಕ್ಕು ಪತ್ರನೀಡಬೇಕೆಂದು ಸಮ್ಮೇಳನದಲ್ಲಿ ಒತ್ತಾಯಿಸಲಾಯಿತು.

ವಿದ್ಯುತ್ ಖಾಸಗೀಕರಣದ ವಿರುದ್ಧ, ಅರಣ್ಯ ವಾಸಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಒತ್ತಾಯಿಸಿ ನಿರ್ಣಯ ಅಂಗೀಕರಿಸಲಾಯಿತು. ವೇದಿಕೆ ಮೇಲೆ ರೈತ ಮುಖಂಡರಾದ ಸುರೇಶ ನಾಯ್ಕ, ಸಂದೀಪ ನಾಯ್ಕ, ಉದಯ ನಾಯ್ಕ ಮುಂತಾದವರು ಇದ್ದರು,

ಗ್ರಾಮ ಸಮಿತಿ ಆಯ್ಕೆ : ಕರ್ನಾಟಕ ಪ್ರಾಂತ ರೈತ ಸಂಘದ ಸುಂಕಸಾಳ ಗ್ರಾಮ ಸಮಿತಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಸಂದೀಪ ನಾಯ್ಕ, ಉಪಾಧ್ಯಕ್ಷರುಗಳಾಗಿ ಸಂತೋಷ ನಾಯ್ಕ, ಮಾಬ್ಲೇಶ್ವರ ಭಟ್, ಕಾರ್ಯದರ್ಶಿಯಾಗಿ ಉದಯ ನಾಯ್ಕ, ಸಹಕಾರ್ಯದರ್ಶಿಗಳಾಗಿ ಬಾನು ಗೌಡ, ಸಚಿನ್ ನಾಯ್ಕ ಆಯ್ಕೆಯಾದರು. ಸಮಿತಿ ಸದಸ್ಯರಾಗಿ ರತ್ನಾ ಬಿ. ನಾಯ್ಕ, ಗೀತಾ ಜಿ. ನಾಯ್ಕ, ವೆಂಕಟೇಶ ನಾಯಕ, ಮಹೇಶ ನಾಯಕ, ದಾಮೋದರ ಎಂ. ನಾಯ್ಕ, ಶಾಂತಾ ಎಫ್. ಫರ್ನಾಂಡಿಸ್ ಮತ್ತು ತಿಮ್ಮಾ ಬುದ್ದು ಗೌಡ ಆಯ್ಕೆಯಾದರು.

# ಎಐಯುಟಿಯುಸಿಯಿಂದ ಅಧ್ಯಯನ ಶಿಬಿರ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**




ಎಐಯುಟಿಯುಸಿ ಜಿಲ್ಲಾ ಸಮಿತಿಯಿಂದ ಜಿಲ್ಲಾ ಕಛೇರಿಯಲ್ಲಿ 'ಕಾರ್ಮಿಕರ ಅಧ್ಯಯನ ಶಿಬಿರ'ವನ್ನು ಹಮ್ಮಿಕೊಳ್ಳಲಾಗಿತ್ತು. ಗಣಿ, ಸ್ಪಾಂಜ್ ಐರನ್, ಕೆಪಿಟಿಸಿಎಲ್, ಜೆಸ್ಕಾಂ, ಆಶಾ, ಹಾಸ್ಟೆಲ್, ಬಿಸಿಯೂಟ ಸೇರಿದಂತೆ ವಿವಿಧ ವಿಭಾಗಗಳ ಕಾರ್ಮಿಕ ಮುಖಂಡರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಚರ್ಚೆಯನ್ನು ನಡೆಸಿಕೊಟ್ಟ ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕಾ.ಕೆ.ಸೋಮಶೇಖರ್ ಅವರು " ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾರ್ಮಿಕರ ಮೇಲೆ ತೀವ್ರತರ ದಾಳಿಯನ್ನು ನಡೆಸುತ್ತಿವೆ. ಕೇಂದ್ರ ಬಿಜೆಪಿ ಸರ್ಕಾರ, ಯಾವುದೇ ರೀತಿಯಲ್ಲಿ ಚರ್ಚೆಗೆ ಅವಕಾಶ ನೀಡದೆ, ಏಕಪಕ್ಷೀಯವಾಗಿ 4 ಲೇಬರ್ ಕೋಡ್ ಗಳನ್ನ ಜಾರಿಗೆ ತಂದಿದೆ. ಈ ಹಿಂದೆ ಇದ್ದ 29 ಕಾರ್ಮಿಕ ಪರ ಕಾನೂನುಗಳನ್ನು ತಿದ್ದುಪಡಿ ಮಾಡಿ, ಈ ಲೇಬರ್ ಕೋಡ್ ಗಳನ್ನ ಜಾರಿಗೆ ತಂದಿದೆ. 'ಇದರಿಂದ ಕಾರ್ಮಿಕರಿಗೆ ಸಾಕಷ್ಟು ಅನುಕೂಲವಾಗುತ್ತದೆ' ಎಂದು ಬಿಜೆಪಿ ಸರ್ಕಾರ ಮಾಧ್ಯಮಗಳಲ್ಲಿ ಸುಳ್ಳು ಪ್ರಚಾರಗಳನ್ನು ನಡೆಸುತ್ತಿದೆ. ವಾಸ್ತವವಾಗಿ, ಕಾರ್ಮಿಕರನ್ನು ಮತ್ತಷ್ಟು ಶೋಷಿಸಲು, ಲಾಭದಾಹಿ ಕಾರ್ಪೋರೇಟ್ ಮಾಲೀಕರ ಹಿತಕ್ಕಾಗಿ ಈ ಲೇಬರ್ ಕೋಡ್ ಗಳನ್ನು ಜಾರಿಗೆ ತರಲಾಗಿದೆ. ಇನ್ನು ಮುಂದಿನ ದಿನಗಳಲ್ಲಿ ಖಾಯಂ ಉದ್ಯೋಗಗಳು ಸಂಪೂರ್ಣವಾಗಿ ನಾಶವಾಗಲಿವೆ. ಆ ಜಾಗವನ್ನು 'ನಿಗದಿತ ಅವಧಿಯ ಉದ್ಯೋಗ'ಗಳು (Fixedtermemployment) ಆಕ್ರಮಿಸಲಿವೆ. ಹೋರಾಟದ ಹಕ್ಕು ಸೇರಿದಂತೆ ಅನೇಕ ಶಾಸನಬದ್ಧ ಹಕ್ಕುಗಳು ನೆಲಸಮಗೊಳ್ಳಲಿವೆ. ಕಾರ್ಮಿಕರು ರಕ್ತ ಹರಿಸಿ, ತ್ಯಾಗ, ಬಲಿದಾನಗಳಿಂದ ಗಳಿಸಿಕೊಂಡ ಈ ಹಕ್ಕುಗಳನ್ನು ಕೇಂದ್ರ ಸರ್ಕಾರ ಕಿತ್ತುಕೊಂಡಿದೆ." ಎಂದರು.

ಮುಂದುವರೆಯುತ್ತಾ, ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕರು ಇನ್ನಷ್ಟು ಸಂಘಟಿತರಾಗುತ್ತಾ, ಹೋರಾಟದ ಕಣಕ್ಕೆ ಧುಮುಕಬೇಕು. ದೇಶಾದ್ಯಂತ ಕೋಟ್ಯಂತರ ಸಂಖ್ಯೆಯಲ್ಲಿ ಕಾರ್ಮಿಕರು ರಸ್ತೆಗೆ ಇಳಿದು, ಸಮರಶೀಲ ಹೋರಾಟವನ್ನು ಬೆಳಸಬೇಕಿದೆ. ಜಾತಿ, ಧರ್ಮ, ಭಾಷೆ ಹೆಸರಲ್ಲಿ ಕಾರ್ಮಿಕರನ್ನು ಒಡೆಯುವ ಪಿತೂರಿಗಳಿಗೆ ಬಲಿಯಾಗದೆ, ಕಾರ್ಮಿಕರು ತಮ್ಮ ಐಕ್ಯತೆಯನ್ನು ಮತ್ತಷ್ಟು ಗಟ್ಟಿಯಾಗಿಸಬೇಕು. ಈ ಹಿನ್ನೆಲೆಯಲ್ಲಿ, ಫೆಬ್ರವರಿ 12 ರಂದು ಲೇಬರ್ ಕೋಡ್ ಹಾಗೂ ಇನ್ನಿತರ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ನಡೆಯುತ್ತಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಬೇಕೆಂದು" ಕರೆ ನೀಡಿದರು. ಈ ಚರ್ಚಾಗೋಷ್ಠಿಯ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷರಾದ ಕಾ.ಎ.ದೇವದಾಸ್ ಅವರು ವಹಿಸಿದ್ದರು.

ಜಿಲ್ಲಾ ಕಾರ್ಯದರ್ಶಿ ಡಾ.ಪ್ರಮೋದ್ ಅವರು ವೈಜ್ಞಾನಿಕ ಮನೋಭಾವ ಹಾಗೂ ಮೂಢನಂಬಿಕೆ' ಕುರಿತು ಚರ್ಚೆ ನಡೆಸಿಕೊಟ್ಟರು.

ಜಿಲ್ಲಾ ಉಪಾಧ್ಯಕ್ಷರಾದ ಕಾ.ಸೋಮಶೇಖರ್ ಗೌಡ, ಕಾ.ಎ.ಶಾಂತಾ , ಜಂಟಿ ಕಾರ್ಯದರ್ಶಿ ಸುರೇಶ್, ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಮುಖಂಡರಾದ ಗೀತಾ, ಕಿರಣ್ ಕುಮಾರ್, ಚೇತನ್, ಮುರಳಿ, ಸಂತೋಷ್, ಇನ್ನಿತರರು ಭಾಗವಹಿಸಿದ್ದರು.

# ಜೆಎಸ್ ಡಬ್ಲ್ಯೂ ನಿಂದ ರೈತರಿಗೆ ಸಮಗ್ರ ಕೃಷಿ ಕಿಟ್ ವಿತರಣೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

.ಜೆ ಎಸ್ ಡಬ್ಲ್ಯೂ ಫೌಂಡೇಶನ್ ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಸಂಡೂರು ಭಾಗದ ಆಯ್ದ 10 ಗ್ರಾಮಗಳಲ್ಲಿ ಒಟ್ಟು 300 ಮಾದರಿ ಪ್ರಗತಿಪರ ರೈತರನ್ನಾಗಿಸಲು ಸಮಗ್ರ ಕೃಷಿ ಯೋಜನೆಯನ್ನು ರೂಪಿಸಿದ್ದು ಇದರ ಮುಂದುವರೆದ ಭಾಗವಾಗಿ ಶನಿವಾರ ತೋರಣಗಲ್ಲು ಓ ಪಿ ಜೆ ಕೇಂದ್ರದಲ್ಲಿ ಕೃಷಿ ಪರಿಕರಗಳ ಕಿಟ್ ವಿತರಣೆಗೆ ಚಾಲನೆ ನೀಡಲಾಯಿತು. ದರೋಜಿ ಮತ್ತು ಮಾದಾಪುರ ಗ್ರಾಮದಿಂದ ಒಟ್ಟು 60 ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು, ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದ ಜೆ ಎಸ್ ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ನ್ ಹಿರಿಯ ಉಪಾಧ್ಯಕ್ಷ ಸುನಿಲ್ ರಾಲ್ಫ್ " ಜೆ ಎಸ್ ಡಬ್ಲ್ಯೂ ಫೌಂಡೇಶನ್ ರೈತರಿಗೆ ನಿರಂತರ ಆದಾಯ ತರುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ರೂಪಿಸಿದೆ, ಇಂದು ಆಹಾರವಿಲ್ಲದೆ ಯಾರು ಜೀವನ ಮಾಡಲು ಸಾಧ್ಯವಿಲ್ಲ, ಮತ್ತು ಆಹಾರದ ಜೊತೆಗೆ ನಾವು ಬಳಕೆ ಮಾಡುವ ಪ್ರತಿಯೊಂದು ವಸ್ತುವಿನ ಮೂಲವು ಭೂಮಿಯಾಗಿದೆ, ಪ್ರತಿ ದೇಶದ ಬೆನ್ನೆಲುಬು ರೈತನೇ ಆಗಿದ್ದಾನೆ, ಈ ಕಾರ್ಯಕ್ರಮದ ಅನುಕೂಲಗಳನ್ನು ಪಡೆದುಕೊಂಡು ಪ್ರತಿಯೊಬ್ಬ ರೈತರು ಆರ್ಥಿಕವಾಗಿ ಸದೃಢರಾಗಬೇಕು ಎಂಬುದೇ ನಮ್ಮೆಲ್ಲರ ಆಸೆಯಾಗಿದೆ" ಎಂದರು.

ಜೆ ಎಸ್ ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ನ ಪರಿಸರ ವಿಭಾಗದ ಮುಖ್ಯಸ್ಥರಾದ ಜಯಪ್ರಕಾಶ್ ಗೋದಾವರ್ತಿ ಮಾತನಾಡಿ" ಈ ವರ್ಷ 300 ರೈತರಿಗೆ ನೆರವು ನೀಡುತ್ತಿದ್ದೇವೆ ಮತ್ತು ಈ ಕಾರ್ಯಕ್ರಮ ಮುಂದಿನ 2 ವರ್ಷಗಳ ವರೆಗೆ ಇರಲಿದೆ ಒಟ್ಟು 1000 ಮಾದರಿ ರೈತರನ್ನು ರೂಪಿಸಲು ಯೋಜನೆ ರೂಪಿಸಲಾಗಿದೆ" ಎಂದು- ಎಲ್ಲಾ ಅನ್ನದಾತರಿಗೆ ಕಂಪನಿ ವತಿಯಿಂದ ಕೃತಜ್ಞತೆಯನ್ನು ಅರ್ಪಿಸಿದರು.

ಜೆ ಎಸ್ ಡಬ್ಲ್ಯೂ ಫೌಂಡೇಶನ್ ದಕ್ಷಿಣ ವಿಭಾಗದ ಮುಖ್ಯಸ್ಥ ಪೆದ್ದಣ್ಣ ಬೀಡಲಾ ಮಾತನಾಡಿ, ಈ ದಿನ ಎರಡು ಗ್ರಾಮಗಳ 60 ರೈತರಿಗೆ ಕಿಟ್ ವಿತರಣೆ ಮಾಡಲಾಗುತ್ತಿದೆ ಮತ್ತು ಎಲ್ಲಾ 300 ರೈತರಿಗೆ ಈಗಾಗಲೇ ಪರಿಕರಗಳು ಬಂದಿವೆ, ಉಳಿದ ರೈತರಿಗೆ ಗ್ರಾಮ ಮಟ್ಟದಲ್ಲೇ ಶೀಘ್ರದಲ್ಲಿ ವಿತರಣೆ ಮಾಡಲಾಗುವುದು ಪ್ರತಿ ರೈತರಿಗೆ ತರಕಾರಿ ಬೀಜಗಳು, ಜೈವಿಕ ರಸಗೊಬ್ಬರ, ರಸಗೊಬ್ಬರ ತಯಾರಿಸಲು ಐಎ (ISOcertified) ಬೆಡ್ ಮತ್ತು ಜೀವಂತ ಎರೆಹುಳುಗಳು, 20 ಗಿರಿರಾಜ ತಳಿಯ ಕೋಳಿ ಮರಿಗಳು, ಹೊಲದ ಬದುಗಳಲ್ಲಿ ನೆಡಲು ಅರಣ್ಯ ಮರಗಳು, ಮತ್ತು 1 ರಿಂದ 2 ಎಕರೆಗೆ ರೈತರು ಕೇಳಿದ ಸಸಿಗಳು ಮತ್ತು ಕೃಷಿ ಉಪಕರಣಗಳು ಮತ್ತು ಮಣ್ಣು ಪರೀಕ್ಷೆ ಕಾರ್ಡ್ ಎಲ್ಲಾ ರೈತರಿಗೆ ಶೀಘ್ರದಲ್ಲೇ ಮಾಡಿಕೊಡಲಾಗುವುದು, ರೈತರು ಕಾರ್ಯಕ್ರಮದ ಅನುಕೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆದಾಯ ಗಳಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ 60 ರೈತರಿಗೆ ತರಕಾರಿ ಬೀಜಗಳು, ಗೊಬ್ಬರ ಬೆಡ್, 2 ಎಕರೆಗೆ ಆಗುವಷ್ಟು ಜೈವಿಕ ರಸಗೊಬ್ಬರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜೆ ಎಸ್ ಡಬ್ಲ್ಯೂ ಫೌಂಡೇಶನ್ ಕೃಷಿ ಕಾರ್ಯಕ್ರಮಗಳನ್ನು ಮುನ್ನಡೆಸುವ ನಾಗನಗೌಡ ಮತ್ತು ಅನುಷ್ಠಾನ ಸಂಸ್ಥೆ ಸ್ಕೋಡ್ ವೇಸ್ ನ ರಾಜ ಎನ್ ಪಿ, ಗಂಗಾಧರ ಮತ್ತು ಸಿ ಎಸ್ ಆರ್ ಸಿಬ್ಬಂದಿಗಳು ಮತ್ತು ರೈತರು ಭಾಗವಹಿಸಿದ್ದರು.

# ಬ್ಯಾನರ್ ಗಲಭೆ ಪ್ರಕರಣ ಸಿಐಡಿ ತನಿಖೆ ಚುರುಕು

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಬಳ್ಳಾರಿಯಲ್ಲಿ ಇತ್ತೀಚೆಗೆ ನಡೆದ ಬ್ಯಾನರ್ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಮತ್ತಷ್ಟು ತೀವ್ರಗೊಂಡಿದ್ದು, ಸಿಐಡಿ ಅಧಿಕಾರಿಗಳ ತಂಡ ನಗರಕ್ಕೆ ಆಗಮಿಸಿದೆ. ಹರ್ಷ್ ಪ್ರೀಯಂ ಅವರ ನೇತೃತ್ವದಲ್ಲಿ ಒಟ್ಟು 8 ಮಂದಿ ಅಧಿಕಾರಿಗಳನ್ನೊಳಗೊಂಡ ಸಿಐಡಿ ತಂಡ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದೆ.

ಐಪಿಎಸ್ ತರಬೇತಿ ಪೂರ್ಣಗೊಳಿಸಿದ ನಂತರ ಹರ್ಷ್ ಪ್ರೀಯಂ ಅವರು ಅಟೆಂಡ್ ಮಾಡುತ್ತಿರುವ ಮೊದಲ ಪ್ರಮುಖ ಕೇಸ್ ಇದಾಗಿದ್ದು, ಪ್ರಕರಣದ ಮೇಲೆ ಹೆಚ್ಚಿನ ಗಮನ ಹರಿಸಲಾಗಿದೆ. ಸಿಐಡಿ ತಂಡ ಇಂದು ಅಥವಾ ನಾಳೆ ಅಧಿಕೃತವಾಗಿ ಕೇಸ್ ಫೈಲ್‌ಗಳನ್ನು ಸ್ವೀಕರಿಸುವ ಸಾಧ್ಯತೆ ಇದೆ.



ಈ ನಡುವೆ ಬ್ರೂಸಪೇಟೆ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳು, ಎಫ್‌ಐಆರ್, ಸಾಕ್ಷ್ಯಾಧಾರಗಳು ಮತ್ತು ಇತರೆ ಫೈಲ್‌ಗಳನ್ನು ಸಿದ್ಧಪಡಿಸಿದ್ದು, ಸಿಐಡಿ ತಂಡಕ್ಕೆ ಹಸ್ತಾಂತರಿಸಲು ಸಜ್ಜಾಗಿದ್ದಾರೆ.

ಬ್ಯಾನರ್ ಗಲಭೆ ಪ್ರಕರಣವು ಸಾರ್ವಜನಿಕ ಶಾಂತಿಗೆ ಧಕ್ಕೆ ತಂದ ಹಿನ್ನೆಲೆ, ತನಿಖೆಯನ್ನು ನಿಷ್ಪಕ್ಷಪಾತ ಹಾಗೂ ಸಮಗ್ರವಾಗಿ ನಡೆಸಲು ಸಿಐಡಿ ತಂಡ ಮುಂದಾಗಿದೆ. ಸಿಐಡಿ ತಂಡದ ಆಗಮನದೊಂದಿಗೆ ಪ್ರಕರಣದಲ್ಲಿ ಮಹತ್ವದ ಬೆಳವಣಿಗೆಗಳು ಸಂಭವಿಸುವ ನಿರೀಕ್ಷೆಯಿದೆ.

ಸದ್ಯ ಬಳ್ಳಾರಿ ಪೊಲೀಸರು ಸಿಐಡಿ ತಂಡದ ಸೂಚನೆಗಳಿಗೆ ಕಾಯುತ್ತಿದ್ದು, ತನಿಖೆಗೆ ಅಗತ್ಯವಿರುವ ಎಲ್ಲಾ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ.

# ಉಳೇನೂರ ವಿದ್ಯಾರ್ಥಿ ಘಟಕ ರಚನೆ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಜಿಲ್ಲೆಯ ಕಾರಟಗಿ ತಾಲ್ಲೂಕಿನ ಉಳೇನೂರು ಗ್ರಾಮದಲ್ಲಿ ಶುಕ್ರವಾರ ಸಂಜೆ ಅಖಿಲ ಭಾರತ ಪ್ರಜಾಸತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಓ) ನೇತೃತ್ವದಲ್ಲಿ ಸಾರ್ವಜನಿಕ ಶಿಕ್ಷಣ ಉಳಿಸಲು ಹಾಗೂ ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಉದ್ದೇಶದಿಂದ ಶುಕ್ರವಾರ ವಿದ್ಯಾರ್ಥಿ ಸಮಾವೇಶ ನಡೆಯಿತು.

ಸಮಾವೇಶದಲ್ಲಿ ಮಾತನಾಡಿದ ಎಐಡಿಎಸ್‌ಓ ರಾಜ್ಯ ಸಮಿತಿ ಸದಸ್ಯ ತುಳಜಾರಾಮ್ ಎನ್.ಕೆ., ವಿದ್ಯಾರ್ಥಿಗಳು ಭಗತ್ ಸಿಂಗ್, ನೇತಾಜಿ ಸುಭಾಷ್‌ಚಂದ್ರ ಬೋಸ್, ಖುದಿರಾಮ್ ಬೋಸ್, ಮಾಸ್ಟರ್ ದಾ ಸೂರ್ಯ ಸೇನ್, ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ವಿದ್ಯಾಸಾಗರ್ ಮುಂತಾದ ಮಹಾನ್ ವ್ಯಕ್ತಿಗಳ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕೇವಲ ಅಂಕ ರ್‍ಯಾಂಕ್ ಗಳಿಸುವುದೇ ಶಿಕ್ಷಣದ ಗುರಿಯಲ್ಲ. ಸಮಾಜದಲ್ಲಿನ ಅನ್ಯಾಯದ ವಿರುದ್ಧ ಪ್ರಶ್ನೆ ಮಾಡುವ, ಶೋಷಿತರ ಪರ ಧ್ವನಿ ಎತ್ತುವ ವಿದ್ಯಾರ್ಥಿಯೇ ನಿಜವಾದ ವಿದ್ಯಾರ್ಥಿ ಎಂದು ಅವರು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಹೋರಾಟಗಾರರ ಕನಸು ರೈತ ಕಾರ್ಮಿಕರ ಮಕ್ಕಳಿಗೆ ಗುಣಮಟ್ಟದ ಹಾಗೂ ಮೌಲ್ಯಾಧಾರಿತ ಶಿಕ್ಷಣ ಒದಗಿಸುವುದಾಗಿತ್ತು. ಆದರೆ ಇಂದು ಕೆಪಿಎಸ್ ಮ್ಯಾಗ್ನೆಟ್‌ಗಳಂತಹ ಶಿಕ್ಷಣ ವಿರೋಧಿ ಯೋಜನೆಗಳ ಮೂಲಕ ಸರ್ಕಾರಿ ಶಾಲೆಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಸಾರ್ವಜನಿಕ ಶಿಕ್ಷಣ ಉಳಿಸುವ ಹೊಣೆಗಾರಿಕೆ ವಹಿಸಬೇಕೆಂದು ಕರೆ ನೀಡಿದರು. ಸಭೆಗೆ ಎಐಡಿಎಸ್‌ಓ ಜಿಲ್ಲಾ ಸಂಚಾಲಕ ಗಂಗರಾಜ ಅಳ್ಳಳ್ಳಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ರಾಜ್ಯ ಸಮಿತಿ ಸದಸ್ಯೆ ಸಿಂಧು ಕೌದಿ ಹಾಗೂ ಸ್ಥಳೀಯ ಮುಖಂಡರಾದ ಬಸವರಾಜಪ್ಪ, ಅಂಜಿನಪ್ಪ, ದೇವರಾಜ ಕಟ್ಟಿಮನಿ ಉಪಸ್ಥಿತರಿದ್ದರು.

**ಘಟಕ ರಚನೆ:**

ಈ ಸಂದರ್ಭದಲ್ಲಿ ಎಐಡಿಎಸ್‌ಓ ಉಳೇನೂರು ಗ್ರಾಮ ಘಟಕವನ್ನು ರಚಿಸಲಾಯಿತು. ಘಟಕದ ಅಧ್ಯಕ್ಷೆಯಾಗಿ ವಿಜಯಲಕ್ಷ್ಮಿ, ಕಾರ್ಯದರ್ಶಿಯಾಗಿ ಭವಾನಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಸಾಕ್ಷಿ, ಸರಸ್ವತಿ, ದೇವರಾಜ್, ಮೌನೇಶ್, ಅನಿತಾ, ಸಂಗೀತ ಹಾಗೂ ಜಂಟಿ ಕಾರ್ಯದರ್ಶಿಗಳಾಗಿ ಅಂಕಿತ, ತೇಜಸ್ವಿನಿ, ಗಾಯತ್ರಿ, ಕಲ್ಪನಾ (ವೈ.), ಕಲ್ಪನಾ (ಎಸ್.), ಪವಿತ್ರ, ಅನುಸೂಯ, ನಂದಿನಿ ಅವರನ್ನು ಆಯ್ಕೆ ಮಾಡಲಾಯಿತು. ಸಂಜನಾ, ಸ್ಪಂದನ, ಭೂಮಿಕಾ, ರಾಜ್, ವಿಜಯ್, ಸೃಷ್ಟಿ, ಉಮಾದೇವಿ ಸೇರಿದಂತೆ ಒಟ್ಟು 35 ವಿದ್ಯಾರ್ಥಿಗಳನ್ನು ಒಳಗೊಂಡ ಸಮಿತಿ ರಚನೆಯಾಯಿತು.

# ಚಾಲಕರ ಸಂಘದಿಂದ ವಾರ್ಷಿಕ ಸಮ್ಮೇಳನ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿನ ಪತ್ರಿಕಾ ಭವನದಲ್ಲಿ ಶನಿವಾರ ಸರ್ಕಾರಿ ಹೊರ ಗುತ್ತಿಗೆ ವಾಹನ ಚಾಲಕರ ಸಂಘದಿಂದ ಪ್ರಥಮ ವಾರ್ಷಿಕೋತ್ಸವ ಸಮಾರಂಭದ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದ ಸಂಘದ ಅಧ್ಯಕ್ಷ ಮಲ್ಲೇಶಪ್ಪ ಅವರು, ವಾಹನ ಚಾಲಕರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಬೇಕು. ಮತ್ತು ತಮ್ಮ ಕರ್ತವ್ಯದಲ್ಲಿ ಪ್ರಾಮಾಣಿಕತೆ ಹೊಂದಬೇಕು. ಇದರಿಂದ ನಮ್ಮ ಸಂಘಕ್ಕೆ ಮತ್ತು ಚಾಲಕರಿಗೆ ಒಳ್ಳೆಯ ಹೆಸರು ಬರುತ್ತದೆ. ಚಾಲಕರ ಸಮಸ್ಯೆಗಳು ಇದ್ದಾಗ ಸದಾ ನನ್ನ ನಂಬರ್ ಗೆ ಕರೆ ಮಾಡಿ ನಿಮ್ಮ ಸಮಸ್ಯೆಗಳನ್ನು ಬಗೆ ಹರಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ. ವಾಹನ ಚಾಲನೆಯ ಸಂದರ್ಭದಲ್ಲಿ ಜಾಗೃತೆಯಿಂದ ಚಾಲನೆ ಮಾಡಿ ಎಂದು ಅವರು ಸಲಹೆ ನೀಡಿದರು.

ನಮ್ಮ ಸಂಘದಿಂದ ಯಾವುದೇ ಕಾರ್ಯಕ್ರಮ ಮಾಡಿದಾಗ ಹೆಚ್ಚಿನ ಸಂಖ್ಯೆಯಲ್ಲಿ ಚಾಲಕರು ಬರಬೇಕು. ಇದರಿಂದ ನಮ್ಮಲ್ಲಿ ಒಗ್ಗಟ್ಟು ಇದೆ ಎಂಬ ಸಂದೇಶವನ್ನು ನೀಡಬಹುದಾಗಿದೆ.

ಜೊತೆಗೆ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿ. ಯಾವುದೇ ಸಮಯದಲ್ಲಿ ನಮಗೆ ಕರೆ ಬರಬಹುದು ಆ ಸಂದರ್ಭದಲ್ಲಿ ನಾವು ಸಿದ್ದವಾಗಿರಬೇಕು ಎಂದು ಅವರು ಹೇಳಿದರು.

ಕೊಪ್ಪಳ ಜಿಲ್ಲೆಯ ಸರ್ಕಾರಿ ಹೊರ ಗುತ್ತಿಗೆ ವಾಹನ ಚಾಲಕರ ಸಂಘದ ಅಧ್ಯಕ್ಷ. ವಿಜಯ ಹೀರೆಮಠ್ ಅವರು ಮಾತನಾಡಿ, ವಾಹನ ಚಾಲಕರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ನಮ್ಮ ಸಂಘದ ಸದಸ್ಯರಿಗೆ ಏನಾದರೂ ತೊಂದರೆ ಬಂದಲ್ಲಿ ನಮ್ಮ ಗಮನಕ್ಕೆ ತಂದರೆ ಸಮಸ್ಯೆಗಳನ್ನು ಬಗೆಹರಿಸುವ ಕೆಲಸ ಮಾಡುತ್ತೇವೆ ಎಂದರು.

ಈ ಸಂದರ್ಭದಲ್ಲಿ ಸರ್ಕಾರಿ ವಾಹನ ಚಾಲಕರ ಸಂಘದ ಅಧ್ಯಕ್ಷ ಶ್ರೀನಿವಾಸಲು, ಖಜಾಂಚಿ ಕಬೀರ, ಗೌರವ ಅಧ್ಯಕ್ಷರಾದ ಸುಮನ್ ಕುಮಾರ್, ಉಪಾಧ್ಯಕ್ಷ ಬಿ. ಪರಶುರಾಮ, ಖಜಾಂಚಿ ಕೆ. ಶಿವು, ಅಂತೋನಿ, ಸಂತೋಷ ಕುಮಾರ್, ಇರ್ಫಾನ್, ವೆಂಕಟೇಶ, ನಾಗರಾಜ್, ರವಿ ಕುಮಾರ್ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

# ಯೋಜನೆಗಳ ಸದುಪಯೋಗ ಪಡೆಯಲು ಸಂಘಟನೆ ಅಗತ್ಯ: ಕುಳಗೇರಿ

• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**




ಬೀದಿ ಬದಿ ವ್ಯಾಪಾರಿಗಳನ್ನು ಆರ್ಥಿಕವಾಗಿ ಸಬಲೀಕರಿಸಲು ಸರ್ಕಾರ ಕೆಲವೊಂದು ಯೋಜನೆಗಳನ್ನು ಜಾರಿಗೆ ತಂದಿದೆ ಅದರ ಸದುಪಯೋಗವನ್ನು ನಮ್ಮ ಪದಾಧಿಕಾರಿಗಳು ಮಾಡಿಕೊಳ್ಳಬೇಕು ಎಂದು ಬೀದಿ ಬದಿ ವ್ಯಾಪಾರಿಗಳ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೆಹಬೂಬ ಕುಳಗೇರಿ ಹೇಳಿದರು. ರವಿವಾರ ಪಟ್ಟಣದ ಪುರಸಭೆ ಹಳೆ ಕಾರ್ಯಾಲಯ ಆವರಣದಲ್ಲಿ ಒಕ್ಕೂಟದ ತಾಲೂಕ ಶಾಖೆಯ ವತಿಯಿಂದ ಹಮ್ಮಿಕೊಂಡ ಬೀದಿ ಬದಿ ವ್ಯಾಪಾರಿಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಳೆದ ಎರಡು ವರ್ಷಗಳಿಂದ ಪಟ್ಟಣದಲ್ಲಿ ಈ ದಿನವನ್ನು ಅರ್ಥಪೂರ್ಣವಾಗಿ ಆಚರಿಸುತ್ತಾ ಬರಲಾಗಿದೆ ಇಲ್ಲಿಯ ಶಾಖೆಯ ಪದಾಧಿಕಾರಿಗಳು ಕ್ರಿಯಾಶೀಲತೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ ಅವರನ್ನು ಅಭಿನಂದಿಸುತ್ತೇನೆ. ಕ್ಷೇತ್ರದ ಶಾಸಕರು ಹಾಗೂ ಅಧಿಕಾರಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡು ಬೀದಿಬದಿ ವ್ಯಾಪಾರಿಗಳ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬೇಕು ಎಂದರು. ತಾಲೂಕ ಶಾಖೆಯ ಅಧ್ಯಕ್ಷ ಜುಮ್ಮಣ್ಣ ನಾಲತವಾಡ ಅವರು ಮಾತನಾಡಿ ಬೀದಿ ಬದಿ ವ್ಯಾಪಾರಿಗಳ ಹಲವಾರು ಸಮಸ್ಯೆಗಳಿವೆ

ಇವುಗಳ ಪರಿಹಾರಕ್ಕೆ ಕ್ಷೇತ್ರದ ಶಾಸಕರು ನಮ್ಮೊಂದಿಗೆ ಸಹಕರಿಸಬೇಕು. ನಾವೆಲ್ಲರೂ ಸಂಘಟನೆಯ ಬಲವರ್ಧನೆಗೆ ಹೆಚ್ಚು ಆಸಕ್ತಿ ವಹಿಸಬೇಕಾಗಿದೆ ಎಂದರು. ಒಕ್ಕೂಟದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಬಡೇಸಾಬ ಅ.ಚೌಧರಿ ಅಧ್ಯಕ್ಷತೆ ವಹಿಸಿದ್ದರು. ತಾಲೂಕ ಉಪಾಧ್ಯಕ್ಷ ಅಬ್ದುಲ್ ಲತೀಫ ಬೀಳಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಖೆಯ ಸಾಮಾಜಿಕ

ಜಾಲತಾಣದ ಮುಖ್ಯಸ್ಥ ನಜೀರ ಅಹ್ಮದ್ ಚೋರಗಸ್ತಿ, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಆಸೀಫ ಕೆಂಭಾವಿ, ದಲಿತ ಸೇನೆ ತಾಲೂಕ ಅಧ್ಯಕ್ಷ ಗೋಪಾಲ ಕಟ್ಟಿಮನಿ, ಜಿಲ್ಲಾ ಉಪಾಧ್ಯಕ್ಷ ಬಸ್ಸು ಮಾದರ,

ಪದಾಧಿಕಾರಿಗಳಾದ ನಬಿಸಾಬ ಜಾಲಿಬೆಂಚಿ, ಮಹಮ್ಮದ್ ರಫೀಕ ಚೌದ್ರಿ, ಬಿ.ಎ.ಚೌಧರಿ, ಅಕ್ಬರಸಾಬ ಕೂಡಗಿ, ನಾನೇಶ್ವರ ಹಿಂಗಮೋರೆ, ಸಂತೋಷ್ ಇಲ್ಕಲ್, ಸೂಶಿಲಾಬಾಯಿ ಭಜಂತ್ರಿ, ಅಂಬೂಬಾಯಿ ಭಂಡಾರಿ, ದುರ್ಗಾಬಾಯಿ ಹಿಂಗಮೋರೆ, ಗಂಗೂಬಾಯಿ ಹಿಂಗಮೋರೆ, ಚನ್ನೂಬಾಯಿ ಬಿಜಾಪುರ, ಮಾನಪ್ಪ ಕಟ್ಟಿಮನಿ, ಹುಸೇನ

ಚಾಂದಕೋಟೆ, ಹಸನಸಾಬ ಚೌದ್ರಿ, ಮಕ್ತೂಮಸಾಬ ಬಳಗಾನೂರ, ಮುಲಕಾಜಿ ನೆಲ್ಲಗಿ, ಹುಸೇನಸಾಬ ನಾಲತವಾಡ, ಖಾಜಾಅಮೀನ ಹಳ್ಳೂರ, ದಾವಲಸಾಬ ಬಳಗಾನೂರ, ಬುರಾನಸಾಬ ಜಮಾದಾರ ಮತ್ತಿತರರು ಇದ್ದರು.

# ಬಿಇ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ

## ಕೌಶಲ್ಯಾಧಾರಿತ ಸಂಶೋಧನೆ ಅಗತ್ಯ: ಪ್ರೊ.ರವೀಂದ್ರ



**ಪದವಿ ಪ್ರದಾನ: 2023-24 ಸಾಲಿನಲ್ಲಿ ಬಿಇ ಪದವಿಯ 11 ವಿಭಾಗಗಳ 660 ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ವಿಭಾಗದ 57 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 717 ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. ೧೩ ವಿದ್ಯಾರ್ಥಿಗಳು ಪ್ರಥಮ ರ್‍ಯಾಂಕ್‌ನೊಂದಿಗೆ 16 ಚಿನ್ನದ ಪದಕಗಳನ್ನು ಪಡೆದುಕೊಂಡಿರುತ್ತಾರೆ.**

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಪ್ರಾದೇಶಿಕ ಹಾಗೂ ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕೆ ಇಂಜಿನಿಯರಿಂಗ್ ಪದವಿಧರರ ನವೀನ, ಕೌಶಲ್ಯಾಧಾರಿತ ಸಂಶೋಧನೆ ಅಗತ್ಯವಾಗಿದ್ದು, ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಂಶೋಧನೆ ಮತ್ತು ನಾವಿನ್ಯತೆಯನ್ನು ವಾಣಿಜ್ಯಕರಣಗೊಳಿಸಿ ಪ್ರಗತಿ ಸಾಧಿಸುವುದು ಇಂದಿನ ಅವಶ್ಯಕತೆಯಾಗಿದೆ ಎಂದು ಮುಂಬೈ ಐಐಟಿಯ ಉಪ ನಿರ್ದೇಶಕ ಪ್ರೊ. ರವೀಂದ್ರ ಗುಡಿ ಹೇಳಿದರು.

ನಗರದ ಬಸವೇಶ್ವರ ಇಂಜನೀಯರಿಂಗ್ ಕಾಲೇಜಿನ ಸಭಾಭನದಲ್ಲಿ ಶನಿವಾರ ಜರುಗಿದ ಕಾಲೇಜಿನ 15ನೇ ಪದವಿ ಪ್ರದಾನ ಸಮಾರಂಭದಲ್ಲಿ ಪದವಿ ಪ್ರದಾನ ಮಾಡಿ ಮಾತನಾಡಿ, ತಂತ್ರಜ್ಞಾನದ ಸಹಾಯದಿಂದ ಗ್ರಾಮೀಣ ಪ್ರದೇಶದ ಜನರ ಆರೋಗ್ಯ, ನೈರ್ಮಲ್ಯ, ನೀರಿನ ಗುಣಮಟ್ಟ, ಇವುಗಳನ್ನು ಸುಧಾರಿಸಿ ಉತ್ತಮ ಜೀವನಮಟ್ಟ ಕಲ್ಪಿಸುವಂತೆ ಮಾಡಬೇಕು ಎಂದರು.

ಪ್ರಧಾನ ಮಂತ್ರಿಗಳ ವಿಕಸಿತ ಭಾರತದ ಪರಿಕಲ್ಪನೆಯ ಧ್ಯೇಯದಲ್ಲಿ ಕ್ವಾಂಟಮ್, ಸೆಮಿಕಂಡಕ್ಟರ್, ಬಾಹ್ಯಾಕಾಶ, ರಕ್ಷಣೆ, ಎಐ, ಸೈಬರ್ ಸೆಕ್ಯುರಿಟಿ ಕ್ಷೇತ್ರದಲ್ಲಿ ಸ್ವಸಾಮರ್ಥ್ಯ ವೃದ್ಧಿಸಿಕೊಂಡು ಆಮದನ್ನು ಕಡಿತಗೊಳಿಸಿ ಜಾಗತಿಕ ನಾಯಕತ್ವವನ್ನು ಸಾಧಿಸುವಂತೆ ಪ್ರಯತ್ನಿಸಬೇಕು ಎಂದ ಪ್ರೊ.ರವೀಂದ್ರ, ಬಾಗಲಕೋಟೆಯ ಬಸವೇಶ್ವರ ಸಂಸ್ಥೆ ನಾಡಿನಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣದೊಂದಿಗೆ ನಾವಿನ್ಯತೆಯನ್ನು ಉತ್ತೇಜಿಸುವ ಸಂಸ್ಥೆಗಳನ್ನು ನಡೆಸುತ್ತಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿ.ವಿ.ವಿ.ಸಂಘ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಪದವಿಯನ್ನುವುದು ಒಂದು ಜವಾಬ್ದಾರಿಯಾಗಿದ್ದು, ಸಮಾಜದ ಸಮಸ್ಯೆಗಳಿಗೆ ಉತ್ತಮ ತಾಂತ್ರಿಕ ಪರಿಹಾರ ನೀಡುವುದು ಮುಖ್ಯ. ವಿಕಸಿತ ಭಾರತದ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಯುವ ಇಂಜಿನಿಯರುಗಳ ಪಾತ್ರ ಬಹಳ ಮುಖ್ಯವಾಗಿದೆ, ಬದಲಾವಣೆಗಳಿಗೆ ಹೊಂದಿಕೊಳ್ಳುತ್ತ ನಿರಂತರ ಕಲಿಕೆ ಮೂಲಕ ಸಮಾಜಕ್ಕೆ ಆದರ್ಶ ವ್ಯಕಿಗಳಾಗಬೇಕೆಂದು ಹಾರೈಸಿದರು.

ವೇದಿಕೆ ಮೇಲೆ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಉಪಸ್ಥಿತರಿದ್ದರು. ಬಿ.ವಿ.ವಿ.ಸಂಘದ ತಾಂತ್ರಿಕ ಶಿಕ್ಷಣದ ನಿರ್ದೇಶಕ ಡಾ.ಆರ್.ಎನ್.ಹೆರಕಲ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್.ಹಿರೇಮಠ ಪರಿಚಯಿಸಿದರು. ಬಿಇಸಿ ಸ್ವರ ತಂಡದವರು ಸ್ವಾಗತ ಗೀತೆ ಪ್ರಸ್ತುತ ಪಡಿಸಿದರು. ಡೀನ್ ಡಾ.ಎಸ್.ಜಿ.ಕಂಬಾಳಿಮಠ ಮತ್ತು ಡಾ. ವಿಜಯಲಕ್ಷ್ಮಿ ಜಿಗಜಿನ್ನಿ ಕಾರ್ಯಕ್ರಮ ನಿರೂಪಿಸಿದರು.

ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಕೆ.ಚಂದ್ರಶೇಖರ ವಂದಿಸಿದರು.

# ರಸ್ತೆ ಸುರಕ್ಷತಾ ನಿಯಮ ಪಾಲನೆ ಕಡ್ಡಾಯ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:



ವಾಹನ ಚಾಲಕರು ರಸ್ತೆ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಾಹನ ಚಾಲಕರು ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸದೇ, ಸುರಕ್ಷಿತವಾಗಿ ವಾಹನ ಚಾಲನೆ ಮಾಡಿದಲ್ಲಿ ಅಮೂಲ್ಯ ಜೀವಗಳ ರಕ್ಷಣೆ ಮಾಡಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಕೆ.ಎಸ್.ಆರ್.ಟಿ.ಸಿ ಬಸ್ ವಾಹನ ಚಾಲಕರು ನಿಲುಗಡೆ ಸ್ಥಳಗಳಲ್ಲಿಯೇ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಕರೆದೊಯ್ಯುವ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿರುವ ಕಬ್ಬಿನ ಕಾರ್ಖಾನೆ ಮಾಲಿಕರು ಕೂಡ ತಮ್ಮ ಕಾರ್ಖಾನೆಗಳಿಗೆ ಬರುವ ಟ್ರ್ಯಾಕ್ಟರ್ ಮತ್ತು ಎತ್ತಿನ ಬಂಡಿಗಳು ರಸ್ತೆ ಬದಿ ಅಥವಾ ನಡು ರಸ್ತೆಯಲ್ಲಿ ನಿಲ್ಲಿಸದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ವಿಮೆ ಮಾಡಿಸಿರುವ ಟ್ರ್ಯಾಕ್ಟರ್‌ಗಳಿಗೆ ಮಾತ್ರ ಒಳಗಡೆ ಪ್ರವೇಶ ಎಂಬ ನಿಯಮ ಪಾಲಿಸಿದಲ್ಲಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ಸರಳವಾಗಿ ಪರಿಹಾರ ಪಡೆಯಲು ಸಾಧ್ಯವಾಗುತ್ತದೆ. ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಲು ಸಕ್ಕರೆ ಕಾರ್ಖಾನೆಯವರು, ವಿವಿಧ ಇಲಾಖೆ ಅಧಿಕಾರಿ ಸಿಬ್ಬಂದಿ ಎಲ್ಲರೂ ಒಗ್ಗೂಡಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಪುರಸಭೆ, ನಗರಸಭೆ, ಸ್ಥಳಿಯ ಪ್ರಾಧಿಕಾರ ಅಧಿಕಾರಿಗಳು, ಚರಂಡಿ, ಒಳಚರಂಡಿ, ನಲ್ಲಿ ಸಂಪರ್ಕ ಇತ್ಯಾದಿ ಕಾಮಗಾರಿಗಳಿಗಾಗಿ ರಸ್ತೆಗಳನ್ನು ಅಗೆದಿದ್ದಲ್ಲಿ ಶೀಘ್ರದಲ್ಲಿ ಅಂತಹ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಅಂತಹ ಕಾಮಗಾರಿಗಳಿಂದಾಗಿ ಅಪಘಾತಗಳು ಸಂಭವಿಸಿ ಜೀವ ಹಾನಿ ಆದಲ್ಲಿ ಅಧಿಕಾರಿಗಳನ್ನೆ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ ಮಾತನಾಡಿ, ರಸ್ತೆ ಸುರಕ್ಷತೆಯ ನಿಯಮಗಳನ್ನು ಪಾಲಿಸಲು ಹೇಳುವುದು ಕೇವಲ ಪೊಲೀಸ್ ಇಲಾಖೆ ಕೆಲಸ ಮಾತ್ರವಲ್ಲ, ಎಲ್ಲ ಇಲಾಖೆಗಳು ಮಾಡಬೇಕಾಗುತ್ತದೆ. ರಸ್ತೆ ಸುರಕ್ಷತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಮುಖ್ಯವಾಗಿ ಡಿಡಿಪಿಐ, ಡಿಡಿಪಿಯು ಹಾಗೂ ಪ್ರಥಮ ಪದವಿ ಕಾಲೇಜುಗಳ ಪ್ರಾಂಶುಪಾಲರು ತಮ್ಮ ತಮ್ಮ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ಗಂಟೆಯ ರಸ್ತೆ ಸುರಕ್ಷತಾ ನಿಯಮ ಪಾಲಿಸುವ ಕುರಿತು ಹದಿನೈದು ದಿನಕೊಮ್ಮೆಯಾದರು ಪಾಠ ಭೋದಿಸಿದಲ್ಲಿ ವಿದ್ಯಾರ್ಥಿಗಳಿಗೆ ಮನವರಿಕೆಯಾಗುತ್ತದೆ ಮತ್ತು ಆ ಮಕ್ಕಳು ಕೂಡ ತಮ್ಮ ಮನೆಯ ಸದಸ್ಯರು ಹಾಗೂ ಪಾಲಕರಿಗೆ ಹೇಳುವ ಮೂಲಕ ಅರಿವು ಮೂಡುತ್ತದೆ ಎಂದು ಹೇಳಿದರು.

ಲೋಕೋಪಯೋಗಿ ಇಲಾಖೆಯವರು ರಸ್ತೆ ನಿರ್ಮಾಣಕ್ಕೆ ಆಸಕ್ತಿ ತೋರಿದಷ್ಟು ರಸ್ತೆ ಸುರಕ್ಷತೆಗೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರತ್ತ ಕೂಡ ಅಷ್ಟೇ ಆಸಕ್ತಿ ವಹಿಸಬೇಕು. ಅಪಘಾತ ಸ್ಥಳಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಿ ಅಪಘಾತಗಳು ಸಂಭವಿಸದಂತೆ ಯಾವ ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ಕುರಿತು ವರದಿ ನೀಡಿ ಎಲ್ಲರೂ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಬೇಕು ಎಂದು ಹೇಳಿದರು. ಸಭೆಯಲ್ಲಿ ಲೋಕೋಪಯೋಗಿ ಇಲಾಖೆ ಬಾಗಲಕೋಟ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಕೆ.ದುರ್ಗಾದಾಸ, ಜಿಲ್ಲಾ ಆರೋಗ್ಯಾಧಿರಿ ಡಾ.ಮಂಜುನಾಥ ಸೇರಿದಂತೆ ಇತರರು ಇದ್ದರು.

# ನಾಗರಿಕ ಸಮಾಜದ ಸದಸ್ಯರ ನೇಮಕಕ್ಕೆ ಅರ್ಜಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಬಾಗಲಕೋಟೆ ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರದ ಪ್ರಸ್ತುತ ನಾಗರಿಕ ಸೇವಾ ವಲಯ ಹಾಗೂ ನಾಗರಿಕ ಸಮಾಜದ ಸದಸ್ಯರ ಸೇವಾ ಅವಧಿಯು ಮುಕ್ತಾಯವಾಗಿದ್ದು, ಹೊಸ ಸದಸ್ಯರ ನೇಮಕದ ಬಗ್ಗೆ ಅರ್ಹ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಬಾಗಲಕೋಟೆ ಜಿಲ್ಲಾ ದೂರು ಪ್ರಾಧಿಕಾರ ನಾಗರಿಕ ಸೇವಾ ವಲಯ ಹಾಗೂ ನಾಗರಿಕ ಸಮಾಜದ ಸದಸ್ಯರಾಗಿ ಕಾರ್ಯ ನಿರ್ವಹಿಸಲು ಇಚ್ಛೆವುಳ್ಳ ನಾಗರಿಕರು ತಮ್ಮ ಸ್ವವಿವರ ಹಾಗೂ ಇತರೆ ವಿವರಗಳೊಂದಿಗೆ ಮನವಿಯನ್ನು ಪೂರಕ ದಾಖಲೆಗಳೊಂದಿಗೆ ಜನವರಿ 25 ರೊಳಗಾಗಿ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಬಾಗಲಕೋಟೆ ಇವರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08354–235077ಗೆ ಸಂಪರ್ಕಿಸಬಹುದಾಗಿದೆ.

# ಉಚಿತ ಹೆಚ್‌ಪಿವಿ ಲಸಿಕೆಗೆ ಜಾಗೃತಿ

ರಾಯಚೂರು: ಹೆಣ್ಣು ಮಕ್ಕಳ ಜೀವನದಲ್ಲಿ ಗಂಭೀರತೆಯನ್ನು ಉಂಟು ಮಾಡುವ ಜೊತೆ ಜೊತೆಗೆ ಜೀವನಪೂರ್ತಿ ಕೊರಗುವಿಕೆಗೆ ಕಾರಣವಾಗುವ ಗರ್ಭಕಂಠದ ಕ್ಯಾನ್ಸರ್ ತಡೆಗೆ ರಾಜ್ಯ ಸರಕಾರವು ದಿಟ್ಟಹೆಜ್ಜೆ ಇಟ್ಟಿದ್ದು, 09 ರಿಂದ 14 ವರ್ಷದೊಳಗಿನ ಶಾಲಾ ಹೆಣ್ಣು ಮಕ್ಕಳಿಗೆ ಉಚಿತ ಹ್ಯೂಮನ್ ಪ್ಯಾಪಿಲೋಮ ವೈರಸ್ (ಹೆಚ್‌ಪಿವಿ) ಲಸಿಕೆಯನ್ನು ಹಾಕುವ ಕುರಿತು ಇಂದಿನಿಂದಲೇ ವ್ಯಾಪಕ ಮಾಹಿತಿಯನ್ನು ಶಾಲಾ ಮಟ್ಟದಲ್ಲಿ ನೀಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.

# ಲಿಫ್ಟ್‌ನಲ್ಲಿ ಸಿಲುಕಿದ ಕೆ.ಹೆಚ್ ಮುನಿಯಪ್ಪ ಚಂದ್ರಪ್ಪ



• ಮಲ್ಲಮ್ಮ ನುಡಿ ವಾರ್ತೆ ಬೀದರ್:

ಸಚಿವ ಕೆ.ಹೆಚ್.ಮುನಿಯಪ್ಪ ಹಾಗೂ ಎಂಎಲ್ ಸಿ ಚಂದ್ರಪ್ಪ ಲಿಫ್ಟ್ ನಲ್ಲಿ ಸಿಲುಕಿ–ಕೊಂಡು ಪರದಾಡಿದ ಘಟನೆ ಬೀದರ್ ನಲ್ಲಿ ನಡೆದಿದೆ.

ಶತಾಯುಷಿ ಮಾಜಿ ಸಚಿವ ಭೀಮಣ್ಣ ಖಂಡ್ರೆ ಅವರ ಆರೋಗ್ಯ ವಿಚಾರಿಸಲು ಬೀದರ್ ಆಸ್ಪತ್ರೆಗೆ ಹೋಗಿದ್ದ ವೇಳೆ ಸಚಿವ ಕೆ.ಹೆಚ್.ಮುನಿಯಪ್ಪ ಹಾಗೂ ಎಂಎಲ್ ಸಿ ಚಂದ್ರಪ್ಪ ಆಸ್ಪತ್ರೆ ಲಿಫ್ಟ್ ಏಕಾಏಕಿ ಕೈಕೊಟ್ಟಿದ್ದರಿಂದ ಲಿಫ್ಟ್ ನಲ್ಲಿ ಸಿಲುಕಿದ್ದಾರೆ. ಸುಮಾರು 15 ನಿಮಿಷಗಳ ಕಾಲ ಲಿಫ್ಟ್ ಒಳಗೆ ಸಿಲುಕಿಕೊಂಡಿದ್ದಾರೆ.

ಬಳಿಕ ಲಿಫ್ಟ್ ರಿಪೇರಿ ಮಾಡಿ ಬಾಗಿಲು ತೆರೆದಾಗ ಸಚಿವರು, ಎಂಎಲ್ ಸಿ ಲಿಫ್ಟ್ ನಿಂದ ಹೊರ ಬಂದಿದ್ದಾರೆ. 102 ವರ್ಷದ ಭೀಮಣ್ಣ ಖಂಡ್ರೆ ಆರೋಗ್ಯದಲ್ಲಿ ಏರುಪೇರಾಗಿದ್ದು, ಕೆಲ ದಿನಗಳಿಂದ ಬೀದರ್ ನ ಗುದಗೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆ–ಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭೀಮಣ್ಣ ಖಂಡ್ರೆ ಭೇತಿಯಾಗಿ ಅವರ ಆರೋಗ್ಯ ವಿಚಾರಿಸಿದ್ದಾರೆ.

# ಆರ್‌ಎಸ್‌ಎಸ್‌ರವರ ಸುಳ್ಳು ಪ್ರಚಾರ ಹಾಗೂ ಮತಗಳ್ಳತನದಿಂದಲೆ ಬಿಜೆಪಿ ಗೆಲ್ಲುತ್ತಿದೆ: ಎಂ.ರಾಮಪ್ಪ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು:



ವಿರೋಧ ಪಕ್ಷದವರು ಕುತಂತ್ರದಿಂದ ಗೆಲ್ಲುತ್ತಿದ್ದಾರೆ. ಎಲ್ಲೆಲ್ಲಿ ಮತಗಳ್ಳತನ ನಡೆಯುತ್ತಿದೆ ಅದನ್ನು ಪತ್ತೆ ಹಚ್ಚುವ ಕೆಲಸ ಮಾಡಬೇಕು, ಮಂಜಣ್ಣರವರು ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಸೋತಿ–ದ್ದಾರೆ. ನೀವು ಮನಸ್ಸು ಮಾಡಿದ್ದರೆ ಗೆಲ್ಲಿಸಬಹುದಿತ್ತು. ರಾಜ್ಯಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ತಿಳಿಸಿದರು.

ತಾಲೂಕಿನ ವಿನೋಬಾ ಕಾಲೋನಿಯಲ್ಲಿ ತಾಲೂಕು ಬೋವಿ ಸಮಾಜದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿ ಟೀಕೆ ಮಾಡುತ್ತಿದೆ. ನಾವು ದೊಡ್ಡ ಕೆಲಸವನ್ನು ಮಾಡಿ ಸಣ್ಣ ಪ್ರಚಾರವನ್ನು ತೆಗೆದುಕೊಳ್ಳುತ್ತಿದ್ದೇವೆ.

ಬಿಜೆಪಿ ಸಣ್ಣ ಕೆಲಸ ಮಾಡಿ, ದೊಡ್ಡ ಪ್ರಚಾರವನ್ನು ತೆಗೆದುಕೊಳ್ಳುತ್ತಾರೆ. ಬಿಜೆಪಿ, ಆರ್ ಎಸ್ ಎಸ್ ಬೈಠಕ್ ಗಳ ಮೂಲಕ ಸುಳ್ಳು ಪ್ರಚಾರವನ್ನು ಹರಡುತ್ತಿದ್ದಾರೆ. ಎಂದರು ಇನ್ನೂ ಮುಂದೆ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಚುನಾವಣೆ ಬರುತ್ತದೆ. ಆಕಾಂಕ್ಷಿಗಳನ್ನು ತಯಾರು ಮಾಡಿ ಅಧ್ಯಕ್ಷರಿಗೆ ಕಳುಹಿಸಿ ಕೊಡಬೇಕು. ಮುಂದಿನ ಬಾರಿಯಾದರೂ ಮಂಜಣ್ಣ ರವರನ್ನು ಹೆಚ್ಚು ಅಂತರದಿಂದ ಗೆಲ್ಲಿಸಬೇಕು ಎಂದು ತಿಳಿಸಿದರು ಪ್ರತಿ ಜಿಲ್ಲೆಗಳಲ್ಲೂ ಬೋವಿ ಅಭಿವೃದ್ಧಿ ನಿಗಮದ ಶಾಶ್ವತ ಕಚೇರಿಗಳನ್ನು ಸ್ಥಾಪಿಸಿ, ಸಮುದಾಯದ ಯುವಜನರಿಗೆ ಅಗತ್ಯ ಕೌಶಲ್ಯ ತರಬೇತಿ ನೀಡಲಾಗುವುದೆಂದು ತಾವು ಈಗಾಗಲೇ ಏಳು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ, ಮುಂದೆ ಎಲ್ಲಾ ಜಿಲ್ಲೆಗಳಿಗೂ ಭೇಟಿಇತ್ತು ಮಾಹಿತಿ ಸಂಗ್ರಹಿಸಿ, ಕಾರ್ಯಕ್ರಮ ರೂಪಿಸುವೆ. ಜ.17–18ರಂದು ಬೆಂಗಳೂರಿನ ಜ್ಞಾನಭಾರತಿಯಲ್ಲಿ 300ಕ್ಕೂ ಹೆಚ್ಚುಮಂದಿ ಯುವಪಡೆಗೆ ವಿವಿಧ ಕೌಶಲ್ಯ ಕುರಿತು ತರಬೇತಿ ನೀಡಲಾಗುತ್ತಿದ್ದು, ನೊಂದಾಯಿಸಿಕೊಳ್ಳಿ, ಇದೇ ಮಾದರಿ ರಾಜ್ಯಾದ್ಯಂತ ವಿಸ್ತರಿಸಲಾಗುವುದೆಂದು ತಿಳಿಸಿದರು.

ನಿಗಮದ ವತಿಯಿಂದ ಭೂರಹಿತ ಮಹಿಳೆಯರಿಗೆ ಭೂಒಡೆತನ ಕಲ್ಪಿಸುವುದು, ಗಂಗಾಕಲ್ಯಾಣ ಯೋಜನೆಗೆ ಆದ್ಯತೆ ನೀಡುವೆ, ಕಾರು ಸೌಲಭ್ಯಕ್ಕಿಂತ ಕುಲಕಸುಬಿಗೆ ಅನುಕೂಲವಾಗುವಂತೆ ಯಂತ್ರೋಪಕರಣಗಳು, ಟ್ರಾಕ್ಟರ್, ಗೂಡ್ಸ್ ವ್ಯಾನ್ ಖರೀದಿಗೆ, ಹೈನುಗಾರಿಕೆಗೆ ಪ್ರೋತ್ಸಾಹ, ಮಹಿಳಾ ಸ್ವಸಹಾಯ ಸಂಘಕ್ಕೆ ಐದುಲಕ್ಷರೂ ಸಾಲಸೌಲಭ್ಯ, ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಯೋಜನೆಯನ್ನು ಸದ್ವಿನಿಯೋಗ ಮಾಡಿಕೊಳ್ಳಿರೆಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭೋವಿ ಅಭಿವೃದ್ಧಿ ನಿಗಮ ಸ್ಥಾಪಿಸುವ ಮೂಲಕ ಸಮುದಾಯಕ್ಕೆ ದೊಡ್ಡಕೊಡುಗೆ ನೀಡಿದ್ದಾರೆಂದು ಸ್ಮರಿಸಿ, ಸಮಾಜಕ್ಕೆ ನೆರವಾದವರ ಬೆಂಬಲಕ್ಕೆ ನಿಲ್ಲಬೇಕೆಂದು ಆಶಿಸಿ, ಅಂಬೇಡ್ಕರರ ಆಶಯದಂತೆ ಶಿಕ್ಷಣ, ಸಂಘಟನೆ, ಹೋರಾಟಕ್ಕೆ ಹೆಚ್ಚು ಆದ್ಯತೆ ನೀಡಬೇಕು. ಸಮುದಾಯ ಜಾಗೃತರಾಗಬೇಕೆಂದು ಆಶಿಸಿ, ಸಮುದಾಯದ ಪರವಾಗಿರುವ ಮಾಜಿಶಾಸಕಎಚ್.ಪಿ.ಮಂಜುನಾಥ್‌ರನ್ನು ಸದಾ ಬೆಂಬಲಿಸಿರೆಂದರು. ಮೈಸೂರಿನ ಕಲಾಮಂದಿರದಲ್ಲಿ ಜ.28ಕ್ಕೆ ಸಿದ್ದರಾಮೋತ್ಸವ ಸಮಾವೇಶ ಆಯೋಜಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಮಂತ್ರಿ ಶಿವರಾಜ ತಂಗಡಗಿ, ಸಮಾಜದ ಸ್ವಾಮೀಜಿ ಭಾಗವಹಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದರು.

ಕಾಂಗ್ರೆಸ್ ಅಧ್ಯಕ್ಷರಾದ ರವಿಪ್ರಸನ್ನ, ಪ್ರೇಮಕುಮಾರ್, ಬಾಲಸುಂದರ್, ಬೋವಿ ಸಮಾಜದ ಜಿಲ್ಲಾಧ್ಯಕ್ಷ ವಿಜಯಕುಮಾರ್, ಪಿ.ಈರಯ್ಯ, ಉಮಾಶಂಕರ್, ಅಜ್ಗರ್ ಪಾಷಾ, ಟಿ ಕೃಷ್ಣ, ಶಿವಲಿಂಗಪ್ಪ, ನಾಗರಾಜ್, ಮಹದೇವ, ತಿಮ್ಮರಸ, ದೇವರಾಜ್, ತಿಮ್ಮರಾಜು, ರಾಮಣ್ಣ, ವೆಂಕಟೇಶ್, ಶೇಖರ್ ಸೇರಿದಂತೆ ಅನೇಕರಿದ್ದರು.

# ಭೃಷ್ಟಾಚಾರ ಕಡಿವಾಣಕ್ಕೆ ನರೇಗಾದಲ್ಲಿ ಬದಲಾವಣೆ:ಶೆಟ್ಟರ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ನರೇಗಾ ಯೋಜನೆಯಲ್ಲಿ ಆಗುತ್ತಿದ್ದ ಭೃಷ್ಟಾಚಾರ ತಡೆಯಲು ಹಾಗೂ ಲೋಪ ದೋಷಗಳನ್ನು ಸರಿಪಡಿಸಲು ಯೋಜನೆಯಲ್ಲಿ ಕೆಲವು ಬದಲಾವಣೆ ತರಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಹೇಳಿದರು.

ನಗರದಲ್ಲಿ ಶನಿವಾರ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡವರಿಗೆ ನೆರವಾಗುವ ದೃಷ್ಠಿಯಿಂದ ಕೇಂದ್ರ ಸರ್ಕಾರ ನರೇಗಾ ಯೋಜನೆಯಲ್ಲಿ ಬದಲಾವಣೆ ತಂದಿದ್ದು ಅದನ್ನು ಕಾಂಗ್ರೆಸ್ ಪಕ್ಷ ಸರಿಯಾಗಿ ತಿಳಿಯದೇ ಹಾಗೂ ಆ ಬಗ್ಗೆ ಸಂಸತ್ತಿನಲ್ಲಿ ಚರ್ಚಿಸಲು ಮುಂದಾಗದೇ ವಿರೋಧಿಸುವುದು, ಸದನ ಬಹಿಷ್ಕರಿಸುವುದು ಹಾಗೂ ಟೀಕೆ ಮಾಡುತ್ತ ಅಪಪ್ರಚಾರಕ್ಕೆ ಇಳಿದಿದೆ ಎಂದರು. ನರೇಂದ್ರ ಮೋದಿ ನೇತೃತ್ವದಲ್ಲಿ ದೇಶ ಪ್ರಗತಿಯಲ್ಲಿ ಮುನ್ನಡೆಯುತ್ತಿರುವುದನ್ನು ಸಹಿಸಿಕೊಳ್ಳಲು ಅವರಿಗೆ ಆಗುತ್ತಿಲ್ಲ. ವಿಕಸಿತ ಭಾರತದ ಕಲ್ಪನೆಯಿಟ್ಟುಕೊಂಡು ನರೇಂದ್ರ ಮೋದಿ ಕೈಗೊಳ್ಳುತ್ತಿರುವ ಯೋಜನೆ, ಕಾರ್ಯಕ್ರಮಗಳ ತಿರುಳು ಅರಿಯದ ಕಾಂಗ್ರೆಸ್ ಪಕ್ಷ ಬರೀ ಟೀಕೆ, ವಿರೋಧ ಮಾಡುವುದುನ್ನು ರೂಢಿ ಮಾಡಿಕೊಂಡಿದೆ ಎಂದು ಆರೋಪಿಸಿದರು. ಮೋದಿ ವಿಕಸಿತ ಭಾರತದ ಕನಸು ಕಂಡಿ–ದ್ದು, ಆ ನಿಟ್ಟಿನಲ್ಲಿ ಹಲವಾರು ಹೊಸ ಹೊಸ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಹೀಗಾಗಿ ದೇಶ ಆರ್ಥಿಕ ಪ್ರಗತಿ ಸಾಧಿಸುತ್ತ ನಡೆದಿದ್ದು, ಆರ್ಥಿಕತೆಯಲ್ಲಿ ಭಾರತ ಈಗ 4 ನೇ ಸ್ಥಾನಕ್ಕೆ ಬಂದಿದೆ. ನರೇಗಾ ಯೋಜನೆಯ ಬಜೆಟ್ ಹೆಚ್ಚಿಸಲಾಗಿದೆ. 100 ದಿನಗಳ ಕೆಲಸದ ದಿನಗಳನ್ನು 120 ಕ್ಕೆ ಹೆಚ್ಚಿಸಲಾಗಿದೆ. ನಕಲಿ ಜಾಬ್ ಕಾರ್ಡಗಳನ್ನು ರದ್ದುಪಡಿಸಿ, ಕೆಲಸ ಮಾಡಿದವರಿಗೆ 7 ದಿನದೊಳಗೆ ಹಣ ಪಾವತಿಸುವ ಕ್ರಮವಹಿಸಲಾಗಿದೆ ಎಂದ ಅವರು, ತಮ್ಮ ಆಡಳಿತದಲ್ಲಿ ಅನೇಕ ಯೋಜನೆ, ಕಾರ್ಯಕ್ರಮಗಳಿಗೆ ಬರೀ ನೆಹರೂ, ಇಂದಿರಾಗಾಂಧಿ, ರಾಜೀವಗಾಂಧಿ ಹೆಸರು ಇಟ್ಟಿರುವ ಕಾಂಗ್ರೆಸ್ಸಿನವರಿಗೆ ಮಹಾತ್ಮಗಾಂಧಿ ಈಗ ನೆನಪಾದರೆ ಎಂದು ಪ್ರಶ್ನಿಸಿದರು. ಪ್ರಗತಿಯ ಕಾರ್ಯಕ್ರಮಗಳ ಕುರಿತು ಟೀಕೆ, ಟಿಪ್ಪಣಿ ಮಾಡುವ ರಾಹುಲಗಾಂಧಿ ಮುಸ್ಲಿಂರಿಗೆ ಅನ್ಯಾಯವಾದರೆ ಪ್ರತಿಭಟನೆ, ಹೋರಾಟ ಎನ್ನುತ್ತಾರೆ. ಆದರೆ ಬಾಂಗ್ಲಾದೇಶದಲ್ಲಿ ನಡೆದಿರುವ ಹಿಂದುಗಳ ಹತ್ಯೆಯ ಬಗ್ಗೆ ಚಕಾರ ಎತ್ತುತ್ತಿಲ್ಲ ಎಂದ ಶೆಟ್ಟರ, ತುಷ್ಠೀಕರಣ ನೀತಿಯನ್ನೇ ಮುಂದುವರೆಸಿಕೊಂಡು ಹೊರಟಿದ್ದಾರೆ ಎಂದು ಟೀಕಿಸಿದರು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಮಾಜಿ ಶಾಸಕ ವೀರಣ್ಣ ಚರಂತಿಮಠ ಇದ್ದರು.

# ಔದ್ಯೋಗಿಕ ಕ್ಷೇತ್ರದಲ್ಲಿ ಕೌಶಲ್ಯಯುಕ್ತ ವ್ಯಕ್ತಿತ್ವ ಅಗತ್ಯ




**ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಮ್ಮ ಬಿಮ್ಸ್ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಷ್ಠಿತ ಕಂಪನಿಗಳಿಗೆ ಆಯ್ಕೆಯಾಗಿರುವುದು ಇಲ್ಲಿನ ಗುಣಮಟ್ಟದ ಶಿಕ್ಷಣ, ಮೂಲ ಸೌಕರ್ಯಗಳ ಜೊತಗೆ ಬದುಕಿಗೆ ಬೇಕಾದ ಮಾನವಿಯ ಮೌಲ್ಯಗಳ ಕಲಿಕೆ ಮುಖ್ಯ ಕಾರಣವಾಗಿದೆ– ಡಾ.ವೀರಣ್ಣ ಚರಂತಿಮಠ, ಕಾರ್ಯಾಧ್ಯಕ್ಷರು.ಬಿ.ವಿ.ವಿ.ಸಂಘ**

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ವಿದ್ಯಾರ್ಥಿಗಳು ಔದ್ಯೋಗಿಕ ಕ್ಷೇತ್ರದಲ್ಲಿ ಸಂಶೋಧನಾತ್ಮಕ ತಂತ್ರಜ್ಞಾನದ ಕೌಶಲ್ಯದ ಜೊತೆಗೆ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಡೆಟಾಲಾಜಿಕ್ಸ್ ಇಂಡಿಯಾದ ಮಾನವ ಸಂಪನ್ಮೂಲ ಅಭಿವೃದ್ಧಿ ಅಧಿಕಾರಿಗ ಶ್ರೀನಿವಾಸನ್ ವರದರಾಜನ್ ಹೇಳಿದರು. ನಗರದ ಪ್ರತಿಷ್ಠಿತ ಬಿ.ವಿ.ವಿ ಸಂಘದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (ಬಿಮ್ಸ್) ಮಹಾವಿದ್ಯಾಲಯದ ಸಭಾಭವನದಲ್ಲಿ ರವಿವಾರ ಜರುಗಿದ ಎಂಬಿಎ ವಿದ್ಯಾರ್ಥಿಗಳ 'ಪ್ಲೇಸ್‌ಮೆಂಟ್ ಸಕ್ಸಸ್‌ಮೀಟ್–2025' ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಅವರು, ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಲೆಕ್ಕವಿಲ್ಲದಷ್ಟು ಸಂಶೋಧನೆ ಮಾಡಬಹುದಾದ ಅನೇಕ ವಿಷಯಗಳಿವೆ ಎಂದರು. ಅವುಗಳಲ್ಲಿ ಸಂಸ್ಥೆಗಳ ನಡವಳಿಕೆ, ನೌಕರರ ಧಾರಣ, ಭಾವನಾತ್ಮಕ ಬುದ್ಧಿವಂತಿಕೆ, ಕಾರ್ಯಪಡೆ ವೈವಿಧ್ಯತೆ, ಉದ್ಯೋಗಿಗಳ ಕಾರ್ಯಕ್ಷಮತೆ, ಗ್ರಾಹಕ ನಡವಳಿಕೆ, ಉದ್ಯೋಗಿ ಸಂಬಂಧ ಸೇರಿದಂತೆ ಭಾವನಾತ್ಮಕ ಬುದ್ಧಿವಂತಿಕೆಯ ಕುರಿತು ಸಂಶೋಧನೆ ಅಗತ್ಯವಿದ್ದು, ವೃತ್ತಿಪರ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಕೌಶಲ್ಯದ ಜೊತೆಗೆ ನಮ್ಮ ಉತ್ತಮ ವ್ಯಕ್ತಿತ್ವ ನಡುವಳಿಕೆಗಳು ಮುಖ್ಯವಾಗುತ್ತದೆ. ಇವುಗಳು ಸಂದರ್ಶನದಲ್ಲಿ ಮುಖ್ಯ ಪಾತ್ರವಹಿಸುತ್ತವೆ ಎಂದು ವರದರಾಜನ್ ಹೇಳಿದರು.

# ಸಂಘದಿಂದ ಭದ್ರೇಶ್ವರ ಮಠದಲ್ಲಿ ಸ್ವಚ್ಛತಾ ಅಭಿಯಾನ

• ಮಲ್ಲಮ್ಮ ನುಡಿ ವಾರ್ತೆ ಬೀದರ್:



ತಾಲ್ಲೂಕಿನ ಬಾವಗಿ ಭದ್ರೇಶ್ವರ ಮಠದಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಅಕ್ಕ ಮಹಾದೇವಿ ಸಂಘದಿಂದ ಧನುರ್ಮಾಸ ಪ್ರಯುಕ್ತ ಭದ್ರೇಶ್ವರ ಮಠದಲ್ಲಿ ರವಿವಾರ ಸ್ವಚ್ಛತಾ ಅಭಿಯಾನ ನಡೆಯಿತು. ಯೋಜನೆ ಹಾಗೂ ಸಂಘದ ಪ್ರತಿನಿಧಿಗಳು ಪೊರಕೆ ಹಿಡಿದು ಮಠದ ಅಂಗಳದಲ್ಲಿ ಕಸಗುಡಿಸಿ, ನೀರಿನಿಂದ ಶುಚಿಗೊಳಿಸಿದರು. ಅಭಿಯಾನದ ನೇತೃತ್ವ ವಹಿಸಿದ್ದ ಮಠದ ರೇಣುಕಾ

ಸ್ವಾಮಿ ಮಾತನಾ ಡಿ, ' ಆರೋಗ್ಯಕರ ಜೀವನಕ್ಕಾಗಿ ಮನೆ ಹಾಗೂ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು' ಎಂದು ಹೇಳಿದರು. ಯೋಜನೆಯ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಚಾಲಕಿ ಗೀತಾ ನೆಲವಾಡ, ಅಕ್ಕ ಮಹಾದೇವಿ ಸಂಘದ ರೇಣುಕಾ ಜಯಶ್ರೀ ಪೋಶೆಟ್ಟಿ ,ಗಿರಮ್ಮ, ಜಗದೇವಿ ಸರಸ್ವತಿ ವಿಜಯಲಕ್ಷ್ಮಿ ಶ್ರೀದೇವಿ ಮೊದಲಾದವರು ಭಾಗವಹಿಸಿದ್ದರು.

# ಜನವರಿ 19 ರಿಂದ ರಾಷ್ಟ್ರೀಯ ಚಾಲುಕ್ಯ ಉತ್ಸವ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಚಾಲುಕ್ಯರ ಗತವೈಭವ ಸಾರುವ ಚಾಲುಕ್ಯ ಉತ್ಸವವನ್ನು ಜನವರಿ 19 ರಿಂದ 21 ವರೆಗೆ ಮೂರು ದಿನಗಳ ಕಾಲ ವಿಜೃಂಭನೆಯಿಂದ ಆಚರಿಸಲು ಸಿದ್ದತೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಚಾಲುಕ್ಯ ಉತ್ಸವ–2025 ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನವರಿ 19 ರಂದು ಬಾದಾಮಿ, 20 ರಂದು ಪಟ್ಟದಕಲ್ಲ ಹಾಗೂ 21 ರಂದು ಐಹೊಳೆಯಲ್ಲಿ ಉತ್ಸವ ನಡೆಯಲಿದೆ. ಸಮಯಾವಕಾಶ ಕಡಿಮೆ ಇರುವದರಿಂದ ಎಲ್ಲ ಸಿದ್ದತೆಗಳನ್ನು ಕೈಗೊಳ್ಳುವಂತೆ ವಿವಿಧ ಸಮಿತಿಯವರಿಗೆ ಸೂಚನೆ ನೀಡಿದರು. ಜನವರಿ 12 ರಂದು ಮಧ್ಯಾಹ್ನ 3 ಗಂಟೆಗೆ ಬಾದಾಮಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಿದ್ದತೆ ಕುರಿತು ಸಭೆ ನಡೆಸಲಿದ್ದಾರೆ ಎಂದು ತಿಳಿಸಿದರು. ಮೂರು ದಿನಗಳ ಕಾಲ ನಡೆಯುವ ಉತ್ಸವದಲ್ಲಿ ಭಾಗವಹಿಸುವ ಕಲಾ ವಿದರ ಪಟ್ಟಿಯನ್ನು ಅಂತಿಮಗೊಳಿಸಿ ಆಮಂತ್ರಣ ಪತ್ರಿಕೆ ಸಿದ್ದಪಡಿಸುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು, ಬಾದಾಮಿ, ಪಟ್ಟದಕಲ್ಲ ಹಾಗೂ ಐಹೊಳೆಯಲ್ಲಿ ಉತ್ಸವದ ವೇದಿಕೆ ಸಿದ್ದತೆಗೆ ಸಂಬಂಧಿಸಿದ ಅಧಿಕಾರಿಗಳು ಭರದ ಸಿದ್ದತೆ ಕೈಗೊಳ್ಳಬೇಕು. ಇಂದಿನಿಂದಲೇ ಸ್ಮಾರಕಗಳ ಸುತ್ತ ಮುತ್ತ ಸ್ವಚ್ಛತೆ ಕಾರ್ಯ ನಡೆಸಿ ರಸ್ತೆಗಳಲ್ಲಿ ತಗ್ಗು, ಗುಂಡಿಗಳಿದ್ದಲ್ಲಿ ಅವುಗಳನ್ನು ಮುಚ್ಚಿಸುವ ಕೆಲಸವಾಗಬೇಕು ತಿಳಿಸಿದರು. ಪಟ್ಟದಕಲ್ಲ ಹಾಗೂ ಐಹೊಳೆಯಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಸ್ವಚ್ಛತೆಗೆ ಕಾರ್ಯ ಪ್ರಾರಂಭಿಸಲು ಜಿ.ಪಂ ಸಿಇಓ ತಿಳಿಸಿದರು. ಉತ್ಸವ ನಡೆಯುವ ಮೂರೂ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ, ಕಲಾವಿದರನ್ನು ವೇದಿಕೆಗೆ ಕರೆತರಲು ವಾಹನಗಳ ವ್ಯವಸ್ಥೆ, ವಸತಿ ಹಾಗೂ ಊಟದ ವ್ಯವಸ್ಥೆಗೆ ಕ್ರಮಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಹೋಟೆಲ್, ಸಮುದಾಯ ಭವನ, ವಸತಿ ನಿಲಯಗಳನ್ನು ಗುರುತಿಸಿ ಪಟ್ಟಿ ಮಾಡಿಕೊಳ್ಳಲು ತಿಳಿಸಿದರು. ಸ್ತಬ್ದಚಿತ್ರ ತಯಾರಿ ಅಂತಿಮಗೊಳಿಸಿ ಜಿಲ್ಲೆಯಲ್ಲಿ ಸಂಚರಿಸಲು ಕ್ರಮಕೈಗೊಳ್ಳಬೇಕು. ಉತ್ಸವದ ಮುನ್ನಾದಿನ ಗ್ರಾಮೀಣ ಕ್ರೀಡೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕುಸ್ತಿ, ಸಂಗ್ರಾನಿ ಕಲ್ಲು ಎತ್ತುವ ಸ್ಪರ್ಧೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಜಿ.ಪಂ ಸಿಇಓ ಶಶಿಧರ ಕುರೇರ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ಉತ್ಸವಕ್ಕೆ ಸಂಬಂಧಿಸಿದ ವಿವಿಧ ಸಮಿತಿಯ ಅಧಿಕಾರಿಗಳು ಹಾಗೂ ಅಧಿಕಾರೇತರ ಸದಸ್ಯರು ಉಪಸ್ಥಿತರಿದ್ದರು.

# ಸ್ಥಳೀಯ ಲೇಖಕರ ಪುಸ್ತಕ ಬಿಡುಗಡೆಗೆ ಅವಕಾಶ: ಚನ್ನಶೆಟ್ಟಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಇದೇ ತಿಂಗಳ 24, 25 ಹಾಗೂ 26 ರಂದು ಸಾಯಿ ಸ್ಕೂಲ್ ಗ್ರೌಂಡನಲ್ಲಿ ಹಿರೇಮಠ ಸಂಸ್ಥಾನ ಭಾಲ್ಕಿ ಅರ್ಪಿಸುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಗುರುನಾಥ ರಾಜಗೀರಾ ನೇತೃತ್ವದಲ್ಲಿ ವೀರಲೋಕ ಪುಸ್ತಕ ಸಂತೆ ಆಯೋಜಿಸಲಾಗುತ್ತಿದ್ದು ಎಲ್ಲ ರೀತಿಯ ಸಿದ್ಧತೆಗಳು ನಡೆಯುತ್ತಿವೆ.

ಸಮಾರಂಭದಲ್ಲಿ ಅನೇಕ ರಾಜ್ಯ ಮಟ್ಟದ ಸಾಹಿತಿಗಳು, ಚಿಂತಕರು, ಮೇಧಾವಿಗಳು ಆಗಮಿಸುತ್ತಿದ್ದು, ಇವರ ಸಮ್ಮುಖದಲ್ಲಿ ಬೀದರ ಜಿಲ್ಲೆಯ ಸಾಹಿತಿಗಳಿಗೆ ಅನುಕೂಲವಾಗಬೇಕೆನ್ನುವ ದೃಷ್ಟಿಯಿಂದ ಬಿಡುಗಡೆ ಯಾಗದೇ ಇರುವ ಕೃತಿಗಳು ಲೋಕಾರ್ಪಣೆ ಮಾಡಲು ನಿರ್ಣಯಿಸಲಾಗಿದೆ.

ಇಚ್ಛೆಯುಳ್ಳ ಹಾಗೂ ಇನ್ನೂ ಬಿಡುಗಡೆಯಾಗದೆ ಉಳಿದಿರುವ ಕೃತಿಗಳ ಕನಿಷ್ಠ 10 ಪ್ರತಿಗಳು ದಿನಾಂಕ 15. 01,2026 ರೊಳಗಾಗಿ ಕಾರ್ಯಾಲಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಭವನ ಲಾವಣ್ಯ ಫಂಕ್ಷನ್ ಹಾಲ್ ಚಿಕ್ಕಪೇಟೆ ಬೀದರ ಇಲ್ಲಿಗೆ ಸಲ್ಲಿಸಿದರೆ ಬಿಡುಗಡೆಗೆ ಅವಕಾಶ ಮಾಡಿ ಕೊಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 9242428179,9341652131 ಸಂಪರ್ಕಿಸಲು ಕೋರಲಾಗಿದೆ,



ಹುಣಸಗಿಯ ಆಶೀರ್ವಾದ ಗ್ಲೋಬಲ್ ಪದವಿ ಪೂರ್ವ ಕಾಲೇಜಿನಲ್ಲಿ ಸಂಸ್ಥೆಯ ಅಧ್ಯಕ್ಷರಾದ ವೀರಭದ್ರಗೌಡ ಪಾಟೀಲ ಮಲ್ಲಮ್ಮ ನುಡಿ ಪತ್ರಿಕೆ ಹಾಗೂ ಕ್ಯಾಲೆಂಡರ್ ಅನಾವರಣ ಮಾಡಿದರು.



ಕೆಂಭಾವಿ: ಪಟ್ಟಣದ ಶ್ರೀ ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಲ್ಲಮ್ಮ ನುಡಿ ಕ್ಯಾಲೆಂಡರ ಅನಾವರಣ ಮಾಡಲಾಯಿತು. ಸಂಸ್ಥೆಯ ಸಂಚಾಲಕ ಮೋಹನರಡ್ಡಿ ಡಿಗ್ಗಾವಿ ಹಾಗೂ ಶಾಲೆಯ ಶಿಕ್ಷಕ ಸಿಬ್ಬಂದಿ ಇದ್ದರು.

## ವಿ.ಪಕ್ಷ: ಕುತಂತ್ರದಿಂದ ಗೆಲುವು



**ಹುಣಸೂರು:** ವಿರೋಧಪಕ್ಷದವರು ಕುತಂತ್ರದಿಂದ ಗೆಲ್ಲುತ್ತಿದ್ದಾರೆ. ಎಲ್ಲೆಲ್ಲಿ ಮತಗಳ್ಳತನ ನಡೆಯುತ್ತಿದೆ ಅದನ್ನು ಪತ್ತೆ ಹಚ್ಚುವ ಕೆಲಸ ಮಾಡಬೇಕು. ಮಂಜಣ್ಣರವರು ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಸೋತಿದ್ದಾರೆ. ನೀವು ಮನಸ್ಸು ಮಾಡಿದ್ದರೆ ಗೆಲ್ಲಿಸಬಹುದಿತ್ತು ಎಂದು ರಾಜ್ಯಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ತಿಳಿಸಿದರು.

ತಾಲೂಕಿನ ವಿನೋಬಾಕಾಲೋನಿಯಲ್ಲಿ ತಾಲೂಕು ಬೋವಿ ಸಮಾಜದವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿ ಟೀಕೆ ಮಾಡುತ್ತಿದೆ.ನಾವು ದೊಡ್ಡ ಕೆಲಸವನ್ನು ಮಾಡಿ ಸಣ್ಣ ಪ್ರಚಾರವನ್ನು ತೆಗೆದುಕೊಳ್ಳುತ್ತಿದ್ದೇವೆ. ಬಿಜೆಪಿ ಸಣ್ಣ ಕೆಲಸ ಮಾಡಿ,ದೊಡ್ಡ ಪ್ರಚಾರವನ್ನು ತೆಗೆದುಕೊಳ್ಳುತ್ತಾರೆ.ಬಿಜೆಪಿ ,ಆರ್ ಎಸ್ ಎಸ್ ಬೈಠಕ್ ಗಳ ಮೂಲಕ ಸುಳ್ಳು ಪ್ರಚಾರವನ್ನು ಹರಡುತ್ತಿದ್ದಾರೆ ಎಂದರು.

## 40ನೇ ರಾಜ್ಯ ಪತ್ರಕರ್ತರ ಸಮ್ಮೇಳನ



**ಬೀದರ್:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಯೋಜಿಸುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಬೀದರ್ ನಲ್ಲಿ ನಡೆಸಲು ಬೀದರ್ ಪತ್ರಕರ್ತರ ಭವನದಲ್ಲಿ ರಾಜ್ಯ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅಧ್ಯಕ್ಷತೆಯಲ್ಲಿ ಭಾನುವಾರ

ನಡೆದ ಜಿಲ್ಲಾ ಕಾರ್ಯನಿರತ ಸಂಘದ ಸರ್ವಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ. ರಾಜ್ಯ ಸಮ್ಮೇಳನದ ಜವಾಬ್ದಾರಿ ಹೊತ್ತ ಬೀದರ್ ಜಿಲ್ಲಾ ಸಂಘಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ(ಕೆಯುಡಬ್ಲ್ಯೂಜೆ) ಅಭಿನಂದನೆಗಳನ್ನು ಸಲ್ಲಿಸಿದೆ. ಫೆಬ್ರವರಿ ಅಥವಾ ಮಾರ್ಚ್ ಮೊದಲ ವಾರದಲ್ಲಿ ಸಮ್ಮೇಳನ ಆಯೋಜನೆ ಮಾಡಲಾಗುವುದು ಎಂದು ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆನಂದ್ ದೇವಪ್ಪ ಅವರು ತಿಳಿಸಿದ್ದಾರೆ.

# ಸರ್ಕಾರ ಮಾಡಬೇಕಾದ ಕಾರ್ಯ ಧರ್ಮಸ್ಥಳದಿಂದ ನಿರ್ವಹಣೆ

- **ಪರಶುರಾಮ ಕರಣಂ, ಭಾಲ್ಕಿ**

ಸರ್ಕಾರ ಮಾಡಬೇಕಾದ ಕಾರ್ಯಗಳನ್ನು ಧರ್ಮಸ್ಥಳ ಸಂಸ್ಥೆ ಗ್ರಾಮಮಟ್ಟದಿಂದ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಜಿಲ್ಲಾ ನಿರ್ದೇಶಕ ಮುರಳೀಧರ ಎಚ್. ಎಲ್ ಅಭಿಪ್ರಾಯಪಟ್ಟರು. ಪಟ್ಟಣದ ಬಾಲಾಜಿ ಮಂದಿರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ (ರಿ) ವತಿಯಿಂದ ಮಕ್ಕಳಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸಂಸ್ಕಾರ ಬೆಳೆಸುವಲ್ಲಿ ಹೆತ್ತವರ ಪಾತ್ರದ ಕುರಿತು ತಾಲುಕು ಮಟ್ಟದ ಮಹಿಳಾ ವಿಚಾರ ಗೋಷ್ಠಿ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಉದ್ಘಾಟನೆ ಮಾಡಿ ಪ್ರಾಸ್ತಾವಿಕವಾಗಿ ಮಾತನಾಡಿದ ಬೀದರ ಜಿಲ್ಲೆಯ ನಿರ್ದೇಶಕರಾದ ಮುರುಳಿದರ್ ಎಚ್ ಎಲ್ ರವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬೀದರ ಜಿಲ್ಲೆಯಲ್ಲಿ ಈಗಾಗಲೇ 10 ವರ್ಷ ಪೂರೈಸಿದ್ದು ಅನೇಕ ಜನಪರ, ಸಮಾಜಕ್ಕೆ ಒಳಿತು ಮಾಡುವ ಕಾರ್ಯಕ್ರಮವನ್ನು ಮಾಡುತ್ತಾ ಬರುತ್ತಿದೆ. ನಿರ್ಗತಿಕರಿಗೆ ಮಾಸಾಶನ, ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯವೇತನ, ವಾತ್ಸಲ್ಯ ಮನೆ ನಿರ್ಮಾಣ, ಜ್ಞಾನ ವಿಕಾಸ ಕಾರ್ಯಕ್ರಮದ ಮೂಲಕ ಮಹಿಳೆಯರಿಗೆ ಆರೋಗ್ಯ, ಶುಚಿತ್ವ, ಕಾನೂನಿನ



ಅರಿವು, ಪೌಷ್ಟಿಕ ಆಹಾರ, ಕೌಟುಂಬಿಕ ಸಾಮರಸ್ಯದ ಕುರಿತು ತಿಳುವಳಿಕೆ, ಬ್ಯಾಂಕ್ ಮೂಲಕ ಸದಸ್ಯರಿಗೆ ಆರ್ಥಿಕ ನೆರವು ನೀಡುವ ಕುರಿತು ತಿಳಿಸಿದರು. ಅಧ್ಯಕ್ಷತೆ ವಹಿಸಿಕೊಂಡ ತಳವಾಡೆ ಆಸ್ಪತ್ರೆಯ ವೈದ್ಯರಾದ ಡಾ. ಶೈಲಜಾ ತಳವಾಡೆರವರು ಮಹಿಳೆಯರಲ್ಲಿ ಕಂಡು ಬರುವ ಗರ್ಭ ಕೋಶದ ಮತ್ತು ಸ್ತನ ಕ್ಯಾನ್ಸರ್ ಹೇಗೆ ಬರುತ್ತದೆ ಪರಿಹಾರ ಹೇಗೆ ಕಂಡುಕೊಳ್ಳುವುದು ಮತ್ತು ಮುಂಜಾಗ್ರತಾ ಕ್ರಮವಾಗಿ ಏನು ಮಾಡಬೇಕು. ಮುಂಜಾಗ್ರತಾ ಕ್ರಮವಾಗಿ ವ್ಯಾಕ್ಸಿನ್ ಹಾಕಿಸಿಕೊಳ್ಳುವಂತೆ ಮಾಹಿತಿ ನೀಡಿದರು.

ಪೊಲೀಸ್ ಇಲಾಖೆಯ ಎ ಎಸ್ ಐ ನಾಗೇಶ್ವರಿ ಕೊಳ್ಳೆರವರು ಮಾತನಾಡಿ ಮಹಿಳೆಯರ ಕಾನೂನು, ಸೈಬರ್ ಕ್ರೈಮ್, ಮಕ್ಕಳು ಮೊಬೈಲ್ ಬಳಕೆ ಮಾಡದಂತೆ ಮತ್ತು ಮೊಬೈಲ್ ಬಳಕೆಯ ದುರುಪಯೋಗದ ಬಗ್ಗೆ ಹಾಗು ಮಹಿಳೆಯರಿಗೆ ಯಾವುದೇ ತೊಂದರೆ ಆದಲ್ಲಿ ಪೊಲೀಸ್ ಸಹಾಯವಾಣಿ ಸಂಖ್ಯೆ 100 & 112 ಕರೆ ಮಾಡುವ ಕುರಿತು ಮಾಹಿತಿ ನೀಡಿದರು.

ಕಾರ್ಯ ಕ್ರಮದ ಸಂಪನ್ಮೂಲ ವ್ಯಕ್ತಿಯಾದ ರೇಖಾ ಜೊತೆಪ್ಪ ಮಹಾಜನ್ ಮಾತನಾಡಿ ಮಕ್ಕಳಲ್ಲಿ ಸಂಸ್ಕಾರ ಬೆಳೆಸುವಲ್ಲಿ ಹೆತ್ತವರು ಮಕ್ಕಳಿಗೆ ನೈತಿಕ ಶಿಕ್ಷಣ ನೀಡುವ ಜೊತೆಗೆ ಮಾನವೀಯ ಮೌಲ್ಯವನ್ನು, ಹಿರಿಯರ ಗೌರವಿಸುವುದನ್ನು ಕಲಿಸಬೇಕು.

> ಮಹಿಳೆಯರು ಆರ್ಥಿಕವಾಗಿ ಸದೃಢರಾಗಲು ಧರ್ಮಸ್ಥಳದ ಪ್ರತಿಯೊಂದು ಯೋಜನೆಗಳು ಅತ್ಯುತ್ತಮವಾಗಿವೆ. ಧರ್ಮದ ತಳಾದಿಯ ಮೇಲೆ ಆರ್ಥಿಕ ಸಬಲೀಕರಣದ ಮೂಲಕ ಬದುಕು ಕಟ್ಟಿಕೊಳ್ಳುವುದು ಶ್ರೇಷ್ಠ ಸಾಧನೆ. ಡಿ. ವೀರೇಂದ್ರ ಹೆಗಡೆಯವರ ದೂರದರ್ಶಿತ್ವ, ಸಂಘಟನಾ ಚತುರತೆ ಮತ್ತು ನಾಯಕತ್ವ ಗುಣಗಳೇ ಕಾರಣ.
>
> –ಮುರಳಿದರ ಎಚ್ .ಎಲ್.
> ಧರ್ಮಸ್ಥಳ ಸಂಸ್ಥೆ ಜಿಲ್ಲಾ ನಿರ್ದೇಶಕ

ಸಮಾಜಕ್ಕೆ ಒಳ್ಳೆಯ ಕೊಡುಗೆಯನ್ನು ಕೊಡುವುದು ಮಕ್ಕಳ ಕರ್ತವ್ಯ ಎನ್ನುವ ಬಾವನೆ ಮಕ್ಕಳಲ್ಲಿ ಮೂಡಿಸುವಂತ ಶಿಕ್ಷಣ ನೀಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸೋಮನಾಥಪ್ಪ ಅಷ್ಟುರೆ, ಜ್ಞಾನ ವಿಕಾಸ ಯೋಜನಾಧಿಕಾರಿ ಜ್ಯೋತಿ ಜೋಳದ, ಕೇಂದ್ರ ಕಛೇರಿಯ ಯೋಜನಾಧಿಕಾರಿ ಹರೀಶ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ, ಸುಜಾತ, ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು, ಕಛೇರಿ ಸಿಬ್ಬಂದಿಗಳ 25 ಜ್ಞಾನ ವಿಕಾಸ ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು, ದೀಪಕ್ ಥಮಕೆ ನಿರೂಪಿಸಿದರು .ತಾಲುಕು ಯೋಜನಾಧಿಕಾರಿ ಸಂತೋಷ್ ಟಿ ಎನ್ ಸ್ವಾಗತಿಸಿ, ಶಿವಾನಂದ

## ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿ, ಪೊಲೀಸರೊಂದಿಗೆ ಸಮಾಲೋಚನೆ



- **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಪೊಲಿಸ್ ಠಾಣೆಗೆ ನೂತನ ರಾಯಚೂರು ಜಿಲ್ಲಾ ಪೊಲಿಸ್ ವರಿಷ್ಠಾಧಿಕಾರಿ ಅರುಣಾಂಶಗಿರಿ ಬೇಟಿ ನೀಡಿ, ಪೊಲೀಸರೊಂದಿಗೆ ಶನಿವಾರ ಸಮಾಲೋಚನೆ ನಡೆಸಿದರು.

ಜಿಲ್ಲೆಗೆ ನೂತನವಾಗಿ ಕಳೆದ 1 ವಾರದ ಹಿಂದೆ ಆಗಮಿಸಿದ ಜಿಲ್ಲಾ ಪೊಲಿಸ್ ವರಿಷ್ಠಾಧಿಕಾರಿ ಅರುಣಾಂಶಗಿರಿ ಜಿಲ್ಲೆಯ ಆಯಾ ಠಾಣೆಗಳ ಪೊಲಿಸ್ ಕರ್ತವ್ಯಗಳ ಕುರಿತು ಕೆಲವು ಕಾಲ ಸಮಾಲೋಚನೆ ನಡೆಸಿದರು. ನೂತನ ಜಿಲ್ಲಾಧಿಕಾರಿಯವರಿಗೆ ಗೌರವ ರಕ್ಷಣೆ ನೀಡಿದರು. ನೂತನ ಮಸ್ಕಿ ಸಿಪಿಐ ರಾಮಣ್ಣ ಜಲಗೇರಿ ಅವರಿಗೆ ಸ್ಥಳೀಯ ಸಂಘಟನೆಯವರಿಂದ ಹಾಗೂ ಶಿಲ್ಪಿ ಕೆತ್ತನೆಯವರಿಂದ ಸನ್ಮಾನಿಸಿ ಗೌರವಿಸಲಾಯಿತು.

ಪಿಎಸ್ಐ ವೆಂಕಟೇಶ ಮಾಡಗಿರಿ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಇದ್ದರು.

## 3ನೇ ಹಂತದ ಗೋಲ್ಡನ್ ಸ್ಕಾಲರ್‌ಶಿಪ್ ಪರೀಕ್ಷೆ

- **ಪರುಶುರಾಮ ಕರಣಂ ಭಾಲ್ಕಿ**

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಭಾನುವಾರ ನಡೆದ ಗುರುಕುಲ ಗೋಲ್ಡನ್ ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆಗೆ 1959 ವಿದ್ಯಾರ್ಥಿಗಳು ಹಾಜರಾಗಿದ್ದರು.

ರಾಜ್ಯದ ಸುಮಾರು 25 ಜಿಲ್ಲೆಗಳು ಸೇರಿ ನೆರೆಯ ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರಸ್ತುತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಈ ಬಾರಿ ಕರ್ನಾಟಕದ ಉಡುಪಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆದದ್ದು ವಿಶೇಷವಾಗಿತ್ತು.

ಬರುವ ಜ.18 ಮತ್ತು 25 ರಂದು ಇನ್ನು ಎರಡು ಹಂತದ ಪರೀಕ್ಷೆ ನಡೆಯಲಿವೆ. ಉತ್ತಮ ರ್‍ಯಾಂಕ್ ಪಡೆಯುವ 100 ಮಕ್ಕಳಿಗೆ ಉಚಿತ ಶಿಕ್ಷಣ, ಫೀ ನಲ್ಲಿ ರಿಯಾಯಿತಿ ಸಿಗಲಿದೆ. ಮೊದಲ 25 ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ಎರಡು ವರ್ಷ ಉಚಿತ ಪಿಯುಸಿ ಶಿಕ್ಷಣ, ಪ್ರಸಾದ, ವಸತಿ ಮತ್ತು ಕೋಚಿಂಗ್ ಸೌಲಭ್ಯ ಸಿಗಲಿದೆ.

ನಂತರದ 75 ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ಫೀ ನಲ್ಲಿ ಶೇ.50ರಷ್ಟು ರಿಯಾಯಿತಿ ಸಿಗಲಿದೆ ಎಂದು



ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

**ಶುಭ ಕೋರಿದ ಪೂಜ್ಯರು:** ವಿವಿಧ ಕೋಣೆಗಳಲ್ಲಿ ನಡೆ–ಯುತ್ತಿದ್ದ ಪರೀಕ್ಷೆಕೇಂದ್ರಕ್ಕೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಮಹಾಲಿಂಗ ಸ್ವಾಮೀಜಿ ಭೇಟಿ ನೀಡಿ ಮಕ್ಕಳನ್ನು ಭೇಟಿಯಾಗಿ ಧೈರ್ಯ ತುಂಬಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವಂತೆ ಶುಭ ಕೋರಿದರು.

> ಗಡಿಭಾಗದ ಬಡ ಪ್ರತಿಭಾವಂತ 100 ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಡಾ.ಬಸವಲಿಂಗಪಟ್ಟದ್ದೇವರು, ಗುರುಬಸವ ಪಟ್ಟದ್ದೇವರ ಮಾರ್ಗದರ್ಶನದಲ್ಲಿ ಸ್ಕಾಲರ್‌ಶಿಪ್ ಯೋಜನೆ ರೂಪಿಸಿದ್ದೇವೆ.
>
> 
>
> –ಮೋಹನ ರೆಡ್ಡಿ, ಆಡಳಿತಾಧಿಕಾರಿ
> ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಭಾಲ್ಕಿ

# ಸ್ವಚ್ಛತೆಗೆ ಮಹಿಳಾ ಮುಖ್ಯಾಧಿಕಾರಿ ವನಿತಾಬಾಯಿ ಪಣ

- **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್**

ನಗರವನ್ನು ಸ್ವಚ್ಛ, ಸುಂದರ ಹಾಗೂ ಆರೋಗ್ಯಕರವಾಗಿರಿಸಲು ಮಹಿಳಾ ಮುಖ್ಯಾಧಿಕಾರಿ ವನಿತಾಬಾಯಿ ಅವರು ಕಠಿಣ ನಿರ್ಧಾರ ಕೈಗೊಂಡಿದ್ದಾರೆ. ಗ್ರಾಮ ದೇವರಾದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಅಮಗವಾಗಿ, ನಗರವನ್ನು ಸ್ವಚ್ಛವಾಗಿಡಲು ಜಿಲ್ಲಾಧಿಕಾರಿಗಳು, ಹಾಗೂ ಕ್ಷೇತ್ರದ ಜನಪ್ರತಿನಿಧಿಗಳು ಸೂಚಿಸಿದ್ದಾರೆ ಈ ನಿಟ್ಟಿನಲ್ಲಿ ನಗರ ಸ್ವಚ್ಛತೆ ವಿಷಯದಲ್ಲಿ ಯಾವುದೇ ರೀತಿಯ ಅಲಕ್ಷ್ಯ ಸಹಿಸುವುದಿಲ್ಲ ಎಂದು ಮುಖ್ಯಾಧಿಕಾರಿ ವನಿತಾಬಾಯಿ ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಎಂಬ ಮಾಹಿತಿ ಸಿಕ್ಕಿದೆ.

ಬೆಳ್ಳಂಬೆಳಗ್ಗೆ ಸ್ವತಹ ಮುಖ್ಯಾಧಿಕಾರಿಗಳು ನಗರದ ಪ್ರಮುಖ ರಸ್ತೆಗಳು, ವಾರ್ಡ್‌ಗಳು, ಮಾರುಕಟ್ಟೆ ಸುತ್ತಾಡಿ. ಅಲ್ಲಿನ ಸಮಸ್ಯೆಗಳನ್ನು ಪರಿಶೀಲನೆ ಮಾಡಿದರು. ಇತರೆ ಪ್ರದೇಶಗಳು ಹಾಗೂ



ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿದಿನ ಸಮರ್ಪಕ ಸ್ವಚ್ಛತೆ ಕಾರ್ಯ ನಡೆಯುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಕಸ ವಿಂಗಡಣೆ, ತ್ಯಾಜ್ಯ ನಿರ್ವಹಣೆ, ನಿಗದಿತ ಸಮಯಕ್ಕೆ ಕಸ ಸಂಗ್ರಹಣೆ ಹಾಗೂ ಸ್ವಚ್ಛತಾ ಸಿಬ್ಬಂದಿಯ ಹಾಜರಾತಿಗೆ ವಿಶೇಷ ಗಮನ ನೀಡಲಾಗುತ್ತಿದೆ.

"ಸ್ವಚ್ಛತೆ ಕೇವಲ ಆಡಳಿತದ ಹೊಣೆಗಾರಿಕೆ ಮಾತ್ರವಲ್ಲ, ಸಾರ್ವಜನಿಕರ ಸಹಭಾಗಿತ್ವವೂ ಅಗತ್ಯ. ನಾಗರಿಕರು ಕಸವನ್ನು ಎಲ್ಲೆಂದರಲ್ಲಿ ಎಸೆಯದೆ ಸಹಕರಿಸಬೇಕು" ಎಂದು ವನಿತಾಬಾಯಿ ಅವರು ಮನವಿ ಮಾಡಿದ್ದಾರೆ.

ಸ್ವಚ್ಛತೆ ಕಾರ್ಯದಲ್ಲಿ ನಿರ್ಲಕ್ಷ್ಯ ವಹಿಸುವ ಸಿಬ್ಬಂದಿ ಮತ್ತು ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿರುವ ಅವರು, ಹುಮನಾಬಾದ್ ನಗರವನ್ನು ಮಾದರಿ ಸ್ವಚ್ಛ ನಗರವನ್ನಾಗಿಸುವ ಗುರಿ ಹೊಂದಿದ್ದಾರೆ.

ನಗರದ ಸ್ವಚ್ಛತೆಗೆ ಮಹಿಳಾ ಮುಖ್ಯಾಧಿಕಾರಿ ವನಿತಾಬಾಯಿ ಅವರ ಈ ಪಣಕ್ಕೆ ಸಾರ್ವಜನಿಕ ವಲಯದಲ್ಲಿ ಪ್ರಶಂಸೆ ವ್ಯಕ್ತವಾಗುತ್ತಿದೆ.

# ಇನ್ನೊಂದು ಸ್ಮಾರಕ ನಿರ್ಮಾಣ ರಾಯರಡ್ಡಿ ಹೇಳಿಕೆ ಖಂಡನೀಯ

- **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಭಾಷಣದ ವೇಳೆ ಶಾಸಕ ಬಸವರಾಜ್ ರಾಯರಡ್ಡಿಯಿಂದ ಈಗ ಉದ್ಘಾಟನೆ ಮಾಡಿದ ಸ್ಮಾರಕದ ಪಕ್ಕದಲ್ಲಿ ನಮ್ಮದೇ ಆದ ಇನ್ನೊಂದು ದೊಡ್ಡ ಸ್ಮಾರಕ ನಿರ್ಮಿಸಿ ಎಂಬ ಮಾತು ಅವರಿಗೆ ಶೋಭೆಯಲ್ಲ ಈ ಮಾತು ಖಂಡನೀಯ ಎಂದು ಗ್ರಾಮ ಪಂಚಾಯತ ಅಧ್ಯಕ್ಷ ಹಾಗೂ ಮಾಜಿ ಸೈನಿಕ ನಾಗರಾಜ.ವೆಂ.ವೆಂಕಟಾಪೂರ ಆರೋಪ.





ತಾಲೂಕಿನ ಬನ್ನಿಕೊಪ್ಪ ಗ್ರಾಮದಲ್ಲಿ ಶನಿವಾರ ಗ್ರಾಮ ಪಂಚಾಯಿತಿಯ 15 ನೇ ಹಣಕಾಸಿನ ಅನುಧಾನ ಹಾಗೂ ಜನರ ಸಹಕಾರದಿಂದ ನಿರ್ಮಿತವಾದ "ಸ್ವಾತಂತ್ರ್ಯ ಹೋರಾಟಗಾರರ, ಸೈನಿಕರ ಹಾಗೂ ರೈತರ ಸ್ಮಾರಕ" ಉದ್ಘಾಟಿಸಿ ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರಡ್ಡಿ ಅವರು ಮಾತಿನ ಭರದಲ್ಲಿ ಜಿ.ಪಂ. ಮಾಜಿ ಉಪಾಧ್ಯಕ್ಷರಾದ ಯಂಕಣ್ಣ ಯಾರಾಶಿ ಅವರಿಗೆ ಇದಕ್ಕಿಂತ ದೊಡ್ಡದು ಇನ್ನೊಂದು ಸ್ಮಾರಕ ನೀವೂ ಕಟ್ಟಿರಿ ಎಂದಿರುವುದು ನೋವಿನ ಸಂಗತಿ ಹಾಗೂ ಇದು ಅವರಿಗೆ ಶೋಭೆ ತರುವಂತ ಮಾತಲ್ಲ ಎಂದು ಬನ್ನಿಕೊಪ್ಪ ಗ್ರಾಪಂ ಅಧ್ಯಕ್ಷ ಹಾಗೂ ಮಾಜಿ ಸೈನಿಕ ನಾಗರಾಜ ವೆಂಕಟಾಪೂರ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕೆ ಹೇಳಿಕೆ ನೀಡಿರುವ ಅವರು, ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರಡ್ಡಿ ಅವರು ಸ್ಮಾರಕದಲ್ಲಿ ಮಹಾತ್ಮಾ ಗಾಂಧೀಜಿ ಫೋಟೊ ಹಾಕಬೇಕು ಎಂದು ಸಲಹೆ ನೀಡಿದರು, ಅದನ್ನು ಸ್ವಾಗತಿಸುತ್ತೇವೆ ಹಾಗೂ ಸ್ಮಾರಕ ಉದ್ಘಾಟನೆ ಇನ್ನೂ ಅರ್ಥಗರ್ಭಿತವಾಗಿ ಮಾಡಬಹುದಿತ್ತು ಎಂದು ಸಲಹೆ ನೀಡಿದರು ಆ ಮಾತನ್ನು ಸಹ ಸ್ವಾಗತಿಸುತ್ತೇವೆ. ಆದರೆ ಮಾತಿನ ಭರದಲ್ಲಿ ಈಗ ಕಟ್ಟಿರುವ ಸ್ವಾತಂತ್ರ್ಯ ಹೋರಾಟಗಾರರ, ಸೈನಿಕರ ಹಾಗೂ ರೈತರ ಸ್ಮಾರಕಕ್ಕಿಂತ ಅದಕ್ಕೆ ಪರ್ಯಾಯವಾಗಿ ದೊಡ್ಡದು ಕಟ್ಟಿ ಎಂದು ಹೇಳಿರುವ ಹೇಳಿಕೆ ಗ್ರಾಮಸ್ಥರಿಗೆ ನೆರೆದವರಿಗೆ ಇರುಸು–ಮುರುಸು ಉಂಟು ಮಾಡಿತು. ಈ ಮಾತು ರಾಯರಡ್ಡಿಯವರಿಗೆ ಶೋಭೆಯಲ್ಲ ಇದನ್ನು ನಾವು ಖಂಡಿಸುತ್ತೇವೆ ಎಂದು ಹೇಳಿದ್ದಾರೆ. ಇದು ರಾಯರಡ್ಡಿಯವರ ಒಡೆದು ಆಳುವ ನೀತಿ ಹಾಗೂ ಸ್ವಾತಂತ್ರ್ಯ ಬಂದು 78 ವರ್ಷಗಳೇ ಕಳೆದರೂ ಹೋರಾಟಗಾರರನ್ನು, ಸೈನಿಕರನ್ನು ಹಾಗೂ ರೈತರನ್ನು ಯಾರೂ ಸ್ಮರಿಸಿಕೊಂಡಿಲ್ಲ, ಊರಿನ ಇತಿಹಾಸ ತಿಳಿಯದ ಯುವಕರಿಗೆ ಮತ್ತು ಮಕ್ಕಳಿಗೆ ಕಲ್ಲಿನಲ್ಲಿ ಕೆತ್ತಿದ ಬನ್ನಿಕೊಪ್ಪದ ಇತಿಹಾಸ ಪ್ರೇರಕ ಶಕ್ತಿಯಾಗಲಿದೆ. ಊರಿನ ಅಭಿಮಾನ, ದೇಶ ಭಕ್ತಿಯ ಕೆಲಸ ಮಾಡಿ ಊರಿನ ಹಿರಿಮೆ ಹೆಚ್ಚಿಸಿದವರಿಗೆ ಇವರು ಟೀಕೆ ಮಾಡುವುದೇ ಆಯಿತು, ಶಾಸಕರಾಗಿ ಒಂದೇ ಒಂದು ಮನೆಯನ್ನು ನೀಡಿಲ್ಲ, ರಸ್ತೆ ಮಾಡಿಸಿಲ್ಲ, ಅವರ ಸ್ವಗ್ರಾಮ ತಳಕಲ್ಲ ಅಭಿವೃದ್ಧಿ ಮಾಡಿದಂತೆ ಒಂದೇ ಒಂದು ಅಭಿವೃದ್ಧಿ ಕಾಮಗಾರಿ ಈ ಊರಲ್ಲಿ ಮಾಡಿಲ್ಲ, ಯಾವುದೇ ಅನುದಾನ ನೀಡಿಲ್ಲ ಈ ಮಲತಾಯಿ ಧೋರಣೆ ಏಕೆ? ಎಂದು ಜನರು ಮಾತನಾಡುತ್ತಿದ್ದದ್ದು ಕಂಡು ಬಂದಿತು.

# ಪತ್ರಿಕೋದ್ಯಮದ ಗಟ್ಟಿ ಧ್ವನಿ ಮೌನ

- **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಪತ್ರಿಕೋದ್ಯಮವೆಂದರೆ ಕೇವಲ ಸುದ್ದಿ ಬರೆಯುವುದಲ್ಲ, ಅದು ಸಮಾಜದ ನೋವು ನಲಿವುಗಳನ್ನು ಧ್ವನಿಯಾಗಿ ಹೊರತರುವ ಜವಾಬ್ದಾರಿ. ಅಂತಹ ಜವಾಬ್ದಾರಿಯನ್ನು ಜೀವನಪೂರ್ತಿ ನಿಷ್ಠೆಯಿಂದ ಹೊತ್ತು ನಡೆದ, ಗಟ್ಟಿ ಧ್ವನಿಯ ಆದರೆ ಮೃದು ಹೃದಯದ ಪತ್ರಕರ್ತ ನಾಗಶೆಟ್ಟಿ ಧರಂಪುರ್ ಸರ್ ಅವರ ಅಗಲಿಕೆ ಬೀದರ್ ಜಿಲ್ಲೆಯ ಪತ್ರಿಕಾರಂಗಕ್ಕೆ ತುಂಬಲಾಗದ ನಷ್ಟವಾಗಿದೆ.

ನಾನು ಕೊನೆವರೆಗೂ ಪತ್ರಕರ್ತನಾಗಿಯೇ ಇರುತ್ತೇನೆ ಒಂದು ಕಪ್ಪು ಚುಕ್ಕೆಯೂ ತರದೇ ಮಾದರಿ ಪತ್ರಕರ್ತನಾಗಿಯೇ ಸಾಯುತ್ತೇನೆ ಎಂಬ ಅವರು ಹೇಳುತ್ತಿದ್ದ ಮಾತು, ಇವತ್ತು ಅವರ ಬದುಕಿನ ಸಾರವಾಗಿ ಕಣ್ಣೆದುರು ನಿಲ್ಲುತ್ತದೆ. ಬದುಕಿನಲ್ಲಿ ಐಶಾರಾಮಿ ಕನಸುಗಳ ಹಿಂದೆ ಓಡದೇ, ಸಮಾಜದಲ್ಲಿ ಒಳ್ಳೆಯ ಪತ್ರಕರ್ತನೆಂಬ ಗುರುತು ಸಾಕು ಎಂದು ಬದುಕಿದ ಅಪರೂಪದ ವ್ಯಕ್ತಿತ್ವ ಅವರು.

**ಯುವ ಪತ್ರಕರ್ತರಿಗೆ ಮಾರ್ಗದರ್ಶಕ:** ನಾಗಶೆಟ್ಟಿ ಧರಂಪುರ್ ಸರ್ ಎಂದರೆ ಯುವ ಪತ್ರಕರ್ತರಿಗೆ ಧೈರ್ಯ, ಸುದ್ದಿ ಹೇಗೆ ಬರೆಯಬೇಕು, ಪ್ರಶ್ನೆ ಹೇಗೆ ಕೇಳಬೇಕು, ನಿಜವನ್ನು ಅಂಜದೇ ಹೇಗೆ ಹೇಳಬೇಕು ಎಂಬ ಪಾಠವನ್ನು ಮಾತಿನಲ್ಲಿಯೇ ಕಲಿಸಿದ ಗುರು. ಪತ್ರಿಕಾಗೋಷ್ಠಿಗಳಲ್ಲಿ ಅವರು ಕೇಳುತ್ತಿದ್ದ ಪ್ರಶ್ನೆಗಳು ನೇರವಾಗಿದ್ದವು, ಅರ್ಥಪೂರ್ಣವಾಗಿದ್ದವು, ಅಂಜಿಕೆಯಿಲ್ಲದಿದ್ದವು. ಅದಕ್ಕೇ ಅವರ ಪ್ರಶ್ನೆ ಕೇಳಿದಾಗಲೇ ಅಧಿಕಾರಿಗಳೂ ಎಚ್ಚರಗೊಳ್ಳುತ್ತಿದ್ದರು.

**ವಿಭಿನ್ನ ವ್ಯಕ್ತಿತ್ವ, ವಿಭಿನ್ನ ಗುರುತು:** ರಂಗು ರಂಗಿನ ಬಟ್ಟೆ, ಜೇಬಿಗೆ ಎರಡು ಕಿಸೆ, ಅಂಗಿಯ ಭುಜದ ಮೇಲೆ ಎರಡು ಪಟ್ಟಿ, ಕೊರಳಲ್ಲಿ ಸದಾ ಪ್ರೆಸ್ ಕಾರ್ಡ್ ಪಟ್ಟಿ, ಕೈಯಲ್ಲಿ ಖಡ್ಗ, ಗಟ್ಟಿ ಧ್ವನಿಯಲ್ಲಿ ಮಾತನಾಡುವ ರೂಡಿ... ದೂರದಿಂದಲೇ ನಾಗಶೆಟ್ಟಿ ಸರ್ ಬಂದಿದ್ದಾರೆ, ಎಂದು ಗುರುತಿಸುವಂತಹ ವಿಭಿನ್ನ ಶೈಲಿ ಅವರದ್ದಾಗಿತ್ತು. ಜಿಲ್ಲೆಯಲ್ಲಿ ಯಾವುದೇ ಕಾರ್ಯಕ್ರಮ ಇರಲಿ ಅಲ್ಲಿ ಹಾಜರಾಗಿ ಸುದ್ದಿ ತರುವ ವ್ಯಕ್ತಿಯಾಗಿದ್ದರು, ಸದಾ ಲವಲವಿಕೆಯಿಂದ ತಿರುಗಾಡುವ, ಸಮಯಕ್ಕೆ ಅಪಾರ ಮೌಲ್ಯ ಕೊಡುವ ಶಿಸ್ತಿನ ಸಿಪಾಯಿ ಅವರು.



**ಅಪಾರ ಜ್ಞಾನ, ಅಚ್ಚರಿಯ ಸ್ಮರಣಶಕ್ತಿ:** ಬೀದರ್ ಜಿಲ್ಲೆಯ ಸಂಪೂರ್ಣ ಇತಿಹಾಸವೇ ಅವರ ನೆನಪಿನಲ್ಲಿ ನೆಲೆಸಿತ್ತು. ಯಾರು ಏನೇ ಕೇಳಿದರು, ತಟ್ಟನೆ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಊರು, ಕೇರಿ ಎಲ್ಲವನ್ನೂ ನಿರರ್ಗಳವಾಗಿ ಹೇಳುತ್ತಿದ್ದ ಅವರ ಸ್ಮರಣಶಕ್ತಿ ಅಚ್ಚರಿ ಮೂಡಿಸುವಂತಿತ್ತು. ಜಿಲ್ಲೆಯ ಪ್ರತಿಯೊಂದು ರಂಗದಲ್ಲಿರುವ ನಾಯಕರು, ಹೋರಾಟಗಾರರು, ಸಾಹಿತಿಗಳು, ರಾಜಕೀಯ ಗಣ್ಯರು ಅವರನ್ನು ಗೌರವದಿಂದ ಗುರುತಿಸುತ್ತಿದ್ದರು.

**ಸರಳತೆ, ಸಜ್ಜನಿಕೆ, ಸಹೃದಯತೆ:** ಅವರು ಯಾವಾಗಲೂ ಇನ್ನೊಬ್ಬರ ಒಳಿತನ್ನೇ ಬಯಸುವ ಶ್ರಮಜೀವಿ. ಗೆಳೆಯರು ಪ್ರೀತಿಯಿಂದ...ನಮ್ಮ ಹುಲಿ ಬಂತು.. ಎಂದು ಹೇಳಿಕೊಳ್ಳುತ್ತಿದ್ದಷ್ಟು ಅವರ ಹಾಜರಾತಿಯೇ ಉತ್ಸಾಹ ತುಂಬುತ್ತಿತ್ತು. ದಿನನಿತ್ಯ ಯರನ್ನಳ್ಳಿ ಹೋಟೆಲಿನಲ್ಲಿ ಎಲ್ಲರೊಂದಿಗೆ ನಯ ವಿನಯದಿಂದ ಮಾತನಾಡುತ್ತಿದ್ದ ಅವರು, ಇವತ್ತು ಅಲ್ಲಿಲ್ಲ ಎನ್ನುವ ಸತ್ಯವನ್ನು ನಂಬಲಾಗದೇ, ಅಲ್ಲಿ ನಿತ್ಯ ಬರುವವರ ಕಣ್ಣುಗಳು ನೀರಿನಿಂದ ತುಂಬುತ್ತಿವೆ.

**ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಬದುಕು:** ಪತ್ರಿಕೋದ್ಯಮದ ಜೊತೆಗೆ ಅವರು ಆಧ್ಯಾತ್ಮಿಕ, ಧಾರ್ಮಿಕ ಬದುಕನ್ನೂ ಆತ್ಮಸಾತ್ ಮಾಡಿಕೊಂಡವರು. ಚೌಬಾರದ ಮಡಿವಾಳೇಶ್ವರ ಮಂದಿರದಲ್ಲಿ ಶ್ರಾವಣ ಮಾಸದಲ್ಲಿ ಭಕ್ತಿಯಿಂದ ಭಜನೆ ನಡೆಸುವುದು, ಜಿಲ್ಲೆಯ ಎಲ್ಲೆಡೆಯ ಗೆಳೆಯರನ್ನು ಕರೆದು ಭಾಗವಹಿಸುವಂತೆ ಮಾಡುವ ಗುಣ ಅವರದ್ದಾಗಿತ್ತು. ಸ್ವತಃ ಹಾಡುತ್ತಾ, ಎಲ್ಲರನ್ನೂ ಒಗ್ಗೂಡಿಸುತ್ತಿದ್ದ ಅವರ ಭಜನೆಗಳು ನೆನಪಾಗಿ ಉಳಿಯುತ್ತವೆ.

**ನಿರೂಪಕ, ಬರಹಗಾರ, ಸಂಪಾದಕ:** ಚೌಬಾರದ ಗಣೇಶ ಉತ್ಸವದಲ್ಲಿ ಅವರ ನಿರೂಪಣೆ ಎಂದರೆ ಜನರು ಮಂತ್ರಮುಗ್ಧರಾಗಿ ನೋಡುವ ಕ್ಷಣ. ಉತ್ತಮ ವಾಗ್ಮಿಯಾಗಿದ್ದ ಅವರು, ಕ್ರಾಂತಿ ಭೂಮಿ, ಶರಣರ ಭೂಮಿ ಪತ್ರಿಕೆಯ ಸಂಪಾದಕರಾಗಿ, ಜೊತೆಗೆ ದೀರ್ಘ ಕಾಲ ಉತ್ತರ ಕರ್ನಾಟಕ ದಿನ ಪತ್ರಿಕೆ, ದುರ್ಗಾ ನ್ಯೂಸ್ ಟಿವಿ ಚಾನಲ್, ಕದಂಬ ನ್ಯೂಸ್ ಟಿವಿ ಚಾನಲನಲ್ಲಿ ಮುಖ್ಯ ವರದಿಗಾರರಾಗಿ, ಪತ್ರಿಕಾಸೇವೆ ಸಲ್ಲಿಸಿದರು. ಯಾವುದೇ ವಿಷಯವಾಗಲಿ, ಲೇಟರ್ ಬರೆಯುವ ಶೈಲಿ ಅರ್ಥಪೂರ್ಣ, ಗಂಭೀರ ಮತ್ತು ವಿಭಿನ್ನವಾಗಿರುತ್ತಿತ್ತು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)